ವಾಸ್ಕೋ ಡ ಗಾಮಾನ ಮೊದಲ ಸಮುದ್ರಯಾನದ ದಿನಚರಿ

1497-1499

ಅನುವಾದ ಮತ್ತು ಸಂಪಾದನೆ

ಟಿಪ್ಪಣಿ, ಪರಿಚಯ ಮತ್ತು ಅನುಬಂಧಗಳೊಂದಿಗೆ

ಇ. ಜಿ. ರೇವನ್ ಸ್ಟೇನ್, ಎಫ್. ಆರ್.ಜಿ. ಎಸ್.

ಸದಸ್ಯರು, ಜಿಯೋಗ್ರಾಫಿಕಲ್ ಸೊಸೈಟಿ ಆಫ್ ಲಿಸ್ಬನ್ ಪತ್ರವ್ಯವಹಾರ

ಲಂಡನ್

ಹ್ಯಾಕ್ಲ್ಯೂಟ್‌ಗಾಗಿ ಮುದ್ರಿಸಲ್ಪಟ್ಟಿದೆ **(1898)**

(ಚಿತ್ರ: ಸೆನ್ಯೋರ್ ಕಮಾಂಚೋ)

ಈಗ ಲಿಸ್ಬನ್ ನ ಜಿಯೋಗ್ರಾಫಿಕಲ್ ಸೊಸೈಟಿಯ ಹಾಲ್ ಆಫ್ ಆನರ್ಸ್‌ನಲ್ಲಿರುವ ಈ ಭಾವಚಿತ್ರವನ್ನು ಕೋಂಡೆ ದೆ ವಿದಿಗ್ವೇರಾ ಅವರು ಪೋರ್ಚುಗಲ್ ನ ಮಹಾರಾಜ ಡೋಮ್ ಕಾರ್ಲೋಸ್ ಅವರಿಗೆ ಉಡುಗೊರೆಯಾಗಿ ನೀಡಿದ್ದರು.

ಕೊಲ್ಲಿಯಾಚೆಗೆ – ಅರೇಬಿಯನ್ ಸಮುದ್ರ

ನಾವು ಏಪ್ರಿಲ್ ತಿಂಗಳ 24 ನೇ ತಾರೀಖು ಮಂಗಳವಾರದಂದು ಮಲೀಂಡಿಯಿಂದ ರಾಜನು ನಮಗೆ ಒದಗಿಸಿಕೊಟ್ಟ ಹಡಗಿನ ಚಾಲಕನೊಂದಿಗೆ ಕ್ಯಾಲಿಕಟ್ (Qualecut) ಎಂಬ ನಗರಕ್ಕೆ ಪ್ರಯಾಣ ಹೊರಟೆವು. ಅಲ್ಲಿನ ಕರಾವಳಿ ತೀರವು ಉತ್ತರ ಮತ್ತು ದಕ್ಷಿಣಕ್ಕೆ ಚಾಚಿಕೊಂಡಿದೆ ಅದನ್ನು ದೊಡ್ಡ ಕೊಲ್ಲಿಯ ಕಿರಿದಾದ ಜಲಸಂಧಿಯು ಸುತ್ತುವರಿದಿದೆ.

ಈ ಕೊಲ್ಲಿಯಲ್ಲಿ[1], ಕ್ಯಾಂಬೆ [Cambay] ಎಂಬ ಹೆಸರಿನ ದೊಡ್ಡ ನಗರ, ಹಾಗೆಯೇ ಇತರ ಆರು ನೂರು ಪರಿಚಿತ ದ್ವೀಪಗಳು ಮತ್ತು ಕೆಂಪು ಸಮುದ್ರ ಸೇರಿದಂತೆ, "ಮೆಕ್ಕಾದ ಮನೆ" [ಕಾಬಾ] ಹಾಗೂ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು (Moors) ವಾಸವಿರುವ ಅನೇಕ ದೊಡ್ಡ ನಗರಗಳು ಇವೆ ಎಂದು ನಮಗೆ ಹೇಳಲಾಗಿತ್ತು.

ಅದರ ಮುಂದಿನ ಭಾನುವಾರ [ಏಪ್ರಿಲ್ 29]ದಂದು, ನಾವು ಬಹಳ ದಿನಗಳಿಂದ ನೋಡದೆ ಇದ್ದ ಧ್ರುವತಾರೆ (North Star) ಯನ್ನು ಮತ್ತೊಮ್ಮೆ ನೋಡಿದೆವು.

ಶುಕ್ರವಾರ, ಮೇ 18[2], ರಂದು, ಇಪ್ಪತ್ತೂಮ್ರು ದಿನಗಳ[3] ಕಾಲ ಯಾವುದೇ ಭೂಮಿ ಕಣ್ಣಿಗೆ ಬೀಳದಿದ್ದ ನಮಗೆ, ಎತ್ತರದ ಪರ್ವತಗಳು ಕಾಣಿಸಿದವು. ಪ್ರಯಾಣದ ಇಷ್ಟೂ ಅವಧಿಯಲ್ಲಿ ಗಾಳಿ ನಮ್ಮ ಬೆನ್ನಿಗಿದ್ದುದರಿಂದ ನಾವು 600 ಲೀಗ್‌ಗಳಿಗಿಂತ ಕಡಿಮೆ ಪ್ರಯಾಣ ಮಾಡಿರುವ ಸಾಧ್ಯತೆ ಇರಲಿಲ್ಲ. ಭೂಮಿ ಮೊದಲ ಬಾರಿಗೆ ನಮ್ಮ ಕಣ್ಣಿಗೆ ಬಿದ್ದಾಗ[4] ಅದು ನಮ್ಮಿಂದ ಎಂಟು ಲೀಗ್‌ಗಳ *[ಒಂದು ಲೀಗ್ ಆ ಕಾಲಕ್ಕೆ ಸರಿಸುಮಾರು 5 -6 ಕಿ.ಮೀ ಎಂದು ಅಂದಾಜಿಸಬಹುದು]* ದೂರದಲ್ಲಿತ್ತು ಮತ್ತು ನಮ್ಮ ಹಡಗಿನ ಆಳದ ಗುಂಡು ನಲವತ್ತೈದು ಫ್ಯಾದಮ್ *(ಒಂದು ಫ್ಯಾದಮ್ ಅಂದರೆ ಆರು ಅಡಿ ಆಳ)*ಗಳಷ್ಟು ಆಳಕ್ಕೆ ಸಮುದ್ರದ ತಳ ಸ್ಪರ್ಶಿಸಿತು. ಅದೇ ರಾತ್ರಿ ನಾವು ತೀರದಿಂದ ತಪ್ಪಿಸಿಕೊಳ್ಳಲು ದಕ್ಷಿಣ - ನೈರುತ್ಯ (S.S.W.)ದತ್ತ ನಮ್ಮ ಪ್ರಯಾಣದ ದಿಕ್ಕನ್ನು ಬದಲಾಯಿಸಿದೆವು. ಮರುದಿನ [ಮೇ 19] ನಾವು ಮತ್ತೆ ಭೂಮಿಯನ್ನು ಸಮೀಪಿಸಿದೆವು, ಆದರೆ ಕರಾವಳಿಯುದ್ದಕ್ಕೂ ನಾವು ಸಾಗುತ್ತಿದ್ದಾಗ ಸುರಿಯುತ್ತಿದ್ದ ಭಾರೀ ಮಳೆ ಮತ್ತು ಗುಡುಗಿನ ಕಾರಣದಿಂದಾಗಿ[5] ನಮ್ಮ ನಾವಿಕನಿಗೆ ನಿಖರವಾಗಿ ನಾವು ಯಾವ ಸ್ಥಳದಲ್ಲಿದ್ದೇವೆ ಎಂಬುದನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಭಾನುವಾರ [ಮೇ 20] ನಾವು ಕೆಲವು ಪರ್ವತಗಳಿಗೆ[6]

---

[1]"ಕೊಲ್ಲಿ" ಅರೇಬಿಯನ್ ಸಮುದ್ರವಾಗಿದೆ, ಇದು ಬಾಬ್ ಎಲ್ ಮಾಂಡೆಬ್ "ಜಲಸಂಧಿ"ಯ ಮೂಲಕ ಕೆಂಪು ಸಮುದ್ರವನ್ನು ಸೇರುತ್ತದೆ. ಪೋರ್ಚುಗೀಸರು ಮೊದಲು ಭಾರತಕ್ಕೆ ಬಂದಾಗ ಗುಜರಾತಿನ ಕ್ಯಾಂಬೆ (ಖಂಭತ್) ವಾಣಿಜ್ಯ ವ್ಯವಹಾರದ ಅತ್ಯಂತ ಪ್ರಮುಖ ಮಾರುಕಟ್ಟೆಗಳಲ್ಲಿ ಒಂದಾಗಿತ್ತು. ಇಲ್ಲಿ ಹೂಳು ತುಂಬಿಕೊಳ್ಳತೊಡಗಿದ್ದು, ಇಲ್ಲಿನ ವ್ಯಾಪಾರ ವಹಿವಾಟಿನ ಕುಸಿತಕ್ಕೆ ದೊಡ್ಡ ಕಾರಣವಾಯಿತು.

[2] ಹಸ್ತಪ್ರತಿ 17ನೇ ತಾರೀಖು ಎಂದು ಹೇಳುತ್ತದೆ, ಆದರೆ ಶುಕ್ರವಾರ 18ನೇ ತಾರೀಖು ಆಗಿತ್ತು.

[3] ಏಪ್ರಿಲ್ 24 ರಿಂದ ಮೇ 18 ರವರೆಗೆ, ಎರಡೂ ದಿನಗಳನ್ನು ಒಳಗೊಂಡಂತೆ, ಇಪ್ಪತ್ತೈದು ದಿನಗಳು; ಅನೇಕ ದಿನಗಳವರೆಗೆ ಆಫ್ರಿಕನ್ ಕರಾವಳಿಯು ಅವರಿಗೆ ಕಾಣಿಸುತ್ತಿತ್ತು

[4]ಮೌಂಟ್ ಎಲಿ (ಡೆಲಿ) ಪ್ರಾಯಶಃ ಅವರು ಮೊದಲು ನೋಡಿದ ಭೂಪ್ರದೇಶವಾಗಿದೆ. ಇದು ಕಣ್ಣನೂರಿನ ಉತ್ತರಕ್ಕೆ ಸುಮಾರು 16 ಮೈಲುಗಳಷ್ಟು ಎತ್ತರಕ್ಕಿರುವ ಬೆಟ್ಟವಾಗಿದ್ದು, ಮಲಬಾರ್‌ನ ಈ ಭಾಗದಿಂದ ಏಲಕ್ಕಿಯನ್ನು ಹೆಚ್ಚಾಗಿ ರಫ್ತು ಮಾಡುವುದರಿಂದ ಈ ಜಾಗಕ್ಕೂ ಅದೇ ಹೆಸರು ಬಂದಿದೆ. ಏಲಕ್ಕಿಯನ್ನು ಸಂಸ್ಕೃತದಲ್ಲಿ ಎಲಾ ಎಂದು ಕರೆಯಲಾಗುತ್ತದೆ. (ಯೂಲ್‌ಅವರ ಮಾರ್ಕೊ ಪೊಲೊ, i, p.321).

[5]ಮಲಬಾರ್‌ನಲ್ಲಿ ಮಳೆಯು ಸುಮಾರು ಏಪ್ರಿಲ್ ಅಥವಾ ಮೇಯಲ್ಲಿ ಪ್ರಾರಂಭವಾಗಿ ಸೆಪ್ಟೆಂಬರ್ ಅಥವಾ ಅಕ್ಟೋಬರ್ ವರೆಗೆ ಮುಂದುವರಿಯುತ್ತದೆ. ನೈರುತ್ಯ ಮಾರುತಗಳಿಂದ ಉಂಟಾಗುವ ಈ ಮಳೆಯು ಜೂನ್, ಜುಲೈ ಮತ್ತು ಆಗಸ್ಟ್‌ನಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೀಳುತ್ತದೆ. ವಾರ್ಷಿಕ ಮಳೆಯು 150 ಇಂಚುಗಳನ್ನು ಮೀರುತ್ತದೆ.

[6] ಕೋಟಾ ಪಾಯಿಂಟ್, ಅಥವಾ ಕಡಲೂರು ಭೂಶಿರ. ಇದನ್ನು ಪೋರ್ಚುಗೀಸರು "ಮೋಂಟೆ ಫಾರ್ಮೋಸಾ" ಎಂದು ಕರೆಯುತ್ತಿದ್ದರು, ಇದು ಕ್ಯಾಲಿಕಟ್‌ನ ವಾಯುವ್ಯ ದಿಕ್ಕಿಗಿಂತ ತುಸು ಉತ್ತರ (N.N.W.)ದಲ್ಲಿದೆ.

ಹತ್ತಿರದಲ್ಲಿದ್ದೆವು" ಮತ್ತು ಚಾಲಕ ಅವುಗಳನ್ನು ಗುರುತಿಸುವಷ್ಟು ಸಮೀಪ ತಲುಪಿದಾಗ, ನಾವು ಕ್ಯಾಲಿಕಟ್‌ನ ಉತ್ತರ ಭಾಗದಲ್ಲಿದ್ದೇವೆ ಮತ್ತು ನಾವು ಹೋಗಲು ಬಯಸಿದ ದೇಶ ಕೂಡ ಇದೇ ಎಂದು ಹೇಳಿದನು.

(ಕಲ್ಲಿಕೋಟೆ) ಕ್ಯಾಲಿಕಟ್

[ಆಗಮನ.] ಆ ರಾತ್ರಿ [ಮೇ 20] ನಾವು ಕಲ್ಲಿಕೋಟೆ(ಕ್ಯಾಲಿಕಟ್) ನಗರದಿಂದ ಎರಡು ಲೀಗ್ ದೂರ ಲಂಗರು ಹಾಕಿದೆವು. ನಮ್ಮ ಚಾಲಕ ಕ್ಯಾಪುವಾ[7] ಎಂಬ ಪಟ್ಟಣವನ್ನು ಕ್ಯಾಲಿಕಟ್ ಎಂದು ತಪ್ಪಾಗಿ ಭಾವಿಸಿದ್ದರಿಂದಾಗಿ ನಾವು ಇಷ್ಟು ದೂರ ಲಂಗರು ಹಾಕಬೇಕಾಯಿತು. ಇನ್ನೂ ಮುಂದಕ್ಕೆ[8] ಪಂಡ್ರಾಣಿ ಎಂಬ ಇನ್ನೊಂದು ಪಟ್ಟಣವಿದೆ.[9] ನಾವು ದಡದಿಂದ ಸುಮಾರು ಒಂದೂವರೆ ಲೀಗ್ ದೂರದಲ್ಲಿ ಲಂಗರು ಹಾಕಿದೆವು. ನಾವು ಲಂಗರು ಹಾಕಿದ ನಂತರ, ನಾಲ್ಕು ದೋಣಿಗಳು (ಅಲ್ಮಾಡಿಯಾಗಳು) ತೀರದ ಕಡೆಯಿಂದ ನಮ್ಮ ಬಳಿಗೆ ಬಂದವರೇ ನಾವು ಯಾವ ದೇಶದವರು ಎಂದು ಕೇಳಿದರು. ನಾವು ಅವರಿಗೆ ಉತ್ತರ ಕೊಟ್ಟ ನಂತರ ಅವರು ನಮಗೆ ಕಲ್ಲಿಕೋಟೆ ನಗರ ಎಲ್ಲಿದೆ ಎಂಬುದನ್ನು ತೋರಿಸಿದರು.

ಮರುದಿನ [ಮೇ 21] ಅದೇ ದೋಣಿಗಳು ಮತ್ತೆ ಬಂದವು, ಮತ್ತು ನಮ್ಮ ಮುಖ್ಯ ಕಪ್ತಾನ (ಕ್ಯಾಪ್ಟನ್-ಮೇಜರ್) ನಮ್ಮ ಜೊತೆ ಇದ್ದ ಕೈದಿ[10]ಗಳಲ್ಲಿ ಒಬ್ಬನನ್ನು ಅವರ ಜೊತೆ ಕ್ಯಾಲಿಕಟ್ ಗೆ ಕಳುಹಿಸಿದನು. ಅವನನ್ನು ಕರೆದುಕೊಂಡು ಹೋದವರು ಅವನನ್ನು ಕ್ಯಾಸ್ಟಿಲಿಯನ್ ಮತ್ತು ಜಿನೋಯಿಸ್[11] ಭಾಷೆ ಮಾತನಾಡಬಲ್ಲ ಟುನಿಸ್ ನ ಇಬ್ಬರು ಮುಸ್ಲಿಂ ವರ್ತಕ (Moor)ರ ಬಳಿ ಕರೆದೊಯ್ದರು. ಅವನನ್ನು ನೋಡಿದ ಕೂಡಲೆ ಅವರು, "ಓ ಹಾಳಾದವನೆ! ನೀನು ಅದ್ಹೇಗೆ ಇಲ್ಲಿಗೆ ಬಂದೆ?" ಎಂದು ಉದ್ಗರಿಸಿದರು. ತನ್ನ ಊರಿನಿಂದ ಇಷ್ಟು ದೂರ ಅವನು ಹುಡುಕಿಕೊಂಡು ಬಂದಿರುವುದಾದರೂ ಏನು?" ಎಂದು ಅವರು ಕೇಳಿದರು. ಆಗ ಅವನು "ನಾವು ಕ್ರಿಶ್ಚಿಯನ್ನರು ಮತ್ತು ಸಾಂಬಾರ್ ಪದಾರ್ಥಗಳನ್ನು ಹುಡುಕಿಕೊಂಡು ಬಂದಿದ್ದೇವೆ," ಎಂದು ಅವರಿಗೆ ಹೇಳಿದನು. ಅದಕ್ಕೆ ಅವರು, "ಹಾಗಾದರೆ, ಕ್ಯಾಸ್ಟೈಲ್ ನ ರಾಜ, ಫ್ರಾನ್ಸಿನ ರಾಜ ಅಥವಾ ವೆನಿಸ್ ನ ದೊರೆ ಯಾರನ್ನೂ ಯಾಕೆ ಇಲ್ಲಿಗೆ ಕಳುಹಿಸುವುದಿಲ್ಲ?" ಎಂದು ಕೇಳಿದರು. ಅದಕ್ಕೆ ಅವನು, ಪೋರ್ಚುಗಲ್ ನ ರಾಜ ಇದಕ್ಕೆ ಅವಕಾಶ ಕೊಡುವುದಿಲ್ಲ," ಎಂದು ಹೇಳಿದನು. ಅದಕ್ಕೆ ಅವರು, 'ಅವನು [ಪೋರ್ಚುಗಲ್ ನ ದೊರೆ]ಒಳ್ಳೆಯ ಕೆಲಸ ಮಾಡಿದ," ಎಂದು ಹೇಳಿದರು. ಈ ಸಂಭಾಷಣೆಯ ನಂತರ ಅವರು ಅವನನ್ನು ತಮ್ಮ ವಸತಿಗೃಹಕ್ಕೆ ಕರೆದೊಯ್ದು ಅಲ್ಲಿ ಅವನಿಗೆ ಗೋಧಿ ಬ್ರೆಡ್ ಮತ್ತು ಜೇನುತುಪ್ಪವನ್ನು ನೀಡಿದರು. ಅವನು ತಿಂದ ನಂತರ ಅವನು ಅಲ್ಲಿದ್ದ ಒಬ್ಬ ಮುಸ್ಲಿಂ ವರ್ತಕನ ಜೊತೆಗೆ ಹಡಗಿಗೆ ಹಿಂದುರುಗಿದನು, ಆ ವರ್ತಕ ಹಡಗು ಹತ್ತಿದ್ದೇ ತಡ, "ಎಂಥಾ ಆದೃಷ್ಟದ ಸಾಹಸ! ಎಂಥಾ ಆದೃಷ್ಟದ ಸಾಹಸ! ಎಷ್ಟೊಂದು ಮಾಣಿಕ್ಯಗಳು, ಎಷ್ಟೊಂದು ಪಚ್ಚೆಗಳು! ನಿಮ್ಮನ್ನು ಇಂತಹ ಸಂಪತ್ತು ತುಂಬಿರುವ ದೇಶಕ್ಕೆ ಕರೆತಂದಿದ್ದುದ್ದಕ್ಕಾಗಿ ನೀವು

---

[7]ಕ್ಯಾಸ್ಟಾನ್ಹೆಡಾ ಮತ್ತು ಬ್ಯಾರೋಸ್ ಈ ಸ್ಥಳವನ್ನು ಕ್ಯಾಪೊಕೇಟ್ ಎಂದು ಕರೆಯುತ್ತಾರೆ. ಅದು ಕ್ಯಾಲಿಕಟ್ ನ ವಾಯುವ್ಯ ದಿಕ್ಕಿಗಿಂತ ತುಸು ಉತ್ತರ ದಿಕ್ಕಿನಲ್ಲಿ ಏಳು ಮೈಲಿ ದೂರದಲ್ಲಿ, ಎಳತೂರ್ ನದಿ ಮುಖಜ ಭಾಗದಲ್ಲಿದೆ.

[8] ಹಸ್ತಪ್ರತಿಯಲ್ಲಿ ಇದನ್ನು "ಕೆಳಗೆ' (abaixo) ಎಂದು ಉಲ್ಲೇಖಿಸಲಾಗಿದೆ. ಇದು ನಿಸ್ಸಂದೇಹವಾಗಿ ಅಕ್ಷಾಂಶದ ಉಲ್ಲೇಖವಾಗಿರಬೇಕು ಮತ್ತು ಅದು ಕ್ಯಾಲಿಕಟ್ ಗಿಂತ ಕಡಿಮೆ ಇದೆ.

[9]ಪಂಡರಾಮಿ (ಪಂಡರಾಮಿ)ಯನ್ನು ಬಟುಟಾ ಫಾಂಡರೇನ್ ಎಂದು ಕರೆಯುತ್ತಾರೆ. ಬ್ಯಾರೋಸ್ ಇದನ್ನು ಪಂಡ್ರಾಣಿ ಎಂದು ಕರೆಯುತ್ತಾರೆ. ಇದು ಉತ್ತರದ ಕೊಲ್ಲಂ ಅಥವಾ ಕ್ವಿಲೋನ್ ನ ಪಂಥಾರಿನಿ ಕೊಲ್ಲಂ ಅನ್ನು ಹೋಲುತ್ತದೆ ಮತ್ತು ಮಲಿಕ್ ಇಬ್ನ್ ದಿನಾರ್ ಮಲಬಾರ್ ಕರಾವಳಿಯಲ್ಲಿ ನಿರ್ಮಿಸಿದ ಒಂಬತ್ತು ಮೂಲ ಮಸೀದಿಗಳಲ್ಲಿ ಒಂದು ಇಲ್ಲಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಕ್ಯಾಲಿಕಟ್ ನಿಂದ ವಾಯುವ್ಯದ ತುಸು ಉತ್ತರ ಭಾಗಕ್ಕೆ 14 ಮೈಲಿ ದೂರದಲ್ಲಿದೆ. ಹಸ್ತಪ್ರತಿಯ ಲೇಖಕ ಇನ್ನೊಂದೆಡೆ ಪಂಡ್ರಾಮಿ ಮತ್ತು ಪಂಡರಿನ್ ಎಂದು ಕೂಡ ಬರೆಯುತ್ತಾರೆ.

[10] ಕೊರೆಯಾ ಪ್ರಕಾರ (ಸ್ಟ್ಯಾನ್ಲಿಯ ಫಾಸ್ಸ್ ಡಿ ಗ್ಯಾಂಟ್, ಪುಟ 159), ಅವನ ಹೆಸರು ಜೋಯಿಯೊ ನುನೆಜ್. ಅನುಬಂಧ ಇ ನೋಡಿ.

[11] ಮುಸಲ್ಮಾನನೊಬ್ಬನನ್ನು ಆಗಾಗ್ಗೆ "ಮೋನ್ಸೈಡ್" ಎಂದು ಕರೆಯುತ್ತಿದ್ದರು. ಅನುಬಂಧ ಇ ನೋಡಿ.

ದೇವರಿಗೆ ಅಪಾರವಾಗಿ ಕೃತಜ್ಞರಾಗಿರಲೇಬೇಕು," ಎಂದು ಹೇಳಿದ. ಅವನ ಮಾತನ್ನು ಕೇಳಿ ನಾವು ತುಂಬಾ ಬೆರಗಾಗಿ ಹೋದೆವು, ಪೋರ್ಚುಗಲ್‌ನಿಂದ ಇಷ್ಟು ದೂರದಲ್ಲಿ[12] ನಮಗೆ ನಮ್ಮ ಭಾಷೆಯಲ್ಲಿ ಮಾತನಾಡುವವರು ಯಾರಾದರೂ ಸಿಗಬಹುದು ಎಂದು ನಾವು ಖಂಡಿತಾ ನಿರೀಕ್ಷಿಸಿರಲಿಲ್ಲ.

ಕ್ಯಾಲಿಕಟ್‌ನ ಚಿತ್ರಣ

ಕ್ಯಾಲಿಕಟ್ ನಗರದಲ್ಲಿ ಕ್ರಿಶ್ಚಿಯನ್ನರು (ಸಿರಿಯನ್) ವಾಸಿಸುತ್ತಾರೆ. ಅವರು ಕಂದುಬಣ್ಣದ ಮೈಬಣ್ಣದವರು. ಅವರಲ್ಲಿ ಕೆಲವರು ಉದ್ದನೆ ಗಡ್ಡ ಮತ್ತು ಉದ್ದನೆಯ ಕೂದಲನ್ನು ಹೊಂದಿದ್ದರೆ, ಇನ್ನು ಕೆಲವರು ತಮ್ಮ ಕೂದಲನ್ನು ಚಿಕ್ಕದಾಗಿ ಕತ್ತರಿಸುತ್ತಾರೆ ಅಥವಾ ನೆತ್ತಿ ಮೇಲೆ ತಾವು ಕ್ರಿಶ್ಚಿಯನ್ನರು ಎಂಬ ಸಂಕೇತವಾಗಿ ಸ್ವಲ್ಪ ಕೂದಲು ಬಿಟ್ಟು ಉಳಿದ ಭಾಗ ಬೋಳಿಸಿಕೊಳ್ಳುತ್ತಾರೆ, ಅವರು ಮೀಸೆ ಬಿಡುತ್ತಾರೆ, ಕಿವಿಗಳನ್ನು ಚುಚ್ಚಿಸಿಕೊಂಡು, ದೊಡ್ಡ ಚಿನ್ನದ ಕಿವಿಯೋಲೆಗಳನ್ನು ಧರಿಸುತ್ತಾರೆ. ಅವರು ಮೇಲಿನ ಮೈ ಮುಚ್ಚುವುದಿಲ್ಲ [ಸೊಂಟದವರೆಗೆ ಬೆತ್ತಲೆಯಾಗಿರುತ್ತಾರೆ]. ಸೊಂಟದ ಕೆಳಗೆ ಅತ್ಯಂತ ಉತ್ಕೃಷ್ಟ ಹತ್ತಿಯಿಂದ ಮಾಡಿದ ಬಟ್ಟೆಯನ್ನು ಉಡುತ್ತಾರೆ. ಅತ್ಯಂತ ಗಣ್ಯರು ಮಾತ್ರ ಇಂತಹ ಉಡುಗೆ ತೊಟ್ಟರೆ, ಉಳಿದವರು ತಮ್ಮ ಕೈಲಾದ ಮಟ್ಟಿಗೆ ಇದನ್ನು ನಿಭಾಯಿಸುತ್ತಾರೆ.[13]

ಈ ದೇಶದ ಮಹಿಳೆಯರು, ಸಾಮಾನ್ಯವಾಗಿ ಕುಳ್ಳದೇಹಿಗಳು ಮತ್ತು ಕುರೂಪಿಗಳು. ಅವರು ಕುತ್ತಿಗೆಯ ಸುತ್ತಲೂ ಚಿನ್ನದ ಆಭರಣಗಳನ್ನು ಧರಿಸುತ್ತಾರೆ, ಅವರ ತೋಳುಗಳಲ್ಲಿ ಹಲವಾರು ಕಡಗಗಳು ಮತ್ತು ಕಾಲ್ಬೆರಳುಗಳಲ್ಲಿ ಅಮೂಲ್ಯವಾದ ಹರಳುಗಳನ್ನು ಕೂರಿಸಿರುವ ಉಂಗುರಗಳನ್ನು ಧರಿಸುತ್ತಾರೆ. ಈ ಎಲ್ಲಾ ಜನರು ಸೌಜನ್ಯವಂತರು ಮತ್ತು ಸೌಮ್ಯ ಸ್ವಭಾವದವರು. ಮೊದಲ ನೋಟಕ್ಕೆ ಅವರು ದುರಾಸೆಯುಳ್ಳವರು ಮತ್ತು ಅಜ್ಞಾನಿಗಳು ಆಗಿ ಕಂಡುಬರುತ್ತಾರೆ.

ರಾಜನ ಬಳಿ ದೂತನನ್ನು ಕಳುಹಿಸಲಾಯಿತು

ನಾವು ಕ್ಯಾಲಿಕಟ್ ಗೆ ಬಂದು ತಲುಪಿದಾಗ, ಇಲ್ಲಿನ ರಾಜ ಹದಿನೈದು ಲೀಗ್‌ಗಳ ದೂರದಲ್ಲಿದ್ದನು.[14] ಪೋರ್ಚುಗಲ್ ರಾಜನಿಂದ ಸಂದೇಶಪತ್ರ ತೆಗೆದುಕೊಂಡು ಒಬ್ಬ ರಾಯಭಾರಿ ಬಂದಿರುವುದಾಗಿಯೂ ಮತ್ತು ರಾಜನು ಬಯಸಿದಲ್ಲಿ ಆತನನ್ನು ಆ ರಾಜನಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಲು ಅವನು ಸಿದ್ಧನಿರುವುದಾಗಿಯೂ ಹೇಳಿ, ಮುಖ್ಯ ಕಥಾನ ಇಬ್ಬರು ದೂತರನ್ನು[15] ರಾಜನ ಬಳಿ ಕಳುಹಿಸಿದನು.

---

[12] ಕ್ಯಾಸ್ಟಾನ್ಹೆಡಾ (1, c. 15) ಹಡಗಿನಲ್ಲಿ ಗಾಮಾ ಅವರೊಂದಿಗೆ ಈ ಮುಸಲ್ಮಾನನು ನಡೆಸಿದ ಸಂಭಾಷಣೆಯ ಬಗ್ಗೆ ಬರೆಯತ್ತಾರೆ ಮತ್ತು ಮುಖ್ಯ ಕಥಾನ (ಕ್ಯಾಪ್ಟನ್-ಮೇಜರ್) ಆತನ ಸೇವೆಯಿಂದ ಸಂತುಷ್ಟನಾಗಿದ್ದ ಎಂದು ಹೇಳುತ್ತಾರೆ.

[13] ಹೀಗೆ ಇಲ್ಲಿಗೆ ಭೇಟಿ ನೀಡಿದವರು ಕ್ಯಾಲಿಕಟ್ ನ ಜನಸಮುದಾಯಗಳೊಂದಿಗೆ ಶೀಘ್ರದಲ್ಲಿಯೇ ಪರಿಚಿತರಾದರು. ಅವರ ಪೈಕಿ ಮಲಬಾರಿನ ಕ್ಷತ್ರಿಯ ಜಾತಿಗೆ ಸೇರಿದ ನಾಯರ್‌ಗಳು, ಮತ್ತು ಪ್ರಕ್ಷುಬ್ಧ ಸ್ವಭಾವದ ಮೋಪ್ಲಾಗಳು ಆಗಿದ್ದರು. ನಾಯರ್‌ಗಳು ಮಾಂಸ ಸೇವಿಸುತ್ತಾರೆ (ಇದು ಅವರದು ದಾಸ್ಯ ಮೂಲ ಎಂಬುದನ್ನು ತೋರಿಸುತ್ತದೆ). ಆದರೆ ಅವರು ದ್ವಿಜರು ಧರಿಸುವ ದಾರವನ್ನು ಧರಿಸುತ್ತಾರೆ. ಸಮಾಜದಲ್ಲಿ ಇವರು ಬ್ರಾಹ್ಮಣರ ನಂತರದ ಸ್ಥಾನದಲ್ಲಿದ್ದಾರೆ ಮತ್ತು ಇವರಲ್ಲಿ ಬಹುಪತಿತ್ವದ ಪದ್ಧತಿ ಆಚರಣೆಯಲ್ಲಿದೆ. ಮೋಪ್ಲಾ (ಮಾಪಿಳ್ಳೆ)ಗಳು ಅರಬರು ಸ್ಥಳೀಯ ಮಹಿಳೆಯರನ್ನು ಮದುವೆ ಮಾಡಿಕೊಂಡು ಹುಟ್ಟಿದ ಮಕ್ಕಳಾಗಿದ್ದಾರೆ ಇವರು "ಸ್ಥಳೀಯ" ಮುಸಲ್ಮಾನರು.

[14] ಗೋಯೆಸ್ (I, c. 39) ಮತ್ತು ಕ್ಯಾಸ್ಟಾನ್ಹೆಡಾ (I, c. 15) ಅವನು ಕ್ಯಾಲಿಕಟ್‌ನ ದಕ್ಷಿಣಕ್ಕೆ 28 ಮೈಲುಗಳಷ್ಟು ದೂರದಲ್ಲಿರುವ ಕರಾವಳಿ ಪಟ್ಟಣವಾದ ಪಣಾನೆಯಲ್ಲಿದ್ದರು ಎಂದು ಹೇಳುತ್ತಾರೆ.

[15] ಈ ದೂತರಲ್ಲಿ ಒಬ್ಬನ ಹೆಸರು ಫೆರ್ನಾವೊ ಮಾರ್ಟಿನ್ಸ್. ಅವರ ಜೊತೆಯಲ್ಲಿ ಮೊನ್ಸೈಡ್ ಇದ್ದನು (ಕ್ಯಾಸ್ಟನೆಡಾ, I, c. 15).

ರಾಜನು ಈ ದೂತರಿಗೆ ಬಹಳ ಒಳ್ಳೆಯ ಬಟ್ಟೆಯನ್ನು ಉಡುಗೊರೆಯಾಗಿ ನೀಡಿದನು ಮತ್ತು ಕಥ್ತಾನನಿಗೆ ಸ್ವಾಗತ ಕೋರಿ, ತಾನು ಇನ್ನೇನು ಕ್ಯಾಲಿಕಟ್ ಗೆ ಹೊರಡಲಿರುವುದಾಗಿಯೂ ಸಂದೇಶ ಕಳುಹಿಸಿದನು. ಅಷ್ಟೇ ಅಲ್ಲದೆ ಆ ಕೂಡಲೆ ತನ್ನ ದೊಡ್ಡ ಪರಿವಾರದೊಂದಿಗೆ ಆ ದಿಕ್ಕಿನಲ್ಲಿ ಪ್ರಯಾಣ ಕೂಡ ಆರಂಭಿಸಿದನು.

ಮೇ 27 ರಂದು ಪಂಡ್ರಾಣಿಯಲ್ಲಿ ಲಂಗರು

ನಾವು ಲಂಗರು ಹಾಕಿದ್ದ ಸ್ಥಳದಿಂದ [ಕಪುವಾ] ದಕ್ಷಿಣಕ್ಕಿರುವ ಪಂಡ್ರಾಣಿ ಎಂಬ ಸ್ಥಳಕ್ಕೆ ನಮ್ಮನ್ನು ಕರೆದೊಯ್ಯುವ ಆದೇಶದೊಂದಿಗೆ ರಾಜನ ನಾವಿಕನೊಬ್ಬನು ನಮ್ಮ ಇಬ್ಬರು ದೂತರೊಂದಿಗೆ ಬಂದನು. ಈ ಸಮಯಕ್ಕೆ ನಾವು ಕ್ಯಾಲಿಕಟ್ ನಗರಕ್ಕೆ ಅಭಿಮುಖವಾಗಿದ್ದೆವು. ನಾವು ಹೋಗಬೇಕಾದ ಸ್ಥಳವು ಲಂಗರು ಹಾಕಲು ಪ್ರಶಸ್ತವಾಗಿರುವುದಾಗಿಯೂ, ನಾವು ಈಗ ಇದ್ದ ತಳದಲ್ಲಿ ಕಲ್ಲುಗಳು ಇದ್ದುದರಿಂದ ಅಲ್ಲಿ ಲಂಗರು ಹಾಕುವುದು ಕಷ್ಟವೆಂದೂ ನಮಗೆ ಹೇಳಿದ್ದರು. ಇದು ನಿಜವಾಗಿತ್ತು ಕೂಡಾ[16]; ಅಷ್ಟೇ ಅಲ್ಲದೆ, ಈ ದೇಶಕ್ಕೆ ಬಂದ ಹಡಗುಗಳು ಸುರಕ್ಷತೆಯ ದೃಷ್ಟಿಯಿಂದ ಅಲ್ಲಿ ಲಂಗರು ಹಾಕುವುದು ನಿಯಮವಾಗಿತ್ತು. ನಮಗೆಯೇ ಈ ಜಾಗ ಆರಾಮದಾಯಕ ಎನ್ನಿಸಿರಲಿಲ್ಲ, ಹಾಗಾಗಿ ರಾಜನಿಂದ ನಮಗೆ ಸಂದೇಶ ಬಂದ ಕೂಡಲೆ ನಮ್ಮ ಮುಖ್ಯ ಕಥ್ತಾನ ಹಾಯಿ ಕಟ್ಟಿ ಪಂಡ್ರಾಣಿಗೆ ಹೊರಡಲು ಆದೇಶಿಸಿದನು. ಆದರೆ ನಾವು ರಾಜನ ನಾವಿಕಾಧಿಕಾರಿ ಬಯಸಿದಷ್ಟು ತೀರಕ್ಕೆ ಹತ್ತಿರದಲ್ಲಿ ಲಂಗರು ಹಾಕಲಿಲ್ಲ.

ನಾವು ಲಂಗರು ಹಾಕಿ ಕಾಯುತ್ತಿದ್ದ ಹೊತ್ತಿಗೆ, ರಾಜ ಈಗಾಗಲೇ ನಗರದಲ್ಲಿದ್ದಾನೆ ಎಂಬ ಸಂದೇಶ ನಮ್ಮ ಮುಖ್ಯ ಕಥ್ತಾನರಿಗೆ ಬಂದಿತು, ಮತ್ತು ಅದೇ ಸಮಯಕ್ಕೆ ರಾಜನು ತಾನು ಇರುವ ಸ್ಥಳಕ್ಕೆ ಅವನನ್ನು ಕರೆತರಲು ಪಂಡ್ರಾಣಿಗೆ ಒಬ್ಬ ಕೊತ್ವಾಲನ(bale)[17] ಜೊತೆಗೆ ಇತರ ಕೆಲವು ಗಣ್ಯರನ್ನು ಕಳುಹಿಸಿದನು. ಈ ಕೊತ್ವಾಲನು ಒಬ್ಬ ಮುಖ್ಯ ದಂಡನಾಯಕ ಅಥವಾ ಗವರ್ನರ್ ಸ್ಥಾನದಲ್ಲಿದ್ದು, ಆತನ ಬೆಂಗಾವಲಿಗೆ ಕತ್ತಿ ಗುರಾಣಿಧಾರಿಗಳಾದ ಇನ್ನೂರು ಜನರು ಇರುತ್ತಾರೆ. ಈ ಸಂದೇಶ ಬಂದಾಗ ಅಗಲೇ ಸಾಯಂಕಾಲವಾಗಿದ್ದರಿಂದ, ಮುಖ್ಯ ಕಥ್ತಾನರು ಪ್ರಯಾಣವನ್ನು ಮಾರನೆ ದಿನಕ್ಕೆ ಮುಂದೂಡಿದರು.

ಗಾಮಾ ಕ್ಯಾಲಿಕಟ್ ಗೆ ಹೋಗುತ್ತಾನೆ.

ಮರುದಿನ ಬೆಳಿಗ್ಗೆ, ಅಂದರೆ ಸೋಮವಾರ, ಮೇ 28 ರಂದು, ಮುಖ್ಯ ಕಥ್ತಾನ ರಾಜನೊಂದಿಗೆ ಮಾತನಾಡಲು ಹೊರಟನು ಮತ್ತು ಅವನೊಂದಿಗೆ ಹದಿಮೂರು ಜನರನ್ನು ಕರೆದೊಯ್ದನು, ಅವರಲ್ಲಿ ನಾನು ಒಬ್ಬನಾಗಿದ್ದೆ.[18] ನಾವು ನಮ್ಮ ಅತ್ಯುತ್ತಮ

---

[16] ಕ್ಯಾಲಿಕಟ್‌ನ ತೀರದ ಬಳಿ ಹಡಗಿನ ಸುರಕ್ಷತೆಗೆ ಅಪಾಯವನ್ನುಂಟುಮಾಡಬಲ್ಲಂತಹ ದಂಡೆಗಳು ಮತ್ತು ಬಂಡೆಗಳು ಇವೆ, ಆದರೆ ಆ ಅಡೆತಡೆಗಳ ಒಳಗೆ ಲಂಗರು ಹಾಕಲು ನಿಗದಿಪಡಿಸಿರುವ ಪ್ರದೇಶವು ಸಂಪೂರ್ಣವಾಗಿ ಸುರಕ್ಷಿತವಾಗಿದೆ.

[17] ಅರೇಬಿಕ್ ಭಾಷೆಯಲ್ಲಿ ಬೇಲ್ (*Bale) ಎಂದರೆ* ವಾಲಿ, ಗವರ್ನರ್ ಎಂದರ್ಥ. ಪೋರ್ಚುಗೀಸ್ ಭಾಷೆಯ ಅಲ್ಕೈಡ್ (*Alcaide*) ಕೂಡ ಇದೇ ಅರ್ಥವನ್ನು ಹೊಂದಿದೆ. ಬ್ಯಾರೋಸ್ ಮತ್ತು ಕ್ಯಾಸ್ಟಾನ್ಹೆಡಾ ಈ ಅಧಿಕಾರಿಗೆ "ಕತುವಾಲ್" (ಹಿಂದೂಸ್ತಾನಿಯಲ್ಲಿ ಕೊತ್-ವಾಲ್, ಕೋಟೆಯ ಗವರ್ನರ್ (ನಾಯಕ)) ಪಟ್ಟವನ್ನು ಕೊಡುತ್ತಾರೆ. ಅವನು ರಾಜನ ಆಡಳಿತಾಧಿಕಾರಿಯ ಮತ್ತು ಕಾನೂನು ಸುರಕ್ಷತೆ ನಿರ್ವಹಣೆಯ ಮುಖ್ಯಸ್ಥನಾಗಿರುತ್ತಿದ್ದನು. ಕೊರೆಯಾ ಅವನನ್ನು ಅರೇಬಿಕ್ ಭಾಷೆಯಲ್ಲಿ ಮಂತ್ರಿಗೆ ಬಳಸಲ್ಪಡುವ ವಜೀರ್' ನ ಅಪಭ್ರಂಶ ರೂಪವಾಗಿ ಗೋಸಿಲ್ ಅಥವಾ ಗುಯೋಜಿಲ್ (ಉಚ್ಚಾರ: ವೋಜಿಲ್) ಎಂದು ಕರೆಯುತ್ತಾರೆ.

[18] ಹದಿಮೂರು ಜನರ ಪೈಕಿ ಡಿಯಾಗೊ ಡಯಾಸ್, ಜುವಾನ್ ಡೆ ಸಾ, ಗೊನ್ಸಾಲೊ ಪಿರೆಜ್, ಅಲ್ವಾರೊ ವೆಲ್ಹೊ, ಅಲ್ವಾರೊ ಡಿ ಬ್ರಾಗಾ, ಜುವಾನ್ ಡಿ ಸೆಟುಬಾಲ್, ಜುವಾನ್ ಡಿ ಪಾಲ್ಹಾ ಹೆಸರು ಬಿಟ್ಟರೆ ಇತರ ಆರು ಹೆಸರುಗಳು ದಾಖಲಾಗಿಲ್ಲ. ಪೌಲೋ ಡ ಗಾಮಾ ಮತ್ತು ಕೊಯೆಲ್ಹೋ ಅವರಿಗೆ ಹಡಗಿನ ಮುಖ್ಯಸ್ಥನಿಗೆ ಏನಾದರೂ ವಿಪತ್ತು ಸಂಭವಿಸಿದಲ್ಲಿ ಅವರು ತಕ್ಷಣವೇ ಪೋರ್ಚುಗಲ್‌ಗೆ ಹೊರಡಬೇಕು ಎಂಬ ಆದೇಶದೊಂದಿಗೆ ಹಡಗುಗಳ ಉಸ್ತುವಾರಿ ವಹಿಸಲಾಗಿತ್ತು. ಆದರೆ ಕೊಯೆಲ್ಹೋ ಮಾತ್ರ ತನ್ನ ಮುಖ್ಯಸ್ಥನು ದೋಣಿಗಳಲ್ಲಿ ಹಿಂದಿರುಗುವವರೆಗೆ ಕಾಯುವಂತೆ ಆದೇಶಿಸಲಾಗಿತ್ತು. ಅನುಬಂಧ ಇ ನೋಡಿ.

ಬಟ್ಟೆಗಳನ್ನು ಧರಿಸಿದೆವು, ಫಿರಂಗಿಗಳನ್ನು, ತೋಪುಗಳನ್ನು (bombards) ನಮ್ಮ ದೋಣಿಗಳಲ್ಲಿ ಇರಿಸಿದೆವು ಮತ್ತು ಕಹಳೆಗಳನ್ನು (trumpets) ಮತ್ತು ಅನೇಕ ಧ್ವಜಗಳನ್ನು ನಮ್ಮೊಂದಿಗೆ ತೆಗೆದುಕೊಂಡು ಹೊರಟೆವು. ದೋಣಿಯಿಂದ ಇಳಿಯುವಾಗ, ನಮ್ಮ ಮುಖ್ಯ ಕಪ್ತಾನರನ್ನು ಕೊತ್ವಾಲ ಸ್ವಾಗತಿಸಿದನು. ಅವನೊಂದಿಗೆ ಶಸ್ತ್ರಸಜ್ಜಿತರಾದ ಮತ್ತು ನಿರಾಯುಧರಾದ ಅನೇಕ ಆಳುಗಳು ಇದ್ದರು. ಅವರ ಕೈಯಲ್ಲಿದ್ದ ಖಡ್ಗಗಳನ್ನು ನೋಡಿ, ಮೊದಲಿಗೆ ಸ್ವಲ್ಪ ಗಾಬರಿಯಾದರೂ, ಅವರು ನಮ್ಮನ್ನು ನೋಡಿ ಸಂತೋಷಪಟ್ಟಂತೆ ಕಂಡಿತು ಮತ್ತು ಸ್ವಾಗತವು ಸೌಹಾರ್ದಯುತವಾಗಿತ್ತು. ನಮ್ಮ ಮುಖ್ಯ ಕಪ್ತಾನರಿಗೆ ಆ ಊರಿನ ಗಣ್ಯರು ಬಳಸುವಂತಹ ಪಲ್ಲಕ್ಕಿಯ ವ್ಯವಸ್ಥೆ ಮಾಡಲಾಗಿತ್ತು. ಈ ಪಲ್ಲಕ್ಕಿಗಳನ್ನು ಅಲ್ಲಿ ಬಂದುಹೋಗುವ ವರ್ತಕರು ಕೂಡ ಬಳಸುತ್ತಾರೆ. ಅದಕ್ಕೆ ಪ್ರತಿಯಾಗಿ ಅವರು ರಾಜನಿಗೆ ಕಾಣಿಕೆಗಳನ್ನು ಸಲ್ಲಿಸುತ್ತಾರೆ. ನಮ್ಮ ಮುಖ್ಯ ಕಪ್ತಾನರು ಪಲ್ಲಕ್ಕಿಯನ್ನು ಏರಿದರು. ಅದನ್ನು ಆರು ಜನರು ಸರದಿಯಲ್ಲಿ ಹೊತ್ತುಕೊಂಡು ನಡೆದರು. ಈ ಎಲ್ಲ ಜನರನ್ನು ಒಡಗೂಡಿ ನಾವು ಕ್ಯಾಲಿಕಟ್ ನ ರಸ್ತೆ ಹಿಡಿದೆವು, ದಾರಿಯಲ್ಲಿ ಮೊದಲು ಕ್ಯಾಪುವಾ ಎಂಬ ಇನ್ನೊಂದು ಪಟ್ಟಣಕ್ಕೆ ಬಂದೆವು. ನಮ್ಮ ಮುಖ್ಯ ಕಪ್ತಾನನಿಗೆ ಅಲ್ಲಿಯ ಒಬ್ಬ ಗಣ್ಯ ವ್ಯಕ್ತಿಯ ಮನೆಯಲ್ಲಿ ವಿಶ್ರಾಂತಿಯ ವ್ಯವಸ್ಥೆ ಮಾಡಲಾಗಿತ್ತು. ನಮಗೆಲ್ಲರಿಗೂ ಅನ್ನ, ಸಾಕಷ್ಟು ಬೆಣ್ಣೆ, ರುಚಿಯಾದ, ಬೇಯಿಸಿದ ಮೀನಿನ ಊಟದ ವ್ಯವಸ್ಥೆ ಮಾಡಲಾಗಿತ್ತು. ಮುಖ್ಯ ಕಪ್ತಾನ ಊಟ ಮಾಡಲಿಲ್ಲ. ವಿಶ್ರಾಂತಿಯ ನಂತರ, ನಾವು ಸಮುದ್ರ ಮತ್ತು ಮುಖ್ಯಭೂಮಿಯ ನಡುವೆ ಸಮುದ್ರಕ್ಕೆ ಹತ್ತಿರವಾಗಿ ಹರಿಯುತ್ತಿದ್ದ ನದಿಯ ಬಳಿ[19] ದೋಣಿಗಳನ್ನು ಏರಿದೆವು. ನಾವು ಬೇರೆ ಬೇರೆಯಾಗದಂತೆ ನಾವು ಏರಿದ ಎರಡು ದೋಣಿಗಳನ್ನು ಒಟ್ಟಿಗೆ ಕಟ್ಟಲಾಗಿತ್ತು.[20] ಇನ್ನೂ ಹಲವಾರು ದೋಣಿಗಳು ಜನರಿಂದ ತುಂಬಿ ತುಳುಕುತ್ತಿದ್ದವು. ದಡದಲ್ಲಿದ್ದವರ ಬಗ್ಗೆ ನಾನು ಏನು ಹೇಳುವಂತೆಯೇ ಇಲ್ಲ; ಅಲ್ಲಿ ಅಪರಿಮಿತ ಸಂಖ್ಯೆಯಲ್ಲಿ ನಮ್ಮನ್ನು ನೋಡಲು ಜನ ಸೇರಿದ್ದರು. ನಾವು ಸುಮಾರು ಒಂದು ಲೀಗ್ ನಷ್ಟು ದೂರ ಆ ನದಿಯಲ್ಲಿ ಪಯಣಿಸಿದೆವು. ಹೀಗೆ ಹೋಗುವಾಗ ಅನೇಕ ದೊಡ್ಡ ಹಡಗುಗಳನ್ನು ನದಿಯ ದಡದಲ್ಲಿ ಎಳೆದು ಇರಿಸಿರುವುದು ಕಂಡುಬಂತು, ಏಕೆಂದರೆ ಅಲ್ಲಿ ಎಲ್ಲೂ ಬಂದರು ಇರಲಿಲ್ಲ.

ನಾವು ಇಳಿದಾದ ಮೇಲೆ ಮುಖ್ಯ ಕಪ್ತಾನ ಮತ್ತೊಮ್ಮೆ ಪಲ್ಲಕ್ಕಿ ಹತ್ತಿದನು. ನಮ್ಮನ್ನು ನೋಡಲು ರಸ್ತೆಯುದ್ದಕ್ಕೂ ಅಸಂಖ್ಯಾತ ಜನಸಂದಣಿ ಇತ್ತು. ಹೆಂಗಸರು ಸಹ ಮಕ್ಕಳನ್ನು ಎತ್ತಿಕೊಂಡು, ನಮ್ಮನ್ನು ಹಿಂಬಾಲಿಸಿದರು.

ಕ್ರಿಶ್ಚಿಯನ್ ಚರ್ಚ್

[ಕ್ರಿಶ್ಚಿಯನ್ ಚರ್ಚ್[21]] ನಾವು [ಕ್ಯಾಲಿಕಟ್] ತಲುಪಿ ಆದ ಮೇಲೆ ಅವರು ನಮ್ಮನ್ನು ಒಂದು ದೊಡ್ಡ ಚರ್ಚ್‌ಗೆ ಕರೆದೊಯ್ದರು. ಅಲ್ಲಿ ನಾವು ಕಂಡದ್ದು ಹೀಗಿತ್ತು: ಆ ಚರ್ಚ್ ಒಂದು ಮಠ(monastery)ದಷ್ಟು ದೊಡ್ಡದಾಗಿದ್ದು, ಅದನ್ನು ಕಡೆದ ಕಲ್ಲಿನಿಂದ ನಿರ್ಮಿಸಲಾಗಿದೆ ಮತ್ತು ಹೆಂಚುಗಳಿಂದ ಮುಚ್ಚಲಾಗಿತ್ತು. ಮುಖ್ಯ ದ್ವಾರದಲ್ಲಿದ್ದ ಕಂಚಿನ ಸ್ತಂಭವು ಹಡಗಿನ ಹಾಯಿಯಷ್ಟು ಎತ್ತರವಿದೆ. ಅದರ ಮೇಲ್ಭಾಗದಲ್ಲಿ ಒಂದು ಪಕ್ಷಿಯನ್ನು, ಬಹುಶಃ ಅದು ಕೋಳಿ ಇರಬೇಕು, ಕೂರಿಸಲಾಗಿದೆ. ಇದರ ಜೊತೆಗೆ, ಮನುಷ್ಯನಷ್ಟು ಎತ್ತರದ ಮತ್ತು ಅತ್ಯಂತ ಸದೃಢವಾದ ಮತ್ತೊಂದು ಸ್ಥಭವಿತ್ತು. ಚರ್ಚ್‌ನ ಪ್ರಾಂಗಣದ ಮಧ್ಯಭಾಗದಲ್ಲಿ

---

[19] ಇದು ಎಳತ್ತೂರ್ ನದಿ. ನಕ್ಷೆ IV ನೋಡಿ

[20] ಬರ್ಟನ್ (ಗೋವಾ, ಪು. 191) ಹೇಳುವಂತೆ ಈಗಲೂ ಸಹ ಹಲಗೆಗಳನ್ನು ಒಂದಕ್ಕೊಂಡು ಜೋಡಿಸಿ ದೋಣಿಗಳನ್ನು ನಿರ್ಮಿಸಲಾಗುತ್ತದೆ.

[21] ಈ "ಚರ್ಚ್" ಪಗೋಡಾ ಅಥವಾ ದೇವಸ್ಥಾನವಾಗಿತ್ತು. ದೇವಸ್ಥಾನದ ಉತ್ಸವ ಶುರುವಾಗುವಾಗ ಧ್ವಜ ಹಾರಿಸಲು ಅದರ ಮುಂಭಾಗದಲ್ಲಿರುವ ಎತ್ತರದ ಕಂಬವನ್ನು ಬಳಸಲಾಗುತ್ತದೆ. ಇದನ್ನು ಮರದಿಂದ ಮಾಡಲಾಗಿದ್ದು, ಸಾಮಾನ್ಯವಾಗಿ ಅದಕ್ಕೆ ತಾಮ್ರ ಅಥವಾ ಬೆಳ್ಳಿಯ ಕವಚ ಇರುತ್ತದೆ. ಅದರ ಮೇಲೆ ನಿಲ್ಲಿಸಿರುವ ಹುಂಜವು ಯುದ್ಧ-ದೇವರಾದ ಸುಬ್ರಮಣಿಯಾರ್ ಸಂಕೇತವಾಗಿದೆ. ಚಿಕ್ಕ ಸ್ತಂಭವು ಹಬ್ಬದ ಸಮಯದಲ್ಲಿ ದೀಪಗಳನ್ನು ಹಚ್ಚಲು ಬಳಸುವ ದೀಪಸ್ತಂಭವಾಗಿದೆ. - ರೆವರೆಂಡ್ ಜೆ.ಜೆ. ಜೌಸ್.

ಪ್ರಾರ್ಥನಾ ಮಂದಿರವನ್ನು ನಿರ್ಮಿಸಲಾಗಿದೆ[22]. ಅದನ್ನು ಕೂಡ ಕಲ್ಲಿನಲ್ಲಿ ಕೆತ್ತಲಾಗಿತ್ತು ಮತ್ತು ಅದಕ್ಕಿರುವ ಕಂಚಿನ ಬಾಗಿಲು ಒಬ್ಬ ಮನುಷ್ಯ ಹಾಯಾಗಿ ಹಾದುಹೋಗಲು ಅಗತ್ಯವಿರುವಷ್ಟು ಅಗಲವಿದೆ ಮತ್ತು ಅದಕ್ಕೆ ಕಲ್ಲಿನ ಮೆಟ್ಟಿಲುಗಳಿವೆ. ಈ ಅಭಯಾಶ್ರಮದ (ಬಹುಶಃ ಗರ್ಭಗುಡಿ?-ಪರಿಶೀಲಕರು- ಪರಿಶೀ.) ಒಳಗೆ ಒಂದು ಸಣ್ಣ ಮೂರ್ತಿ ಇದೆ.

ಅದು ನಮ್ಮ ಮಾತೆ[23]ಯನ್ನು ಪ್ರತಿನಿಧಿಸುತ್ತದೆ ಎಂದು ಅವರು ಹೇಳಿದರು. ಗೋಡೆಗಳ ಉದ್ದಕ್ಕೂ, ಮುಖ್ಯ ದ್ವಾರದ ಬಳಿ, ಏಳು ಸಣ್ಣ ಗಂಟೆಗಳನ್ನು[24] ನೇತುಹಾಕಲಾಗಿದೆ. ಈ ಚರ್ಚ್‌ನಲ್ಲಿ ಮುಖ್ಯ ಕಫ್ತಾನ ಪ್ರಾರ್ಥನೆ ಸಲ್ಲಿಸಿದನು, ನಾವು ಕೂಡ ಅವನನ್ನು ಸೇರಿಕೊಂಡೆವು.[25]

---

[22] ಕೊರುಶೆವೊ, ಎಂಬುದರ ಯಥಾರ್ಥ ಶಿಖರ ಅಥವಾ ಮಿನಾರತ್ ಎಂದು; ಆದರೆ ಮುಂದುವರಿದು ಲೇಖಕರು ಇದನ್ನು ಅಭಯಾಶ್ರಮ ಅಥವಾ ಚಾಪೆಲ್, ಕ್ಯಾಪೆಲ್ಲಾ (ಕ್ರೈಸ್ತರ ಸಣ್ಣ ಪ್ರಾರ್ಥನಾ ಮಂದಿರ) ಎಂದು ಕರೆಯುತ್ತಾರೆ. ಗೋಯೆಸ್ (c. 40) ಇದನ್ನು "ವೃತ್ತಾಕಾರದ" ಚಾಪೆಲ್ ಎಂದು ಕರೆಯುತ್ತಾರೆ.

[23] ಗೋಯೆಸ್ (c. 40) ಹೇಳುವಂತೆ, ನಾಲ್ವರು ಪುರೋಹಿತರು ಮಾತ್ರ ಈ ದೇವಾಲಯವನ್ನು ಪ್ರವೇಶಿಸಿದರು ಮತ್ತು ಮೂರ್ತಿಯನ್ನು ತೋರಿಸುತ್ತಾ, "ಮರಿಯಾ, ಮಾರಿಯಾ" ಎಂದು ಉದ್ಗರಿಸಿದರು. ಅವರು ಹಾಗೆ ಉದ್ಗರಿಸುತ್ತಿದ್ದಂತೆ ನೆರೆದಿದ್ದ ಸ್ಥಳೀಯರು ಉದ್ದಂಡ ನಮಸ್ಕಾರ ಮಾಡಿದರು, ಆದರೆ ಪೋರ್ಚುಗೀಸರು ಕನ್ಯಾಮಾತೆಗೆ ನಮಿಸಿ ಮಂಡಿಯೂರಿದರು. ಬರ್ಟನ್ ಹೇಳುವಂತೆ, ಇದು ಶ್ವೇತ ದೇವತೆ', ಗೌರಿಯ ಮೂರ್ತಿಯಾಗಿತ್ತು. ಆದರೆ ಚಾರ್ಟನ್ (III, ಪುಟ 246) ಅದು ಮಹಾ ಮಾಯೆ ಮತ್ತು ಮತ್ತು ಅವಳ ಪುತ್ರ ಶಾಕ್ಯನ ಮೂರ್ತಿಯಾಗಿತ್ತು ಎಂದು ಹೇಳುತ್ತಾರೆ. ನಾವು ಕೊಟ್ಟಿರುವ ಚಿತ್ರವನ್ನು ಇ. ಮೂರ್ ಬರೆದಿರುವ The Hindu Pantheon ಪುಸ್ತಕ (ಹೊಸ ಆವೃತ್ತಿ: ರೆವರೆಂಡ್ W. O. ಸಿಂಪ್ಸನ್ (ಮದ್ರಾಸ್, 1864) ಪ್ಲೇಟ್ xxxv) ದಿಂದ ತೆಗೆದುಕೊಳ್ಳಲಾಗಿದೆ. ಇದು ಕೃಷ್ಣ ಮತ್ತು ಅವನ ತಾಯಿ ದೇವಕಿಯನ್ನು ಪ್ರತಿನಿಧಿಸುತ್ತದೆ. ಕಂಸ (ದೇವಕಿಯ ಸಹೋದರ)ನಿಗೆ ಕೃಷ್ಣನ ಜನನದ ಸುದ್ದಿ ತಲುಪಿದಾಗ ಅವನು ಹೊಸದಾಗಿ ಹುಟ್ಟಿದ ಎಲ್ಲಾ ಗಂಡು ಶಿಶುಗಳನ್ನು ಕೊಲ್ಲಲು ಆದೇಶಿಸುತ್ತಾನೆ. ಪ್ರಾಣಿಗಳು ಮತ್ತು ಹಣ್ಣುಗಳು ತುಂಬಿಕೊಂಡಿರುವ ಬಟ್ಟಲುಗಳ ಚಿತ್ರಗಳು ಪ್ರಾಣಿ ಮತ್ತು ಸಸ್ಯ ಸಾಮ್ರಾಜ್ಯದ ಮೇಲೆ ಕೃಷ್ಣನ ಶಕ್ತಿಯನ್ನು ಸಂಕೇತಿಸುತ್ತವೆ. ಕೆಳಗಿನ ಮೇಜಿನ ಮೇಲೆ ಆಹಾರ, ವಿಷ ಮತ್ತು ಅಮೃತವನ್ನು ಇರಿಸಲಾಗಿದೆ, ಇದು ಜೀವನ, ಸಾವು ಮತ್ತು ಅಮರತ್ವವನ್ನು ಸಂಕೇತಿಸುತ್ತದೆ, ಜೊತೆಗೆ ತ್ರಿಮೂರ್ತಿಗಳಲ್ಲಿ ಏಕತೆಯನ್ನು ಸೂಚಿಸುವ ಸಣ್ಣ ತ್ರಿಕೋನಾಕಾರದ ದಾಳವನ್ನು ಕೂಡ ಇರಿಸಲಾಗಿದೆ.
ಕ್ಯಾಲಿಕಟ್‌ನಲ್ಲಿರುವ ಬಾಸೆಲ್ ಮಿಷನ್‌ನ ರೆವರೆಂಡ್ ಜೆ. ಜೇಕಬ್ ಜೌಸ್, ಮಾರಿ ಅಥವಾ ಮಾರಿಯಮ್ಮ ಎಂಬ ಸ್ಥಳೀಯ ದೇವತೆ ಇರುವುದಾಗಿಯೂ, ಮತ್ತು ಜನರು ಈಕೆಯನ್ನು ಸಿಡುಬು ದೇವತೆಯಾಗಿ ಪರಿಗಣಿಸಿ ಈಕೆಯ ಬಗ್ಗೆ ಹೆಚ್ಚು ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆಂದೂ ನನಗೆ ತಿಳಿಸಿದರು. ಮಲಯಾಳಂನಲ್ಲಿ ಅಮ್ಮ ಎಂದರೆ ತಾಯಿ ಎಂದರ್ಥ.

[24] ಬ್ರಾಹ್ಮಣರು ದೇವಸ್ಥಾನ ಪ್ರವೇಶಿಸುವಾಗ ಈ ಘಂಟೆಗಳನ್ನು ಹೊಡೆಯುತ್ತಾರೆ, ಆದರೆ ಕೆಳಜಾತಿಯವರು ಇವುಗಳನ್ನು ಮುಟ್ಟುವಂತಿಲ್ಲ.

[25]ಈ ಹಿಂದೂ ದೇವರುಗಳು ಮತ್ತು ಅವರ ಮೂರ್ತಿಗಳು ತಮ್ಮ ಚರ್ಚ್‌ಗಳ ಸಂತರನ್ನು ಪ್ರತಿನಿಧಿಸುತ್ತವೆಯೇ ಎಂಬುದರ ಬಗ್ಗೆ ಕೆಲವು ಪೋರ್ಚುಗೀಸರು ಸಂದೇಹ ವ್ಯಕ್ತಪಡಿಸಿರಲು ಸಾಧ್ಯ. ಕ್ಯಾಸ್ಟಾನ್ಹೆಡಾ (i, p. 57) ಹೇಳುವಂತೆ, ದೇವಸ್ಥಾನದಲ್ಲಿ ದೇವರ ಮೂರ್ತಿಯೆದುರು ವಾಸ್ಕೋ ಡ ಗಾಮಾನ ಪಕ್ಕದಲ್ಲಿ ಜುವಾನ್ ಡಿ ಸಾ ಮಂಡಿಯೂರುವಾಗ, "ಇವರು ಸೈತಾನರೇ ಆಗಿದ್ದರೆ, ನಾನು ನಿಜವಾದ ದೇವರನ್ನು ಆರಾಧಿಸುತ್ತೇನೆ" ಎಂದು ಹೇಳುತ್ತಾನೆ. ಈ ಮಾತು ಕೇಳಿ ಅವನ ಮುಖ್ಯಸ್ಥ ಮುಗುಳ್ನಗುತ್ತಾನೆ. ಇದು ಹೇಗಾದರೂ ಇರಲಿ, ಆದರೆ ಈ ನೌಕಾಯಾನದ ಮುಖ್ಯಸ್ಥರು ಮಂಡಿಸಿದ ವರದಿಗಳು ಈ ಹಿಂದೂಗಳನ್ನು ಕ್ರಿಶ್ಚಿಯನ್ನರು ಎಂದೇ ವಿವರಿಸುತ್ತವೆ ಮತ್ತು ರಾಜನು ಅವರು ಹೇಳಿದನ್ನು ಹಾಗೆಯೇ ನಂಬುತ್ತಾನೆ. (ಅನುಬಂಧ A ನೋಡಿ)..

ಕೃಷ್ಣನಿಗೆ ಹಾಲೂಡಿಸುತ್ತಿರುವ ದೇವಕಿ

ನಾವು ಪ್ರಾರ್ಥನಾ ಮಂದಿರವನ್ನು ಪ್ರವೇಶಿಸಲಿಲ್ಲ. ಏಕೆಂದರೆ ಕ್ವಾಫೀಸ್[26] ಎಂದು ಕರೆಯಲ್ಪಡುವ ಚರ್ಚ್‌ನ ಕೆಲವು ಆರಾಧಕರು ಮಾತ್ರ ಇಲ್ಲಿ ಪ್ರವೇಶಿಸಬಹುದಾಗಿತ್ತು. ನಮ್ಮ ಧರ್ಮಗುರುಗಳು ಉದ್ದನೆಯ ಶಾಲು ಧರಿಸುವಂತೆ, ಈ ಕ್ವಾಫೀಗಳು ಎಡ ಭುಜದ ಮೇಲಿನಿಂದ ಇಳಿದು ಬಲಗೈಯ ಕೆಳಗೆ ಇಳಿಬಿಟ್ಟಂತಹ ನೂಲಿನ ಎಳೆಗಳನ್ನು ಧರಿಸಿದ್ದರು. ಅವರು ನಮ್ಮ ಮೇಲೆ ಪವಿತ್ರ ನೀರನ್ನು ಸಿಂಪಡಿಸಿದರು ಮತ್ತು ನಮಗೆ ಸ್ವಲ್ಪ 'ಬಿಳಿ ಧೂಳು" (white earth ವಿಭೂತಿ? - ಪರಿಶೀ.)[27] ನೀಡಿದರು, ಈ ದೇಶದ ಕ್ರಿಶ್ಚಿಯನ್ನರು ತಮ್ಮ ಹಣೆಯ ಮೇಲೆ, ಎದೆಯ ಮೇಲೆ, ಕುತ್ತಿಗೆ ಮತ್ತು ಮುಂದೋಳಿನ ಮೇಲೆ ಇದನ್ನು ಹಚ್ಚಿಕೊಳ್ಳುತ್ತಾರೆ. ಅವರು ನಮ್ಮ ಮುಖ್ಯ ಕಫ್ತಾನನ ಮೇಲೆ ಕೂಡ ಪವಿತ್ರ ನೀರನ್ನು (ತೀರ್ಥ) ಸಿಂಪಡಿಸಿದರು ಮತ್ತು ಅವನಿಗೆ ಕೂಡ ಸ್ವಲ್ಪ ಬಿಳಿಧೂಳನ್ನು ನೀಡಿದರು. ಮುಖ್ಯ ಕಫ್ತಾನ ಅದನ್ನು ಆಮೇಲೆ ತೆಗೆದುಕೊಳ್ಳುತ್ತೇನೆ ಎಂದು ತಮ್ಮ ಪಕ್ಕ ನಿಂತಿದ್ದ ಸಹಾಯಕನ ಕೈಗೆ ಅದನ್ನು ಕೊಟ್ಟನು.

---

[26] "ಕ್ವಾಫೀಸ್" ಎಂದರೆ ಬ್ರಾಹ್ಮಣ ಪುರೋಹಿತರು. ರೆವರೆಂಡ್ ಜೆ.ಜೆ. ಜೌಸ್, ಕಾಜ್ (ಅರೇಬಿಕ್) ಎಂದರೆ 'ನ್ಯಾಯಾಧೀಶ' ಎಂದು ಸೂಚಿಸುತ್ತಾರೆ.

[27] ಬಿಳಿ ಧೂಳು (white earth) ಎಂದರೆ ಮಣ್ಣು, ಹಸುವಿನ ಸೆಗಣಿ, ಯಾಗ ಕುಂಡದ ಬೂದಿ, ಶ್ರೀಗಂಧ, ಇತ್ಯಾದಿಗಳನ್ನು ಅಕ್ಕಿನೀರಿನಲ್ಲಿ ಬೆರೆಸಿ ಮಾಡಿದ ಮಿಶ್ರಣವಾಗಿದೆ (Belnos, *The Sundya or Daily Prayer of the Brahmans*, Lond., 1851 ನೋಡಿ)

ಚರ್ಚ್‌ನ ಗೋಡೆಗಳ ಮೇಲೆ ತಲೆ ಮೇಲೆ ಕಿರೀಟ ಇರುವಂತಹ ಇತರ ಹಲವು ಸಂತರ ಚಿತ್ರಗಳನ್ನು ಚಿತ್ರಿಸಲಾಗಿದೆ. ಹಲ್ಲುಗಳು ಬಾಯಿಯಿಂದ ಒಂದು ಇಂಚು ಹೊರಚಾಚಿಕೊಂಡಿದ್ದು, ನಾಲ್ಕು ಅಥವಾ ಐದು ಕೈಗಳನ್ನು ಹೊಂದಿರುವಂತೆ ವಿವಿಧ ರೀತಿಯಲ್ಲಿ ಅವರನ್ನು ಚಿತ್ರಿಸಲಾಗಿದೆ.

ಈ ಚರ್ಚ್‌ನ ಕೆಳಗೆ ನಾವು ರಸ್ತೆಯುದ್ದಕ್ಕೂ ನೋಡಿದಂತಹ ದೊಡ್ಡ ಕಲ್ಲಿನ ಟ್ಯಾಂಕ್ ಇತ್ತು

{ ನಗರದ ಮೂಲಕ ಪ್ರಯಾಣ} ನಾವು ಆ ಜಾಗದಿಂದ ಹೊರಟು, ನಗರ (ಕ್ಯಾಲಿಕಟ್)ದ ಪ್ರವೇಶದ್ವಾರಕ್ಕೆ ಬಂದೆವು. ಅಲ್ಲಿ ನಮಗೆ ಇನ್ನೊಂದು ದೇವಾಲಯವನ್ನು ತೋರಿಸಲಾಯಿತು. ಇಲ್ಲಿ ಕೂಡ ನಾವು ಮೇಲೆ ವಿವರಿಸಿದಂತಹ ಚಿತ್ರಣವನ್ನೇ ಕಂಡೆವು. ಇಲ್ಲಿ ನಮ್ಮನ್ನು ನೋಡಲು ಎಷ್ಟು ಜನ ಸೇರಿದ್ದರೆಂದರೆ, ರಸ್ತೆಯಲ್ಲಿ ಮುಂದೆ ಸಾಗುವುದು ಅಸಾಧ್ಯವಾಯಿತು. ಹಾಗಾಗಿ ಅವರು ನಮ್ಮ ಕಥ್ತಾನ ಮತ್ತು ನಮ್ಮನ್ನು ಒಂದು ಮನೆಯಲ್ಲಿ ಇರಿಸಿದರು.

ರಾಜನು ನಮ್ಮ ಕಥ್ತಾನನನ್ನು ಜೊತೆಗೆ ಕರೆದುಕೊಂಡು ಬರಲು ಆಗಲೇ ನಮ್ಮ ಜೊತೆ ಇದ್ದ ಕೊತ್ವಾಲನ ಸಹೋದರನನ್ನು ಕಳುಹಿಸಿದನು. ಅವನು ಈ ಊರಿನ ನಾಯಕನಾಗಿದ್ದನು. ಅವನೊಂದಿಗೆ ಕೊಂಬು, ಕಹಳೆ, ಡೋಲು ಸಮೇತರಾಗಿ ಅವನ ಹಿಂಬಾಲಕರು ಬಂದರು, ಜೊತೆಗೆ ಸಿಡಿಮದ್ದುಗಳನ್ನು ಸಿಡಿಸಿದರು. ಸ್ಪೈನ್ ನಲ್ಲಿ ರಾಜನಿಗೆ ತೋರಿಸುವುದಕ್ಕಿಂತ ಹೆಚ್ಚಿನ ಗೌರವವನ್ನು ಅವರು ನಮ್ಮ ಕಥ್ತಾನನಿಗೆ ತೋರಿಸಿದರು. ಜನರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು. ನಮ್ಮನ್ನು ಸುತ್ತುವರಿದ ಜನರ ಜೊತೆಗೆ, ಅವರಲ್ಲಿ ಎರಡು ಸಾವಿರ ಶಸ್ತ್ರಸಜ್ಜಿತ ಸೈನಿಕರೇ ಇದ್ದರು, ಮನೆಗಳ ಸುತ್ತಮುತ್ತ, ಛಾವಣಿಗಳ ಮೇಲೆ ಜನರ ಹಿಂಡೇ ನೆರೆದಿತ್ತು.

ರಾಜನ ಅರಮನೆ[28]

ನಾವು ರಾಜನ ಅರಮನೆಯ ದಿಕ್ಕಿನಲ್ಲಿ ಮುಂದೆ ಸಾಗುತ್ತಿದ್ದಂತೆ, ಜನರ ಸಂಖ್ಯೆ ಕೂಡ ಹೆಚ್ಚಾಗುತ್ತಾ ಹೋಯಿತು. ನಾವು ಅಲ್ಲಿಗೆ ತಲುಪಿದಾಗ, ನಮ್ಮ ಕಥ್ತಾನನನ್ನು ಅನೇಕ ಗಣ್ಯರು ಮತ್ತು ನಾಯಕರು ಎದುರುಗೊಂಡರು ಮತ್ತು ಈಗಾಗಲೇ ಕಥ್ತಾನನ ಜೊತೆ ಇದ್ದವರನ್ನು ಸೇರಿಕೊಂಡರು. ಸೂರ್ಯಾಸ್ತವಾಗಲು ಇನ್ನೂ ಒಂದು ಗಂಟೆ ಇತ್ತು. ನಾವು ಅರಮನೆಯೊಳಗೆ ಹೋಗಲು, ಒಂದು ದ್ವಾರದ ಮೂಲಕ ಪ್ರವೇಶಿಸಿ, ಒಂದು ವಿಶಾಲವಾದ ಅಂಗಳದ ಮೂಲಕ ಹಾದುಹೋಗಬೇಕಿತ್ತು. ರಾಜನಿರುವ ಸ್ಥಳಕ್ಕೆ ತಲುಪುವ ಮೊದಲು, ನಾವು ನಾಲ್ಕು ಬಾಗಿಲುಗಳನ್ನು ಹಾದುಹೋದೆವು. ಹಾಗೆ ಹೋಗುವಾಗ ಸ್ವಲ್ಪ ನೂಕುನುಗ್ಗಲಾಯಿತು. ಕೊನೆಗೆ, ನಾವು ರಾಜನ ಆಸ್ಥಾನದ ದ್ವಾರವನ್ನು ತಲುಪಿದೆವು. ನಮ್ಮನ್ನು ಒಬ್ಬ ವಯಸ್ಸಾದ ಕುಳ್ಳನೆಯ ವ್ಯಕ್ತಿ ಸ್ವಾಗತಿಸಿದರು. ಆತ ನಮ್ಮ ಬಿಷಪ್‌ನ ಸ್ಥಾನದಲ್ಲಿ ಇರುವಾತ. ಚರ್ಚ್‌ನ ಎಲ್ಲಾ ವ್ಯವಹಾರಗಳಲ್ಲಿ ರಾಜನು ಆತನ ಸಲಹೆಯಂತೆ ನಡೆದುಕೊಳ್ಳುತ್ತಾನೆ. ನಮ್ಮ ಕಥ್ತಾನ ದ್ವಾರದ ಮೂಲಕ ಒಳಪ್ರವೇಶಿಸುತ್ತಿದ್ದಂತೆ, ಆತ ಕಥ್ತಾನನನ್ನು ತಬ್ಬಿಕೊಂಡನು. ಈ ಬಾಗಿಲಲ್ಲಿ ಒಳಪ್ರವೇಶಿಸುವಾಗ ಹಲವರು ಗಾಯಗೊಂಡರು[29], ನಾವು ಹೇಗೋ ನುಗ್ಗಿಕೊಂಡು ಒಳಪ್ರವೇಶಿಸಿದೆವು.

---

[28] ಈ ಅರಮನೆಯ ವಿವರಣೆಗಾಗಿ, *Travels of Pietro della Valle* (Hakluyt Society, 1892), ಪುಟಗಳು 367-377 ನೋಡಿ

[29] ಚಾಕುಗಳನ್ನು ಬಳಸಲಾಯಿತು ಎಂದು ಗೋಯೆಸ್ ಹೇಳುತ್ತಾರೆ.

ರಾಜನ ಆಸ್ಥಾನ , ಮೇ 28[30]

ರಾಜನು ಒಂದು ಸಣ್ಣ ಆಸ್ಥಾನದಲ್ಲಿ, ಹಸಿರು ವೆಲ್ವೆಟ್ ಬಟ್ಟೆ ಹಾಸಲಾದ ಮಂಚದ ಮೇಲೆ ಒರಗಿದ್ದನು, ಅದರ ಮೇಲೆ ಒಂದು ಉತ್ತಮವಾದ ಹಾಸಿಗೆ ಹಾಸಲಾಗಿತ್ತು. ಮತ್ತು ಅದರ ಮೇಲೆ ಇನ್ನೊಂದು ಹತ್ತಿಯ ಹಾಸು ಇತ್ತು. ಶುದ್ಧ ಬಿಳಿ ಬಣ್ಣದ ಈ ಹಾಸು ಯಾವುದೇ ಲಿನನ್ ಗಿಂತಲೂ ಉತ್ಕೃಷ್ಟವಾಗಿತ್ತು. ಅದರ ಮೇಲೆ ಜೋಡಿಸಿದ ಮೆತ್ತೆಗಳು ಕೂಡ ಇದೇ ರೀತಿ ಇದ್ದವು. ರಾಜನು ಎಡಗೈಯಲ್ಲಿ ಅರ್ಧ ಅಲ್ಮುಡೆ [8 ಪೈಂಟ್] ಸಾಮರ್ಥ್ಯವಿರುವ ದೊಡ್ಡ ಚಿನ್ನದ ಬಟ್ಟಲು [ಉಗುಳುದಾನಿ] ಹಿಡಿದುಕೊಂಡಿದ್ದನು. ಅದರ ಬಾಯಿ ಎರಡು ಪಾಲ್ಮಾ [16 ಇಂಚು]ದಷ್ಟು ಅಗಲವಿತ್ತು. ಇದು ನಿಜಕ್ಕೂ ಸಾಕಷ್ಟು ದೊಡ್ಡದಾಗಿತ್ತು. ಈ ದಾನಿಯಲ್ಲಿ ರಾಜನು ತಾನು ಜಗಿಯುತ್ತಿದ್ದ ಒಂದು ನಿರ್ದಿಷ್ಟ ಗಿಡಮೂಲಿಕೆಯ ಚರಟವನ್ನು ಉಗುಳಿದನು. ಈ ಗಿಡಮೂಲಿಕೆಯನ್ನು ಈ ದೇಶದ ಜನರು ಅದು ನೀಡುವ ಹಿತ ಅನುಭವಕ್ಕಾಗಿ ಜಗಿಯುತ್ತಾರೆ ಮತ್ತು ಅದನ್ನು ಅವರು ಆಟಂಬೋರ್ (*atambor*)[31] ಎಂದು ಕರೆಯುತ್ತಾರೆ. ರಾಜನ ಬಲಭಾಗದಲ್ಲಿ ಒಬ್ಬ ಮನುಷ್ಯ ತನ್ನ ಬಾಹುಗಳಿಂದ ತಬ್ಬಿಕೊಳ್ಳಬಹುದಾದಷ್ಟು ದೊಡ್ಡ ಗಾತ್ರದ ಒಂದು ಚಿನ್ನದ ಹರಿವಾಣ ಇತ್ತು. ಇದರಲ್ಲಿ ಗಿಡಮೂಲಿಕೆಗಳನ್ನು ಇಟ್ಟಿದ್ದರು. ಹಾಗೆಯೇ ಅನೇಕ ಬೆಳ್ಳಿಯ ಬಟ್ಟಲುಗಳೂ ಇದ್ದವು. ಮಂಚದ ಮೇಲಾವರಣವೆಲ್ಲವೂ ಚಿನ್ನದ ಲೇಪನದಿಂದ ಕೂಡಿತ್ತು.

ಕಥಾನ ಒಳಗೆ ಪ್ರವೇಶಿಸುತ್ತಿದ್ದಂತೆ, ಈ ದೇಶದ ಪದ್ಧತಿಯಂತೆ ತನ್ನ ಎರಡು ಕೈಗಳನ್ನು ಜೋಡಿಸಿ, ನಂತರ ಅವುಗಳನ್ನು ಸ್ವರ್ಗದ ಕಡೆಗೆ ಎತ್ತುವ ರೀತಿಯಲ್ಲಿ ಎತ್ತಿ ನಮಸ್ಕರಿಸಿದನು, ಇದು ಕ್ರಿಶ್ಚಿಯನ್ನರು ದೇವರನ್ನು ಬೇಡಿಕೊಳ್ಳುವಾಗ ಕೈಗಳನ್ನು ಮೇಲೆತ್ತಿ, ಇಳಿಸಿ, ನಂತರ ಅವುಗಳನ್ನು ತೆರೆದು ಪ್ರಾರ್ಥಿಸುವ ರೀತಿಯಲ್ಲಿ ಮಾಡುತ್ತಾರೆ. ರಾಜನು ತನ್ನ ಬಲಗೈಯಿಂದ ಕಥಾನನಿಗೆ ಹತ್ತಿರ ಬರುವಂತೆ ಸನ್ನೆ ಮಾಡಿದನು, ಆದರೆ ಕಥಾನ ರಾಜನ ಬಳಿ ಹೋಗಲಿಲ್ಲ, ಏಕೆಂದರೆ ರಾಜನಿಗೆ ಗಿಡಮೂಲಿಕೆಗಳನ್ನು ನೀಡುವ ಸೇವಕನನ್ನು ಹೊರತುಪಡಿಸಿ ಬೇರೆ ಯಾರೂ ರಾಜನ ಸಮೀಪಕ್ಕೆ ಹೋಗುವ ಪದ್ಧತಿ ಇಲ್ಲಿ ಇಲ್ಲ ಮತ್ತು ರಾಜನನ್ನು ಉದ್ದೇಶಿಸಿ ಮಾತನಾಡುವಾಗಲೂ ಬೇರೆಯವರು ತಮ್ಮ ಕೈಯನ್ನು ಬಾಯಿಯ ಮುಂದೆ ಹಿಡಿದು ದೂರದಿಂದಲೇ ಅರುಹುತ್ತಾರೆ. ರಾಜನು ಕಥಾನನನ್ನು ಸನ್ನೆ ಮಾಡಿ ಕರೆಯುವಾಗ, ನಮ್ಮನ್ನು ಕೂಡ ನೋಡಿದನು ಮತ್ತು ಅವನ ಬಳಿಯ ಕಲ್ಲು ಬೆಂಚಿನ ಮೇಲೆ, ಆತನಿಗೆ ಕಾಣುವಂತೆ ಕುಳಿತುಕೊಳ್ಳಲು ನಮಗೆ ಆದೇಶಿಸಿದನು. ನಮ್ಮ ಕೈಗಳಿಗೆ ನೀರು ಕೊಡಲು [ಕೈತೊಳೆಯಲು] ಮತ್ತು ಹಣ್ಣುಗಳನ್ನು ಕೊಡಲು ಆದೇಶಿಸಿದನು. ಅವರು ಕೊಟ್ಟ ಒಂದು ಹಣ್ಣು ಕಲ್ಲಂಗಡಿ ತರಹ ಇತ್ತು. ಅದರ ಹೊರಭಾಗವು ಒರಟಾಗಿತ್ತು ಆದರೆ ಒಳಭಾಗ ಸಿಹಿಯಾಗಿತ್ತು. ಇನ್ನೊಂದು ಹಣ್ಣು ಅಂಜೂರದ ಹಣ್ಣಿನಂತಿದ್ದು, ಬಹಳ ರುಚಿಕರವಾಗಿತ್ತು.[32] ನಮಗಾಗಿ ಈ ಹಣ್ಣುಗಳನ್ನು ಸಿದ್ಧಪಡಿಸಿದ ಆಳುಗಳು ಅಲ್ಲೇ ನಿಂತಿದ್ದರು; ರಾಜನು

---

[30] ಈ ಭೇಟಿಯ ಕುರಿತಂತೆ ಕೊರೆಯಾರ ವಿವರವಾದ ಆದರೆ ನಂಬಲು ಅರ್ಹವಲ್ಲದ ನಿರೂಪಣೆಗಾಗಿ, ಸ್ಟಾನ್ಲಿಯವರ ವಾಸ್ಕೋ ಡ ಗಾಮಾ (Stanley's *Vasco da Gama),* ಪುಟಗಳು 193-6 ನೋಡಿ

[31] ಆತಂಬೋರ್ ಎಂಬುದು ಅಡಕೆಗೆ ಬಳಸುವ ಅರೇಬಿಕ್ ಪದ ತಂಬೂರ್ ನ ಅಪಭ್ರಂಶ. ಇದು ಅಡಿಕೆ ಮರದ ಹಣ್ಣಾಗಿದ್ದು (Areca Catechu), ಇದನ್ನು ಭಾರತ, ಭಾರತೀಯ ದ್ವೀಪ ಸಮೂಹ ಮತ್ತು ದಕ್ಷಿಣ ಚೀನದಾದ್ಯಂತ ಎಲ್ಲರೂ ಜಗಿಯುತ್ತಾರೆ. ಇದರ ರಸವು ಹಲ್ಲುಗಳ ಬಣ್ಣವನ್ನು ಬದಲಾಯಿಸುತ್ತದೆ, ಆದರೆ ಉಸಿರನ್ನು ಹಿತಗೊಳಿಸುತ್ತದೆ ಮತ್ತು ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳಲಾಗುತ್ತದೆ. "ಎರ್ವಾ" (ಮೂಲಿಕೆ) ಈ ಹಣ್ಣಿನೊಂದಿಗೆ ಅಷ್ಟು ಸರಿಹೋಗುವುದಿಲ್ಲ. ಸಾಮಾನ್ಯವಾಗಿ ಇದನ್ನು ನಾಲ್ಕು ಹೋಳುಗಳನ್ನಾಗಿ ತುಂಡುಮಾಡಿ, ಅದನ್ನು ವೀಳ್ಯದೆಲೆಯಲ್ಲಿ ಸುತ್ತಿ, ಸುಣ್ಣ ಮತ್ತು ಅದರ ಒಗರು ರಸದೊಂದಿಗೆ ಜಗಿಯಲಾಗುತ್ತದೆ.

[32]ಇವು ಹಲಸಿನ ಹಣ್ಣು (ಆರ್ಟೊಕಾರ್ಪಸ್ ಇಂಟೆಗ್ರಿಫೋಲಿಯಾ) ಮತ್ತು ಬಾಳೆಹಣ್ಣುಗಳು.

ನಾವು ಹಣ್ಣು ತಿನ್ನುತ್ತಿರುವುದನ್ನು ನೋಡಿ ಮುಗುಳ್ನಕ್ಕು, ತನ್ನ ಪಕ್ಕ ಗಿಡಮೂಲಿಕೆಗಳನ್ನು ಕೊಡಲು ನಿಂತಿದ್ದ ಸೇವಕನ ಬಳಿ ಏನನ್ನೋ ಹೇಳಿದನು.

ನಂತರ, ತನ್ನ ಎದುರಿಗೆ ಕುಳಿತಿದ್ದ ಕಥ್ತಾನನನ್ನು ನೋಡಿ, ರಾಜನು, ಸಭೆಯಲ್ಲಿ ಕುಳಿತಿರುವವರು ಅತಿಗಣ್ಯ ವ್ಯಕ್ತಿಗಳು; ಕಥ್ತಾನ ಏನು ಹೇಳಲು ಬಯಸುತ್ತಾನೋ ಅದನ್ನು ಆತ ಅವರನ್ನು ಉದ್ದೇಶಿಸಿ ಹೇಳಬಹುದು, ಅವರು ಅದನ್ನು ತನಗೆ ಅರುಹುವರು, ಎಂದು ಹೇಳಿದನು. ಅದಕ್ಕೆ ಕಥ್ತಾನ ತಾನು ಪೋರ್ಚುಗಲ್ ದೇಶದ ರಾಜನ ರಾಯಭಾರಿ ಮತ್ತು ತನಗೆ ತನ್ನ ರಾಜನ ಸಂದೇಶವನ್ನು ರಾಜನಿಗೆ ಮಾತ್ರ ವೈಯಕ್ತಿಕವಾಗಿ ಹೇಳಲು ಅನುಮತಿ ಇದೆ ಎಂದು ಹೇಳಿದನು. ಅದು ಸರಿಯೇ ಎಂದು ಹೇಳಿದ ರಾಜನು ಕಥ್ತಾನನನ್ನು ಖಾಸಗಿ ಕೋಣೆಗೆ ಕರೆದೊಯ್ಯಲು ಸೂಚಿಸಿದನು. ಕಥ್ತಾನ ಕೋಣೆ ಪ್ರವೇಶಿಸುತ್ತಿದ್ದಂತೆ, ರಾಜನು ಕೂಡ ಎದ್ದು ಅವನೊಂದಿಗೆ ಸೇರಿಕೊಂಡನು. ನಾವು ಹೊರಗೆಯೇ ಉಳಿದುಕೊಂಡೆವು[33]. ಇದೆಲ್ಲವೂ ಸೂರ್ಯಾಸ್ತದ ಸಮಯದಲ್ಲಿ ಸಂಭವಿಸಿತು. ರಾಜನು ಎದ್ದ ತಕ್ಷಣ ಒಬ್ಬ ವಯಸ್ಸಾದ ಆಳು ರಾಜನು ಕುಳಿತಿದ್ದ ಆಸನವನ್ನು ತೆಗೆದನು, ಆದರೆ ತಟ್ಟೆಯನ್ನು ಅಲ್ಲೇ ಬಿಟ್ಟನು. ರಾಜನು ಕಥ್ತಾನನನ್ನು ಬರಮಾಡಿಕೊಂಡ ಕೊಠಡಿಗೆ ಹೋಗಿ, ಅಲ್ಲಿದ್ದ ಚಿನ್ನದ ದಾರದಿಂದ ಕಸೂತಿ ಮಾಡಿದ್ದ ಇನ್ನೊಂದು ಆಸನದ ಮೇಲೆ ವಿರಮಿಸಿ, ಕಥ್ತಾನ ಏನು ಹೇಳಲು ಬಯಸುತ್ತಾನೆ ಎಂದು ಕೇಳಿದನು.

ಕಥ್ತಾನನು ರಾಜನಿಗೆ ತಾನು ಪೋರ್ಚುಗಲ್‌ನ ದೇಶದ ರಾಜನ ರಾಯಭಾರಿಯಾಗಿರುವುದಾಗಿಯೂ ಮತ್ತು ಪೋರ್ಚುಗಲ್ ನ ರಾಜನು ಅನೇಕ ದೇಶಗಳ ಅಧಿಪತಿಯಾಗಿರುವುದಾಗಿಯೂ, ಮತ್ತು ಅವನು ಈ ಭಾಗಗಳ ಯಾವುದೇ ರಾಜನಿಗಿಂತಲೂ ಎಲ್ಲಾ ರೀತಿಯಲ್ಲೂ ಅತಿ ಹೆಚ್ಚಿನ ಸಂಪತ್ತನ್ನು ಹೊಂದಿರುವುದಾಗಿಯೂ ಹೇಳಿದನು; ತಮ್ಮಂತೆಯೇ ಕ್ರಿಶ್ಚಿಯನ್ ರಾಜರು ಜಗತ್ತಿನ ಈ ಭಾಗದಲ್ಲಿ ಇದ್ದಾರೆ ಎಂದು ತಿಳಿದಿದ್ದರಿಂದ, ಪೋರ್ಚುಗಲ್ ದೇಶದ ರಾಜನ ಪೂರ್ವಜರು ಇಂಡಿಯಾವನ್ನು ಕಂಡುಹಿಡಿಯಲು ಕಳೆದ ಅರವತ್ತು ವರ್ಷಗಳಿಂದ ಪ್ರತಿವರ್ಷ ಹಡಗುಗಳನ್ನು ಕಳುಹಿಸುತ್ತಲೇ ಇದ್ದಾರೆ ಎಂದು ಹೇಳಿದನು. ಈ ದೇಶವನ್ನು ಕಂಡುಹಿಡಿಯುವಂತೆ ಆದೇಶಿಸಲು ಅವರಿಗಿದ್ದ ಪ್ರೇರೇಪಣೆಗೆ ಇದೇ ಕಾರಣ; ಚಿನ್ನ ಅಥವಾ ಬೆಳ್ಳಿಯನ್ನು ಹುಡುಕಿಕೊಂಡು ಅವರು ಹೊರಟಿದ್ದಲ್ಲ; ಅದು ತಮ್ಮ ದೇಶದಲ್ಲಿಯೇ ಧಾರಾಳವಾಗಿ ಇದೆ, ಎಂದು ಕಥ್ತಾನ ರಾಜನಿಗೆ ಅರುಹಿದನು. ಇಲ್ಲಿಯ ತನಕ ಪೋರ್ಚುಗಲ್ ನ ರಾಜನು ಕಳುಹಿಸುತ್ತಿದ್ದ ಕಥ್ತಾನರು ತಮ್ಮ ಹಡಗುಗಳಲ್ಲಿ ಶೇಖರಿಸಿಟ್ಟ ಆಹಾರ ಸಾಮಗ್ರಿಗಳು ಖಾಲಿಯಾಗುವವರೆಗೂ, ಅಂದರೆ ಒಂದು ಅಥವಾ ಎರಡು ವರ್ಷ ಅನ್ವೇಷಣೆ ಮುಂದುವರಿಸುತ್ತಾ, ಯಶಸ್ವಿಯಾಗದೆ ನಂತರ ಪೋರ್ಚುಗಲ್‌ಗೆ ಹಿಂತಿರುಗುತ್ತಿದ್ದರು, ಎಂದು ಕಥ್ತಾನ ರಾಜನಿಗೆ ಹೇಳಿದನು. ಈಗ ಆಳುತ್ತಿರುವ ರಾಜನ ಹೆಸರು ಡೋಮ್ ಮ್ಯಾನುಯೆಲ್ ಎಂದಾಗಿದ್ದು, ಅವನು ಮೂರು ಹಡಗುಗಳನ್ನು ನಿರ್ಮಿಸಲು ಆದೇಶಿಸಿ, ಅದಕ್ಕೆ ತನ್ನನ್ನು ಮುಖ್ಯ ಕಥ್ತಾನನನ್ನಾಗಿ ನೇಮಿಸಿ, ಇಂಡಿಯಾದ ಕ್ರೈಸ್ತ ರಾಜನನ್ನು ಕಂಡುಹಿಡಿಯುವವರೆಗೂ ಪೋರ್ಚುಗಲ್ಲಿಗೆ ಹಿಂತಿರುಗದಂತೆ ಆದೇಶಿಸಿರುವುದಾಗಿಯೂ, ಒಂದು ವೇಳೆ ತಾನು ಈ ಪ್ರಯತ್ನದಲ್ಲಿ ವಿಫಲನಾದರೆ, ತನ್ನ ತಲೆ ಕಡಿಯುವುದಾಗಿ ರಾಜನು ಹೇಳಿರುವುದಾಗಿಯೂ ರಾಜನಿಗೆ ಅರುಹಿದನು.

---

[33] ಗೋಯೆಸ್ (c. 41) ಪ್ರಕಾರ, ಗಾಮಾ ಅವರ ಜೊತೆ ಅನುವಾದಕರಾಗಿ ಫರ್ನಾವೊ ಮಾರ್ಟಿನ್ಸ್ ಇದ್ದರೆ, ರಾಜನ ಜೊತೆ ಅವರಿಗೆ ತಾಂಬೂಲ ಕೊಡುವ ಪ್ರಧಾನ ಬ್ರಾಹ್ಮಣರು ಮತ್ತು ಅವರ ರಾಜಾಧಿಕಾರಿ (ವಿದೋರ್ ಡಾ ಫಜೆಂಡಾ) ಇದ್ದರು. ಇವರು ತನ್ನ ವಿಶ್ವಾಸಾರ್ಹ ವ್ಯಕ್ತಿಗಳು ಎಂದು ರಾಜನು ಹೇಳಿದನು.

ಒಂದು ವೇಳೆ ರಾಜನನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾದರೆ, ಆತನಿಗೆ ಸಮರ್ಪಿಸಲು ಎರಡು ಪತ್ರಗಳನ್ನು[34] ಪೋರ್ಚುಗಲ್ಲಿನ ರಾಜನು ಕಥ್ತಾನನ ಸುಪರ್ದಿಗೆ ವಹಿಸಿರುವುದಾಗಿಯೂ ಮತ್ತು ಅದನ್ನು ಮಾರನೆ ದಿನ ತಂದು ಒಪ್ಪಿಸುವುದಾಗಿಯೂ ಕಥ್ತಾನನು ಹೇಳಿದನು; ಮತ್ತು ಕೊನೆಯಲ್ಲಿ, ಪೋರ್ಚುಗಲ್‌ನ ರಾಜನು ಈ ದೇಶದ ರಾಜನ ಸ್ನೇಹಿತ ಮತ್ತು ಸಹೋದರನಾಗಲು ಬಯಸುತ್ತಾನೆ ಎಂಬ ಸಂದೇಶವನ್ನು ಕೊಡಲು ತನಗೆ ಆದೇಶಿಸಲಾಗಿದೆ ಎಂಬುದನ್ನು ಕೂಡ ಹೇಳಿದನು.

ಇದಕ್ಕೆ ಉತ್ತರವಾಗಿ ರಾಜನು ಅವನಿಗೆ ಸ್ವಾಗತವನ್ನು ಕೋರಿದನು ಮತ್ತು ತಾನು ಪೋರ್ಚುಗಲ್ ನ ರಾಜನನ್ನು ಸ್ನೇಹಿತ ಮತ್ತು ಸಹೋದರನಂತೆ ಕಾಣುವೆನು ಎಂದು ಹೇಳಿದನು ಮತ್ತು ಕಥ್ತಾನನು ಹಿಂದಿರುಗುವಾಗ ಅವನೊಂದಿಗೆ ಪೋರ್ಚುಗಲ್ ಗೆ ತನ್ನ ರಾಯಭಾರಿಗಳನ್ನು ಕಳುಹಿಸುವುದಾಗಿಯೂ ಹೇಳಿದನು. ಇದು ನಮ್ಮ ಕಥ್ತಾನ ಬೇಡಿಕೆಗೆ ಅನುಸಾರವಾಗಿತ್ತು, ಏಕೆಂದರೆ, ತನ್ನ ಜೊತೆ ಸಾಕ್ಷಿಯಾಗಿ ಈ ದೇಶದ ಕೆಲವರನ್ನು ಕರೆದುಕೊಂಡು ಹೋಗದೆ ಇದ್ದರೆ, ರಾಜನ ಮುಂದೆ ಹೋಗಲು ತನಗೆ ಧೈರ್ಯ ಇರದು ಎಂದು ನಮ್ಮ ಕಥ್ತಾನ ನಟಿಸಿದ್ದ.

ಕೊಠಡಿಯಲ್ಲಿ ರಾಜ ಮತ್ತು ಕಥ್ತಾನನ ನಡುವೆ ಈ ಸಂದೇಶ ಅರುಹುವಿಕೆಯ ಜೊತೆಗೆ ಇನ್ನಿತರ ಮಾತುಕತೆಗಳು ನಡೆದವು. ಆಗಲೇ ತಡರಾತ್ರಿಯಾದ ಕಾರಣ, ರಾಜನು ಕಥ್ತಾನನ ಬಳಿ ಅವನು ಯಾರ ಜೊತೆ ರಾತ್ರಿ ತಂಗಲು ಇಷ್ಟಪಡುತ್ತಾನೆ, ಕ್ರಿಶ್ಚಿಯನ್ನರ ಜೊತೆಯೋ ಅಥವಾ ಮೂರ್(ಮುಸ್ಲಿಂ ವರ್ತಕ)ಗಳ ಜೊತೆಯೋ ಎಂದು ಕೇಳಿದನು. ಇದಕ್ಕೆ ಕಥ್ತಾನನು ಇವರಿಬ್ಬರಲ್ಲಿ ಯಾರ ಜೊತೆಗೂ ಇರಬಯಸದೆ ತಾನೊಬ್ಬನೇ ಇರುವಂತಹ ವಸತಿ ನೀಡಬೇಕೆಂದು ಕೇಳಿಕೊಂಡನು. ರಾಜನು ಅದಕ್ಕೆ ಒಪ್ಪಿ, ತಾನು ಅದೇ ರೀತಿ ಆದೇಶಿಸುತ್ತೇನೆ ಎಂದು ಹೇಳಿದ ಮೇಲೆ, ಕಥ್ತಾನನು ರಾಜನಿಂದ ಬೀಳ್ಕೊಂಡು ನಾವಿದ್ದ ಸ್ಥಳಕ್ಕೆ, ಅಂದರೆ ಬೆಳಕಿಗಾಗಿ ದೊಡ್ಡ ದೀಪದ ಸ್ತಂಭವನ್ನು ನಿಲ್ಲಿಸಿದ್ದ ಪಡಸಾಲೆಗೆ ಬಂದನು. ಆ ವೇಳೆಗಾಗಲೇ ರಾತ್ರಿ ನಾಲ್ಕು ಗಂಟೆ ಕಳೆದಿತ್ತು[35].

[ಒಂದು ರಾತ್ರಿಯ ವಾಸ್ತವ್ಯ] ನಂತರ ನಾವೆಲ್ಲರೂ ಕಥ್ತಾನನೊಂದಿಗೆ ನಮ್ಮ ವಸತಿಗೃಹಗಳನ್ನು ಹುಡುಕುತ್ತಾ ಹೊರಟೆವು ಮತ್ತು ಲೆಕ್ಕವಿಲ್ಲದಷ್ಟು ಜನರು ನಮ್ಮನ್ನು ಹಿಂಬಾಲಿಸಿಕೊಂಡು ಬಂದರು. ಮಳೆ ಎಷ್ಟು ಜೋರಾಗಿ ಸುರಿಯುತ್ತಿತ್ತೆಂದರೆ ಬೀದಿ ತುಂಬಾ ನೀರು ಹರಿಯುತ್ತಿತ್ತು. ಕಥ್ತಾನನನ್ನು ಆರು ಜನರು [ಪಲ್ಲಕ್ಕಿಯಲ್ಲಿ] ಹೊತ್ತುಕೊಂಡು ನಡೆದರು. ನಗರದ ಮೂಲಕ ಹಾದುಹೋಗಲು ಎಷ್ಟು ಸಮಯ ಹಿಡಿಯಿತೆಂದರೆ ಕಥ್ತಾನನು ಸುಸ್ತಾಗಿ ತನ್ನನ್ನು ಕರೆದೊಯ್ಯುತ್ತಿದ್ದ ರಾಜನ ಕಾರ್ಯಾಧಿಕಾರಿಯ ಬಳಿ ತನ್ನ ಅಸಮಧಾನವನ್ನು ವ್ಯಕ್ತಪಡಿಸಿದನು. ಅವನು ಮುಸ್ಲಿಂ ಸಮುದಾಯಕ್ಕೆ ಸೇರಿದ (ಮೂರ್, ಮೋಪ್ಲಾ- ವಾಯುವ್ಯ ಆಫ್ರಿಕಾ ಮೂಲದ ಮುಸ್ಲಿಂ ಧರ್ಮಕ್ಕೆ ಸೇರಿದ ವ್ಯಕ್ತಿ) ಒಬ್ಬ ಗಣ್ಯ ವ್ಯಕ್ತಿಯಾಗಿದ್ದನು. ಹಾಗಾಗಿ ಆತನು

---

[34] ಇವು ಬಾರ್ರೋಸ್ ಮತ್ತು ಇತರ ಇತಿಹಾಸಕಾರರು ಉಲ್ಲೇಖಿಸುವ ಪತ್ರಗಳು. ಇವುಗಳನ್ನು ಗಾಮಾ ಅವರಿಗೆ ಪೋರ್ಚುಗಲ್ ನಿಂದ ಹೊರಡುವ ಸಂದರ್ಭದಲ್ಲಿ ನೀಡಲಾಗಿತ್ತು. ಹಾಗಾಗಿ ವಾಸ್ಕೊ ಮತ್ತು ಅವನ ಸಹೋದರ ಪೌಲೊ ಕ್ಯಾಲಿಕಟ್ ತಲುಪುವ ಮೊದಲು ಈ ಪತ್ರಗಳನ್ನು ತಾವೇ ಬರೆದು, ರಾಜನ ಸಹಿಯನ್ನು ನಕಲಿ ಮಾಡಿದರು ಎಂದು ಕೊರೆಯಾ ಅವರು ಹೇಳುವುದು ನಂಬಲು ಅಸಾಧ್ಯವಾಗಿದೆ. ಅಷ್ಟೇ ಅಲ್ಲದೆ ಗಾಮಾ ಅವರು ತಮ್ಮನ್ನು ಐವತ್ತು ಹಡಗುಗಳ ನೌಕಾಪಡೆಯೊಂದಿಗೆ ಕಳುಹಿಸಲಾಗಿತ್ತು ಮತ್ತು ತಮ್ಮ ಈ ಪ್ರಯಾಣವು ಎರಡು ವರ್ಷಗಳನ್ನು ತೆಗೆದುಕೊಂಡಿತು ಎಂದು "ರೊಟೇರೊ" ದಲ್ಲಿ ಹೇಳಿದರು ಎನ್ನುವುದು ಕೂಡ ನಂಬಲು ಅಸಾಧ್ಯವಾಗಿದೆ (ಸ್ಟಾನ್ಲಿಯ ವಾಸ್ಕೋ ಡ ಗಾಮಾ, ಪುಟಗಳು 168, 173). "ಮಹಾನ್" ವಾಸ್ಕೊ ಹಲವು ತಪ್ಪುಗಳನ್ನು ಮಾಡಿರಬಹುದು ಆದರೆ ಅವನು ನಕಲಿ ಸಹಿ ಮಾಡಿದ ಎಂಬ ಆರೋಪವನ್ನು ನಾವು ಸೂಕ್ತ ಪುರಾವೆ ಇಲ್ಲದೆ ಅವನ ಮೇಲೆ ಹೊರಿಸುವುದು ತಪ್ಪು. ಸತ್ಯವಂತಿಕೆಯ ಬಗ್ಗೆ ಮಾತನಾಡುವುದಾದರೆ ಆ ಕಾಲದ ರಾಜತಾಂತ್ರಿಕರು ಅದರ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಂಡಂತಿರಲಿಲ್ಲ ಎಂದು ತೋರುತ್ತದೆ.

[35] ಅಂದರೆ ರಾತ್ರಿ ಸುಮಾರು 10 ಗಂಟೆಯಾಗಿತ್ತು

ಕಥ್ತಾನನನ್ನು ತನ್ನ ಸ್ವಂತ ಮನೆಗೆ ಕರೆದೊಯ್ದನು (ಮಳೆ ನಿಲ್ಲುವವರೆಗೆ ಅಲ್ಲಿರಲು) ಮತ್ತು ನಮ್ಮನ್ನು ಅವನ ಮನೆಯ ಪಡಸಾಲೆಯಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದನು. ಆ ಪಡಸಾಲೆಯನ್ನು ಹೆಂಚುಗಳಿಂದ ಮುಚ್ಚಲಾಗಿತ್ತು ಮತ್ತು ನೆಲದ ಮೇಲೆ ಅನೇಕ ನೆಲಹಾಸುಗಳನ್ನು ಹಾಸಲಾಗಿತ್ತು. ಇಲ್ಲಿ ಕೂಡ ಮತ್ತು ರಾಜನ ಅರಮನೆಯಲ್ಲಿದ್ದಂತೆ ಎರಡು ದೊಡ್ಡ ದೀಪದ ಕಂಬಗಳಿದ್ದವು. ಈ ಕಂಬಗಳಿಗೆ ಲೋಹದ ದೊಡ್ಡ ದೀಪದ ಬಟ್ಟಲುಗಳನ್ನು ಜೋಡಿಸಲಾಗಿದ್ದು, ಅವುಗಳಲ್ಲಿ ಎಣ್ಣೆ ಅಥವಾ ಬೆಣ್ಣೆಯನ್ನು ತುಂಬಿಸಲಾಗಿತ್ತು. ಪ್ರತಿ ದೀಪದ ಬಟ್ಟಲಿನಲ್ಲಿ ನಾಲ್ಕು ಬತ್ತಿಗಳಿದ್ದವು. ಇವು ಸಾಕಷ್ಟು ಬೆಳಕು ಕೊಡುತ್ತಿದ್ದವು ಇವುಗಳನ್ನು ದೀವಟಿಗೆಗಳ ಬದಲು ಬಳಸುತ್ತಿದ್ದರು.

ಅದೇ ಮುಸ್ಲಿಂ ವರ್ತಕನು ನಂತರ ಕಥ್ತಾನನನ್ನು ತನ್ನ ವಸತಿಗೃಹಕ್ಕೆ ಕರೆದೊಯ್ಯಲು ಒಂದು ಕುದುರೆಯನ್ನು ತರಿಸಿದನು. ಆದರೆ ಅದಕ್ಕೆ ತಡಿ ಇರದ ಕಾರಣ ಕಥ್ತಾನನು ಅದನ್ನು ಏರಲು ನಿರಾಕರಿಸಿದನು (ಇದು ಅಂದಿನ ಕ್ಯಾಲಿಕೋಟ್ ನಲ್ಲಿ ರೂಢಿಯಲ್ಲಿತ್ತು). ನಂತರ ನಾವು ನಮ್ಮ ವಸತಿಗೃಹದೆಡೆಗೆ ಹೊರಟೆವು. ನಾವು ಅಲ್ಲಿಗೆ ತಲುಪಿದಾಗ ನಮ್ಮ ಹಡಗಿನಿಂದ ನಮ್ಮ ಕೆಲವು ಸಹಯಾತ್ರಿಗಳು ಕಥ್ತಾನನ ಹಾಸಿಗೆ ಮತ್ತು ಕಥ್ತಾನ ರಾಜನಿಗೆ ಉಡುಗೊರೆಯಾಗಿ ಕೊಡಲು ತಂದ ಹಲವು ವಸ್ತುಗಳೊಂದಿಗೆ ಅಲ್ಲಿಗೆ ತಲುಪಿದ್ದರು.[36]

[ರಾಜನಿಗೆ ಉಡುಗೊರೆಗಳು]

ಮಂಗಳವಾರ [ಮೇ 29] ಕಥ್ತಾನನು ರಾಜನಿಗೆ ಕಳುಹಿಸಲು ಈ ಕೆಳಗಿನ ವಸ್ತುಗಳನ್ನು ಸಿದ್ಧಪಡಿಸಿಕೊಂಡನು. ಅವು ಯಾವುವೆಂದರೆ, ಹನ್ನೆರಡು ತುಂಡು ಲ್ಯಾಂಬೆಲ್,[37] (ಅಲಂಕೃತ ಶಿರವಸ್ತ್ರ), ನಾಲ್ಕು ಕಡುಗೆಂಪು ಗವುಸುಗಳು (ನಿಲುವಂಗಿಯ ಭಾಗವಾಗಿ ಅಥವಾ ಪ್ರತ್ಯೇಕವಾಗಿ ತಲೆ ಮತ್ತು ಕತ್ತನ್ನು ಮುಚ್ಚುವ ವಸ್ತ್ರ), ಆರು ಟೋಪಿಗಳು, ನಾಲ್ಕು ಹವಳದ ಸರಗಳು, ಆರು ಕೈತೊಳೆಯುವ ಬೇಸಿನ್ನುಗಳನ್ನೊಳಗೊಂಡ ಒಂದು ಪೆಟ್ಟಿಗೆ, ದೊಡ್ಡ ಸಕ್ಕರೆ ಡಬ್ಬ, ಎರಡು ಪೀಪಾಯಿ ಎಣ್ಣೆ ಮತ್ತು ಎರಡು ಪೀಪಾಯಿ ಜೇನುತುಪ್ಪ. ರಾಜನ ಪ್ರತಿನಿಧಿಯಾಗಿರುವ ಮುಸ್ಲಿಂ ವರ್ತಕ, ಅವನ ಕಾರ್ಯಾಧಿಕಾರಿ ಮತ್ತು ಕೊತ್ವಾಲನಿಗೆ ತಿಳಿಸದೆ ರಾಜನಿಗೆ ಏನನ್ನೂ ಕಳುಹಿಸಬಾರದು ಎಂಬ ಪದ್ಧತಿಯಂತೆ, ಕಥ್ತಾನನು ತನ್ನ ಉದ್ದೇಶವನ್ನು ಅವರಿಗೆ ತಿಳಿಸಿದನು. ಅವರು ಬಂದು ಕಥ್ತಾನ ಕೊಡಲು ಉದ್ದೇಶಿಸಿದ ಉಡುಗೊರೆಗಳನ್ನು ನೋಡಿ, ನಕ್ಕು ಬಿಟ್ಟರು. ಇವು ರಾಜನಿಗೆ ಅರ್ಪಿಸಲು ಯೋಗ್ಯವಾದ ವಸ್ತುಗಳಲ್ಲ; ಮೆಕ್ಕಾದಿಂದ ಬರುವ ಅಥವಾ ಭಾರತದ ಯಾವುದೇ ಭಾಗದಲ್ಲಿರುವ ಬಡ ವ್ಯಾಪಾರಿ ಕೂಡ ಇದಕ್ಕಿಂತ ಹೆಚ್ಚು ನೀಡಬಲ್ಲ ಎಂದು ಅವರು ಹೇಳಿದರು. ರಾಜನು ಇವು ಯಾವುವನ್ನೂ ಸ್ವೀಕರಿಸಲಾರ, ಏನಾದರೂ ಕೊಡಬೇಕೆಂದಿದ್ದರೆ ಅದು ಚಿನ್ನದ ವಸ್ತುವಾಗಿರಬೇಕು, ಎಂದು ಅವರು ಹೇಳಿದರು. ಇದನ್ನು ಕೇಳಿದ ಕಥ್ತಾನ ಖೇದಗೊಂಡನು. ತಾನು ಚಿನ್ನವನ್ನು ತಂದಿಲ್ಲವೆಂದು ಹೇಳಿದನು, ಮೇಲಾಗಿ, ತಾನು ವ್ಯಾಪಾರಿಯಲ್ಲ, ಒಬ್ಬ ರಾಯಭಾರಿ ಎಂದು ಹೇಳಿದನು. ತಾನು ತನ್ನ ಬಳಿಯಿರುವುದನ್ನು ಕೊಡಲು ತಂದಿರುವುದಾಗಿಯೂ [ಖಾಸಗಿ ಉಡುಗೊರೆ], ಅದು ರಾಜ ಕಳುಹಿಸಿದ ಉಡುಗೊರೆ ಅಲ್ಲ[38], ಎಂದೂ ಹೇಳಿದನು. ಒಂದು ವೇಳೆ ಪೋರ್ಚುಗಲ್‌ನ ರಾಜನು ಅವನನ್ನು ಮತ್ತೆ ಇಲ್ಲಿಗೆ ಕಳುಹಿಸಿದರೆ,

---

[36] ಜಿ. ಕೊರೆಯಾ ಅವರ ಹೆಚ್ಚು ನಂಬಲು ಅರ್ಹವಲ್ಲದ ನಿರೂಪಣೆಯ ಪ್ರಕಾರ, ಕಥ್ತಾನನು ಗೋದಾಮಿನಲ್ಲಿ ಮಲಗಿದ್ದನು. ಇದನ್ನು ಸಂದರ್ಶಕರಿಗಾಗಿ ಮೊದಲೇ ಸಜ್ಜುಗೊಳಿಸಲಾಗಿತ್ತು. ಅದರ ವಿವರಣೆಯನ್ನು ಈಗಷ್ಟೆ ಕೊಡಲಾಗಿದೆ.

[37] ಲ್ಯಾಂಬೆಲ್, ಪಟ್ಟೆ ಪಟ್ಟೆಯ ಬಟ್ಟೆ, ಟಿಪ್ಪಣಿ 3, p. 41, ನೋಡಿ.

[38] ವಾಸ್ತವದಲ್ಲಿ, ವಾಸ್ಕೋ ಡ ಗಾಮಾ ಈ ಯಾನವನ್ನು ಕೈಗೊಳ್ಳುವಾಗ, ಅಗತ್ಯವಾದ ಸರಕು ಸಾಮಗ್ರಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲಿರಲಿಲ್ಲ. ಅನುಬಂಧದಲ್ಲಿ ಕೊಟ್ಟಿರುವ ರಾಜನ ಪತ್ರದಿಂದ ಇದು ನಮಗೆ ಗೊತ್ತಾಗುತ್ತದೆ.

ಉತ್ಕೃಷ್ಟವಾದ ಉಡುಗೊರೆಗಳನ್ನು ತರುವುದಾಗಿಯೂ ಮತ್ತು ಕ್ಯಾಮೊಲಿಮ್[39] ರಾಜ ಈ ವಸ್ತುಗಳನ್ನು ಸ್ವೀಕರಿಸುವುದಿಲ್ಲವಾದಲ್ಲಿ, ಅವುಗಳನ್ನು ಮತ್ತೆ ಹಡಗುಗಳಿಗೆ ಹಿಂತಿರುಗಿಸುವುದಾಗಿ ಹೇಳಿದನು. ಅದಕ್ಕೆ ಅವರು ತಾವು ಈ ಉಡುಗೊರೆಗಳನ್ನು ರಾಜನಿಗಾಗಿ ತೆಗೆದುಕೊಂಡು ಹೋಗುವುದಿಲ್ಲವೆಂದೂ ಮತ್ತು ಕಫ್ತಾನನು ತಾನಾಗೇ ಅವುಗಳನ್ನು ತೆಗೆದುಕೊಂಡು ಹೋಗಲೂ ಒಪ್ಪಿಗೆ ಕೊಡುವುದಿಲ್ಲವೆಂದೂ ಘೋಷಿಸಿದರು. ಅವರು ಹೋದ ಮೇಲೆ ಅಲ್ಲಿಗೆ ಬಂದ ವಾಯುವ್ಯ ಆಫ್ರಿಕಾ ಮೂಲದ ಕೆಲವು ಮುಸ್ಲಿಂ ವ್ಯಾಪಾರಿಗಳು ರಾಜನಿಗೆ ಕಳುಹಿಸಲು ಕಫ್ತಾನ ತಂದ ಉಡುಗೊರೆಗಳನ್ನು ನೋಡಿ, ಹೀಯಾಳಿಸಿದರು.

ತಾನು ತಂದ ಉಡುಗೊರೆಗಳನ್ನು ಅವರು ರಾಜನಿಗೆ ತಲುಪಿಸಲು ಖಂಡಿತ ಸಿದ್ಧರಿಲ್ಲ ಎಂಬುದನ್ನು ಕಂಡ ಕಫ್ತಾನನು, ಅವರು ಉಡುಗೊರೆಯನ್ನು ಅರಮನೆಗೆ ಕಳುಹಿಸಲು ಅನುಮತಿಸುವುದಿಲ್ಲವಾದ್ದರಿಂದ ತಾನು ರಾಜನೊಂದಿಗೆ ಮಾತನಾಡಿ, ನಂತರ ತನ್ನ ಹಡಗುಗಳಿಗೆ ಹಿಂತಿರುಗುತ್ತೇನೆ ಎಂದು ಹೇಳಿದ. ಅವರು ಇದಕ್ಕೆ ಸಮ್ಮತಿ ಸೂಚಿಸಿದರು ಮತ್ತು ಅವನು ಸ್ವಲ್ಪ ಸಮಯ ಕಾದರೆ ಅವರು ಕೂಡ ತಮ್ಮ ಕೆಲಸ ಮುಗಿಸಿ ಹಿಂತಿರುಗಿ, ಅವನೊಂದಿಗೆ ಅರಮನೆಗೆ ಬರುವುದಾಗಿ ಹೇಳಿದರು. ಕಫ್ತಾನ ಅವರಿಗಾಗಿ ಇಡೀ ದಿನ ಕಾದನು, ಆದರೆ ಅವರು ಹಿಂತಿರುಗಲಿಲ್ಲ. ಕಫ್ತಾನನಿಗೆ ತಾನು ಇಂತಹ ಆಲಸಿ ಮತ್ತು ವಿಶ್ವಾಸಾರ್ಹವಲ್ಲದ ಜನರ ಜೊತೆ ಸಿಕ್ಕಿಹಾಕಿಕೊಂಡಿದ್ದಕ್ಕೆ ತುಂಬಾ ಕೋಪ ಬಂತು ಮತ್ತು ಅವರನ್ನು ಬಿಟ್ಟು ತನ್ನ ಪಾಡಿಗೆ ತಾನು ರಾಜನನ್ನು ನೋಡಲು ಅರಮನೆಗೆ ಹೋಗಲು ಉದ್ದೇಶಿಸಿದನು. ಆದರೆ ಸ್ವಲ್ಪ ಯೋಚನೆ ಮಾಡಿದ ನಂತರ ಮರುದಿನದವರೆಗೆ ಕಾಯುವುದು ಉತ್ತಮ ಎಂದು ಭಾವಿಸಿದನು. ನಾವು ಗಮನವನ್ನು ಬೇರೆಡೆಗೆ ತಿರುಗಿಸಿದೆವು, ಇಡೀ ದಿನ ತುತ್ತೂರಿಗಳ ದನಿಗೆ, ಹಾಡುತ್ತಾ ಕುಣಿಯುತ್ತಾ ಆನಂದದಿಂದ ಸಮಯ ಕಳೆದೆವು.

[ಎರಡನೆಯ ಭೇಟಿ, ಮೇ ೩೦.] ಬುಧವಾರ ಬೆಳಿಗ್ಗೆ ಮುಸ್ಲಿಂ ವರ್ತಕರು ಹಿಂತಿರುಗಿದರು, ಕಫ್ತಾನ ಮತ್ತು ನಮ್ಮನ್ನು ಅವರ ಜೊತೆ ಅರಮನೆಗೆ ಕರೆದೊಯ್ದರು. ಅರಮನೆಯು ಶಸ್ತ್ರಧಾರಿಗಳಿಂದ ಕಿಕ್ಕಿರಿದಿತ್ತು. ನಮ್ಮ ಕಫ್ತಾನನು ತನ್ನನ್ನು ಕರೆದುಕೊಂಡು ಬಂದವರ ಜೊತೆ ಒಟ್ಟು ನಾಲ್ಕು ಗಂಟೆಗಳ ಕಾಲ, ರಾಜನ ಆಸ್ಥಾನದ ಬಾಗಿಲಿನ ಹೊರಗೆ ಕಾಯುತ್ತಿದ್ದನು. ರಾಜನು ಅವನನ್ನು ಬರಹೇಳಲು ಸಂದೇಶ ಕಳುಹಿಸಿದಾಗ ಮಾತ್ರ ಬಾಗಿಲು ತೆರೆಯಿತು. ತನ್ನ ಆಯ್ಕೆಯ ಇಬ್ಬರೊಂದಿಗೆ ಮಾತ್ರ ರಾಜನನ್ನು ಭೇಟಿ ಮಾಡಲು ಆತನಿಗೆ ಆದೇಶ ನೀಡಲಾಯಿತು. ಕಫ್ತಾನನು ತನ್ನೊಂದಿಗೆ ತನ್ನ ಮಾತನ್ನು ಅನುವಾದಿಸಿ ಹೇಳಬಲ್ಲ ಫರ್ನಾವೊ ಮಾರ್ಟಿನ್ಸ್ ಮತ್ತು ತನ್ನ ಕಾರ್ಯದರ್ಶಿ[40]ಯನ್ನು ಜೊತೆಗೆ ಕರೆದೊಯ್ಯಲು ಬಯಸುವುದಾಗಿ ಹೇಳಿದನು. ಕಫ್ತಾನನಿಗೆ ಮತ್ತು ನಮಗೆ, ನಮ್ಮನ್ನು ಈ ರೀತಿ ಪ್ರತ್ಯೇಕಿಸಿದ್ದು ಒಳ್ಳೆಯ ಮುನ್ಸೂಚನೆ ಅಲ್ಲ ಎಂದೆನಿಸಿತು.

ಕಫ್ತಾನ ಒಳಗೆ ಪ್ರವೇಶಿಸಿದಾಗ, ರಾಜನು ತಾನು ಮಂಗಳವಾರ ಅವನನ್ನು ನಿರೀಕ್ಷಿಸಿದ್ದೆ ಎಂದು ಹೇಳಿದನು. ದೂರ ಪ್ರಯಾಣದ ಆಯಾಸ ಇದ್ದ ಕಾರಣಕ್ಕೆ ತನಗೆ ಬರಲಾಗಲಿಲ್ಲ ಎಂದು ಕಫ್ತಾನ ಹೇಳಿದನು. ಆಗ ರಾಜನು, ನೀನು ಬಹಳ ಶ್ರೀಮಂತ ದೇಶದಿಂದ ಬಂದವನೆಂದು ಹೇಳಿದೆ, ಆದರೆ ಜೊತೆಗೆ ಏನನ್ನೂ ತಂದಿಲ್ಲ; ಅಷ್ಟೇ ಅಲ್ಲದೆ ಸಂದೇಶ ಪತ್ರ ತಂದಿದ್ದೇನೆ ಎಂದು ಹೇಳಿರುವೆ, ಅದರೆ ಅದನ್ನೂ ಕೂಡ ತಲುಪಿಸಿಲ್ಲ ಎಂದು ಹೇಳಿದನು. ಇದಕ್ಕೆ ಕಫ್ತಾನನು ತನ್ನ ಪ್ರಯಾಣದ ಉದ್ದೇಶ

---

[39] ಬ್ಯಾರೋಸ್ ಕ್ಯಾಮೋರಿಜ್ (Çamorij) ಎಂದು ಬರೆಯುತ್ತಾರೆ; ಕೊರೆಯಾ, ಸಮೋರಿ ಮತ್ತು ಕಾಮೊರಿನ್ ಎಂದು ಬರೆದರೆ, ಇತರರು ಝುಮೋರಿನ್ ಎಂದು ಬರೆಯುತ್ತಾರೆ. ಇದು ಬಿರುದಾಗಿದ್ದು, ಕೆಲವರ ಪ್ರಕಾರ ಇದು ತಮೂರಿ ರಾಜ ಎಂಬ ಪದದ ಅಪಭ್ರಂಶ ರೂಪವಾಗಿದೆ. ತಮೂರಿ ನಾಯರ್ ಜಾತಿಯ ಅತ್ಯಂತ ಶ್ರೇಷ್ಠ ಕುಟುಂಬದ ಹೆಸರಾಗಿದೆ, ಆದರೆ ಇತರರು "ಸಮುದ್ರಿಯ ರಾಜ", ಅಂದರೆ ಸಮುದ್ರದ ರಾಜ ಎಂದು ಕೂಡ ಕರೆದಿದ್ದಾರೆ. (see G. P. Badger's *Varthema*, pp. lxii and I, 37)

[40] ಇತರರು ಅವನ "ವಿಡೋರ್" ಎಂದು ಕರೆಯುತ್ತಾರೆ, ಅಂದರೆ ಮನೆಯ ಬಟ್ಲರ್ ಅಥವಾ ಮನೆ ವಹಿವಾಟು ನೋಡಿಕೊಳ್ಳುವವನು, ನಿರ್ವಾಹಕ.

ಕೇವಲ ಹೊಸ ಅನ್ವೇಷಣೆಗಳನ್ನು ಮಾಡುವುದು ಮಾತ್ರವಾಗಿದ್ದರಿಂದ ಜೊತೆಗೆ ಏನನ್ನೂ ತಂದಿಲ್ಲ, ಆದರೆ ಇತರ ಹಡಗುಗಳು ಬಂದಾಗ ಅವರು ರಾಜನಿಗಾಗಿ ಏನನ್ನಾದರೂ ತಂದಿರುವರೇ ಎಂಬುದನ್ನು ನೋಡುತ್ತೇನೆ ಎಂದು ಹೇಳಿದ. ಅಷ್ಟೆ ಅಲ್ಲದೆ, ತಾನು ಪತ್ರವನ್ನು ತಂದಿರುವುದು ನಿಜ, ಅದನ್ನು ಕೂಡಲೇ ನೀಡುತ್ತೇನೆ ಎಂದ .

ಆಗ ರಾಜನು, ಅವನು ಅಮೂಲ್ಯ ಹರಳುಗಳನ್ನು ಅರಸಿ ಬಂದಿರುವನೋ ಅಥವಾ ಮನುಷ್ಯರನ್ನು, ಎಂದು ಕೇಳಿದನು. ಅವನು ಮನುಷ್ಯರನ್ನು ಹುಡುಕಲು ಬಂದಿದ್ದಾಗಿದ್ದರೆ, ಜೊತೆಯಲ್ಲಿ ಏನನ್ನೂ ಏಕೆ ತಂದಿಲ್ಲ ಎಂದು ಪ್ರಶ್ನಿಸಿದನು. ಅದಲ್ಲದೆ, ಕಫ್ತಾನ ತನ್ನ ಜೊತೆ ಸಂತ ಮರಿಯಾ ಅವರ ಚಿನ್ನದ ಮೂರ್ತಿಯನ್ನು ಇಟ್ಟುಕೊಂಡಿರುವ ಸುದ್ದಿ ತನಗೆ ತಲುಪಿರುವುದಾಗಿಯೂ ರಾಜ ಹೇಳಿದನು. ಸಂತ ಮಾರಿಯಾ ಮೂರ್ತಿ ಚಿನ್ನದಿಂದ ಮಾಡಿದ್ದಲ್ಲ; ಅದನ್ನು ಚಿನ್ನದಿಂದ ಮಾಡಿದ್ದರೂ ತಾನು ಅದನ್ನು ಯಾರಿಗೂ ಕೊಡುವುದಿಲ್ಲ, ಏಕೆಂದರೆ ಅದು ತನಗೆ ಸಮುದ್ರ ಪ್ರಯಾಣದುದ್ದಕ್ಕೂ ಮಾರ್ಗದರ್ಶನ ಮಾಡಿದೆ ಮತ್ತು ಮುಂದಕ್ಕೂ ತನ್ನನ್ನು ಸುರಕ್ಷಿತವಾಗಿ ತನ್ನ ದೇಶಕ್ಕೆ ಹಿಂದಿರುಗಲು ಮಾರ್ಗದರ್ಶನ ಮಾಡುತ್ತದೆ ಎಂದು ಕಫ್ತಾನ ಹೇಳಿದನು. ನಂತರ ರಾಜನು ಪತ್ರವನ್ನು ಕೇಳಿದನು. ಅದಕ್ಕೆ ಕಫ್ತಾನನು ಮುಸ್ಲಿಂ ವರ್ತಕರು ತನಗೆ ಕೆಡುಕು ಬಯಸುವುದರಿಂದ, ತನ್ನನ್ನು ತಪ್ಪಾಗಿ ಅರ್ಥೈಸುವ ಸಾಧ್ಯತೆ ಇರುವುದರಿಂದ ಅರೇಬಿಕ್ ಮಾತನಾಡಬಲ್ಲ ಒಬ್ಬ ಕ್ರೈಸ್ತಮತೀಯನನ್ನು ಕಳುಹಿಸಬೇಕೆಂದು ಬೇಡಿಕೊಂಡನು. ಇದಕ್ಕೆ ಒಪ್ಪಿದ ರಾಜನು, ತಕ್ಷಣವೇ ಒಬ್ಬ ಯುವಕನನ್ನು, ಕ್ವಾರಾಮ್ ಎಂಬ ಕುಳ್ಳನೆಯ ವ್ಯಕ್ತಿಯನ್ನು ಕರೆತರುವಂತೆ ಅದೇಶಿಸಿದನು. ಕಫ್ತಾನನು ತನ್ನ ಬಳಿ ಎರಡು ಪತ್ರಗಳಿರುವುದಾಗಿ ಹೇಳಿದನು, ಒಂದು ಅವನ ಸ್ವಂತ ಭಾಷೆಯಲ್ಲಿ ಬರೆದಿರುವುದು, ಇನ್ನೊಂದು ಮುಸ್ಲಿಮರ ಭಾಷೆಯಲ್ಲಿ ಬರೆದಿರುವುದು; ತನ್ನ ಭಾಷೆಯಲ್ಲಿ ಬರೆದಿರುವುದನ್ನು ತನಗೆ ಓದಲು ಸಾಧ್ಯವೆಂದೂ, ಮತ್ತು ಅದರಲ್ಲಿ ಆಕ್ಷೇಪಾರ್ಹವಾದುದು ಏನೂ ಇಲ್ಲವೆಂದೂ ಮತ್ತು ಇನ್ನೊಂದರಲ್ಲಿ ಒಳ್ಳೆಯದೇ ಇರಬಹುದು ಅಥವಾ ತಪ್ಪಾಗಿ ಏನಾದರೂ ಇರಬಹುದು, ಆದರೆ ಅದನ್ನು ತನ್ನಿಂದ ಓದಲು ಸಾಧ್ಯವಿಲ್ಲವೆಂದೂ ಹೇಳಿದನು. ಆದರೆ ಕ್ರೈಸ್ತ ಮತೀಯನಿಗೆ ಮುಸ್ಲಿಂ ಭಾಷೆ(ಅರೇಬಿಕ್) ಓದಲು ಸಾಧ್ಯವಾಗದ ಕಾರಣ, ನಾಲ್ಕು ಜನ ಮುಸ್ಲಿಮರು ಪತ್ರವನ್ನು ತೆಗೆದುಕೊಂಡು ತಮ್ಮ ತಮ್ಮಲ್ಲೇ ಓದಿಕೊಂಡು, ನಂತರ ಅದನ್ನು ರಾಜನಿಗೆ ಅನುವಾದಿಸಿದರು. ರಾಜನು ಪತ್ರದಲ್ಲಿ ಪ್ರಸ್ತಾಪಿಸಿದ ವಿಷಯಗಳಿಂದ ಸಂತುಷ್ಟನಾಗಿದ್ದನು.

ನಂತರ ರಾಜನು ಕಫ್ತಾನನನ್ನು ಅವನ ದೇಶದಲ್ಲಿ ಯಾವ ರೀತಿಯ ಸರಕುಗಳು ದೊರಕುತ್ತವೆ ಎಂದು ಕೇಳಿದನು. ಅದಕ್ಕೆ ಕಫ್ತಾನನು ನಮ್ಮ ದೇಶದಲ್ಲಿ ಬಹಳಷ್ಟು ಜೋಳ, ಬಟ್ಟೆ, ಕಬ್ಬಿಣ, ಕಂಚು ಮತ್ತು ಇತರ ಅನೇಕ ವಸ್ತುಗಳು ಇವೆ ಎಂದು ಹೇಳಿದನು. ಅದಕ್ಕೆ ರಾಜನು ಕಫ್ತಾನನನ್ನು ಅವನ ಹತ್ತಿರ ಅಂತಹ ಯಾವುದಾದರೂ ಸರಕು ಇದೆಯೇ ಎಂದು ಕೇಳಿದನು. ಅದಕ್ಕೆ ಕಫ್ತಾನನು ತನ್ನ ಹತ್ತಿರ ಇವುಗಳು ಅಲ್ಪ ಪ್ರಮಾಣದಲ್ಲಿ ಇರುವುದಾಗಿಯೂ, ರಾಜನು ಅನುಮತಿಸಿದರೆ ನಮ್ಮ ಹಡಗುಗಳಿಗೆ ಮರಳಿ ಅದನ್ನು ಇಳಿಸಲು ಆದೇಶಿಸುವುದಾಗಿಯೂ, ಮತ್ತು ಈ ಸಮಯದಲ್ಲಿ ನಮ್ಮ ನಾಲ್ಕೈದು ಜನರು ರಾಜನು ಅವರಿಗೆ ವ್ಯವಸ್ಥೆ ಮಾಡಿದ ವಸತಿಗೃಹದಲ್ಲಿ ಉಳಿದುಕೊಳ್ಳುವುದಾಗಿಯೂ ಹೇಳಿದನು. ಇದಕ್ಕೆ ರಾಜನು ಬೇಡ ಎಂದು ಹೇಳಿದನು! ಬದಲಿಗೆ ಅವನು ತನ್ನ ಎಲ್ಲ ಜನರನ್ನು ತನ್ನೊಂದಿಗೆ ಕರೆದುಕೊಂಡು ಹೋಗಿ, ಹಡಗುಗಳನ್ನು ಸುರಕ್ಷಿತವಾಗಿ ಲಂಗರು ಹಾಕಿ, ಸರಕುಗಳನ್ನು ಇಳಿಸಿ, ಅವುಗಳನ್ನು ಒಳ್ಳೆಯ ಲಾಭಕ್ಕೆ ಮಾರಾಟ ಮಾಡಬಹುದು, ಎಂದು ಹೇಳಿದನು. ಕಫ್ತಾನನು ರಾಜನಿಂದ ಅನುಮತಿ ಪಡೆದು ತನ್ನ ವಸತಿಗೃಹಕ್ಕೆ ಮರಳಿದನು. ನಾವು ಕೂಡ ಅವನ ಜೊತೆ ಹೊರಟೆವು. ಆಗಲೇ ತಡವಾಗಿದ್ದರಿಂದ ಆ ರಾತ್ರಿ ನಾವು ಹೊರಗೆ ಹೋಗುವ ಪ್ರಯತ್ನ ಮಾಡಲಿಲ್ಲ.

[ಮರಳಿ ಪಂಡ್ರಾಣಿಗೆ, ಮೇ 31.]

ಗುರುವಾರ ಬೆಳಿಗ್ಗೆ ತಡಿ ಇಲ್ಲದ ಕುದುರೆಯನ್ನು ಕಥ್ತಾನನ ಪ್ರಯಾಣಕ್ಕೆ ಒದಗಿಸಿದರು, ಆದರೆ ಅವನು ಅದನ್ನು ಸವಾರಿ ಮಾಡಲು ನಿರಾಕರಿಸಿದನು. ತಡಿ ಇಲ್ಲದ ಕುದುರೆ ಸವಾರಿ ಮಾಡಲು ತನ್ನಿಂದ ಆಗದು, ಅದರ ಬದಲು ಆ ದೇಶದ ಕುದುರೆ, ಅಂದರೆ ಪಲ್ಲಕ್ಕಿಯನ್ನು ಒದಗಿಸಲು ಕೇಳಿದನು. ನಂತರ ಅವನನ್ನು ಗುಝೆರೇತ್[41] ಎಂಬ ಶ್ರೀಮಂತ ವ್ಯಾಪಾರಿಯ ಮನೆಗೆ ಕರೆದೊಯ್ಯಲಾಯಿತು. ಆತ ಕಥ್ತಾನನಿಗಾಗಿ ಪಲ್ಲಕ್ಕಿಯನ್ನು ಸಿದ್ಧಗೊಳಿಸಲು ಆದೇಶಿಸಿದನು. ಅದು ಬಂದ ಕೂಡಲೆ ಕಥ್ತಾನನು ನಮ್ಮ ಹಡಗುಗಳು ಲಂಗರು ಹಾಕಿರುವ ಪಂಡ್ರಾಣಿಗೆ ಹೊರಟನು. ಅನೇಕ ಜನರು ಅವನನ್ನು ಹಿಂಬಾಲಿಸಿದರು. ಅವನ ವೇಗಕ್ಕೆ ಸರಿ ಸಮಾನರಾಗಿ ಹೋಗಲು ಸಾಧ್ಯವಾಗದ ನಾವು ಹಿಂದುಳಿದೆವು. ನಾವು ಕಾಲೆಳೆದುಕೊಂಡು ಹೋಗುತ್ತಿರುವಾಗ ಕಥ್ತಾನನ ಜೊತೆಗೆ ಹೋಗಬೇಕಾಗಿದ್ದ ರಾಜನ ಕೊತ್ವಾಲನು ನಮ್ಮನ್ನು ದಾಟಿಕೊಂಡು ಮುಂದೆ ಹೋಗಿ, ಕಥ್ತಾನನ್ನು ಸೇರಿಕೊಂಡನು. ನಾವು ದಾರಿ ತಪ್ಪಿ, ಒಳನಾಡಿನಲ್ಲಿ ತುಂಬ ಅಲೆದಾಡಿದೆವು, ಆದರೆ ಕೊತ್ವಾಲನು ನಮ್ಮ ಸಹಾಯಕ್ಕೆ ಒಬ್ಬ ವ್ಯಕ್ತಿಯನ್ನು ಕಳುಹಿಸಿದನು. ಅವನು ನಮಗೆ ಸರಿಯಾದ ದಾರಿಯನ್ನು ತೋರಿಸಿದನು. ನಾವು ಪಂಡ್ರಾಣಿಯನ್ನು ತಲುಪಿದಾಗ, ನಮ್ಮ ಕಥ್ತಾನನು ಒಂದು ವಿಶ್ರಾಂತಿಗೃಹದಲ್ಲಿ ಇದ್ದನು. ಪ್ರಯಾಣಿಕರು ಮತ್ತು ದಾರಿಹೋಕರಿಗೆ ಮಳೆಯಿಂದ ರಕ್ಷಣೆ ಪಡೆಯಲು ಈ ರೀತಿಯ ಅನೇಕ ವಿಶ್ರಾಂತಿ ಗೃಹಗಳು ರಸ್ತೆಯ ಉದ್ದಕ್ಕೂ ಇದ್ದವು.

[ಪಂಡ್ರಾಣಿಯಲ್ಲಿ ಬಂಧನ, ಮೇ 31 ರಿಂದ ಜೂನ್ 2.] ಕೊತ್ವಾಲ ಮತ್ತು ಇತರರು ಕಥ್ತಾನನ ಜೊತೆಯಲ್ಲಿದ್ದರು. ನಾವು ಬಂದ ನಂತರ ಕಥ್ತಾನನು ಕೊತ್ವಾಲನ ಬಳಿ, ನಾವು ನಮ್ಮ ಹಡಗುಗಳ ಬಳಿ ಹೋಗಲು ಸಹಾಯವಾಗುವಂತೆ ಒಂದು ದೋಣಿಯನ್ನು ಒದಗಿಸಲು ಕೇಳಿದನು; ಆದರೆ ಅವನು, ಮತ್ತಿತರರು, ಈಗಾಗಲೇ ತಡವಾಗಿದೆ, ಸೂರ್ಯ ಮುಳುಗಿದ್ದಾನೆ, ಹಾಗಾಗಿ ಮಾರನೆ ದಿನ ಹೋಗಿರೆಂದು ಹೇಳಿದರು. ಅವರು ದೋಣಿಯನ್ನು ಒದಗಿಸಲಿಲ್ಲವಾದರೆ ತಾನು ರಾಜನ ಬಳಿ ಹಿಂದಿರುಗುವುದಾಗಿಯೂ, ರಾಜನು ನಮ್ಮನ್ನು ಹಡಗುಗಳಿಗೆ ಹೋಗಲು ವ್ಯವಸ್ಥೆ ಮಾಡುವಂತೆ ಆದೇಶಿಸಿರುವುದಾಗಿಯೂ, ಆದರೆ ಅವರು ನಮ್ಮನ್ನು ತಡೆಯುತ್ತಿರುವುದಾಗಿಯೂ, ಅಲ್ಲದೆ ಇದು ತುಂಬಾ ಖೇದದ ವಿಷಯವೆಂದೂ, ಏಕೆಂದರೆ ರಾಜ ಕೂಡ ನಮ್ಮಂತೆಯೇ ಕ್ರಿಶ್ಚಿಯನ್ ಎಂದು ಕಥ್ತಾನನು ಹೇಳಿದನು. ಕಥ್ತಾನನ ಸಿಟ್ಟಿನ ಮುಖವನ್ನು ನೋಡಿದ ಅವರು, ನಾವು ತಕ್ಷಣವೇ ಹೊರಡಲು ಸ್ವತಂತ್ರರಾಗಿದ್ದೇವೆ ಮತ್ತು ನಮಗೆ ಬೇಕಾದರೆ ಮೂವತ್ತು ದೋಣಿಗಳನ್ನು ಒದಗಿಸುವುದಾಗಿ ಹೇಳಿದರು. ನಂತರ ಅವರು ನಮ್ಮನ್ನು ಕಡಲತೀರದ ಉದ್ದಕ್ಕೂ ಕರೆದೊಯ್ದರು. ಹಾಗೆ ಕರೆದೊಯ್ಯುವಾಗ ಅವರ ಮನಸ್ಸಿನಲ್ಲಿ ಏನೋ ಕೆಟ್ಟ ಉದ್ದೇಶ ಇರುವಂತೆ ಕಥ್ತಾನನಿಗೆ ಭಾಸವಾಯಿತು. ಅದಕ್ಕೆ ಅವನು ತನ್ನ ಮೂವರು ಆಳುಗಳನ್ನು ಮುಂದಕ್ಕೆ ಕಳುಹಿಸಿದನು ಮತ್ತು ನಮ್ಮ ಹಡಗಿನ ದೋಣಿಗಳು ಮತ್ತು ತನ್ನ ಸಹೋದರ ಕಂಡರೆ, ಅವನು ಅಡಗಿಕೊಳ್ಳುವಂತೆ ಹೇಳಲು ಹೇಳಿದನು. ಅವರು ಮುಂದಕ್ಕೆ ಹೋದರು ಆದರೆ ಅವರ ಕಣ್ಣಿಗೆ ಯಾರೂ ಬೀಳಲಿಲ್ಲ. ಹಾಗಾಗಿ ಅವರು ಹಿಂತಿರುಗಿದರು; ಆದರೆ ನಮ್ಮನ್ನು ಬೇರೆ ದಾರಿಯಲ್ಲಿ ಕರೆದುಕೊಂಡು ಹೋಗಿದ್ದರಿಂದ ನಮಗೆ ಅವರ ಭೇಟಿಯಾಗಲಿಲ್ಲ.

ನಂತರ ಅವರು ನಮ್ಮನ್ನು ಮುಸ್ಲಿಂ ವರ್ತಕರ ಮನೆಗೆ ಕರೆದೊಯ್ದರು - ಏಕೆಂದರೆ ಆಗಾಗಲೇ ತಡರಾತ್ರಿಯಾಗಿತ್ತು - ಮತ್ತು ನಾವು ಅಲ್ಲಿಗೆ ತಲುಪಿದ ನಂತರ ಅವರು ಇನ್ನೂ ಹಿಂತಿರುಗದ ನಮ್ಮ ಮೂವರು ಸಹವರ್ತಿಗಳನ್ನು ಹುಡುಕಿಕೊಂಡು ಬರುವುದಾಗಿ ಹೇಳಿದರು. ಅವರು ಹೋದ ನಂತರ, ನಮ್ಮ ಕಥ್ತಾನನು ಕೋಳಿ ಮತ್ತು ಅಕ್ಕಿಯನ್ನು ಖರೀದಿಸಲು ಆದೇಶಿಸಿದನು, ಮತ್ತು ನಾವು ದಿನವಿಡೀ ನಡೆದ ಆಯಾಸದ ಹೊರತಾಗಿಯೂ, ಊಟ ಮಾಡಿದೆವು.

---

[41] ಅಂದರೆ, ಗುಜರಾತಿನ ಮನುಷ್ಯ

ಕಳೆದ ಹೋದ ನಮ್ಮ ಮೂವರು ಸಂಗಾತಿಗಳನ್ನು ಹುಡುಕಲು ಹೋದವರು ಹಿಂತಿರುಗುವಾಗ ಬೆಳಿಗ್ಗೆಯಾಗಿತ್ತು. ಹಿಂದಿನ ದಿನ ನಾವು ಹೊರಡುತ್ತೇವೆಂದಾಗ ಅವರು ಬೇಡವೆಂದಿದ್ದು ನಮ್ಮ ಒಳ್ಳೆಯದಕ್ಕೆಯೇ ಮತ್ತು ಅವರು ನಮ್ಮನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾರೆ ಎಂದು ಕಥ್ತಾನನಿಗೆ ಅನ್ನಿಸಿತು. ಆದರೆ ನಾವು ಮಾತ್ರ ಕ್ಯಾಲಿಕಟ್ ನಲ್ಲಿ ನಮಗಾದ ಅನುಭವದ ಕಾರಣಕ್ಕೆ ಅವರು ನಮಗೆ ಕೇಡುಂಟುಮಾಡಲಿದ್ದಾರೆ ಎಂದು ಸಂಶಯದಿಂದ ಅವರನ್ನು ಕಂಡಿದ್ದೆವು.

ಅವರು ಹಿಂದಿರುಗಿದಾಗ [ಜೂನ್ 1], ಕಥ್ತಾನನು ನಮಗೆ ಹಡಗುಗಳನ್ನು ತಲುಪಲು ಸಾಧ್ಯವಾಗುವಂತೆ ದೋಣಿಗಳ ವ್ಯವಸ್ಥೆ ಮಾಡಿಕೊಡುವಂತೆ ಕೇಳಿದನು. ಅವರು ತಮ್ಮೊಳಗೆ ಪಿಸುಗುಟ್ಟಲು ಪ್ರಾರಂಭಿಸಿದರು, ಮತ್ತು ನಾವು ನಮ್ಮ ಹಡಗುಗಳನ್ನು ದಡದ ಹತ್ತಿರಕ್ಕೆ ಬರುವಂತೆ ಆದೇಶಿಸಿದರೆ ಅವರು ದೋಣಿಗಳ ವ್ಯವಸ್ಥೆ ಮಾಡುವರು ಎಂದು ಹೇಳಿದರು. ಕಥ್ತಾನನು ನಮ್ಮ ಹಡಗುಗಳಿಗೆ ದಡದ ಬಳಿ ಬರಲು ಆದೇಶಿಸಿದರೆ, ಹಡಗಿನಲ್ಲಿರುವ ಅವನ ಸಹೋದರ ನಮ್ಮನ್ನು ಸೆರೆಹಿಡಿಯಲಾಗಿದೆ ಮತ್ತು ನಾನು ಬಲವಂತದ ಮೇಲೆ ಈ ಆದೇಶ ನೀಡುತ್ತಿದ್ದೇನೆ ಎಂದು ಭಾವಿಸಿ, ಹಾಯಿ ಬಿಚ್ಚಿ, ಪೋರ್ಚುಗಲ್‌ಗೆ ಹಿಂತಿರುಗಲಿದ್ದಾನೆ ಎಂದು ಅವರಿಗೆ ಹೇಳಿದನು. ಹಡಗುಗಳನ್ನು ಹತ್ತಿರಕ್ಕೆ ಬರುವಂತೆ ನಾವು ಆದೇಶಿಸಲು ನಿರಾಕರಿಸಿದರೆ, ನಮಗೆ ಹಡಗುಗಳನ್ನು ಏರುವ ಅನುಮತಿಯಿಲ್ಲ ಎಂದು ಅವರು ಹೇಳಿದರು. ಕಾಮೋಲಿಂ ರಾಜನು ತನ್ನನ್ನು ಹಡಗುಗಳಿಗೆ ಹಿಂತಿರುಗಲು ಅನುಮತಿ ಕೊಟ್ಟಿದ್ದರು ಕೂಡ ಅವರು ರಾಜನ ಆದೇಶವನ್ನು ಮೀರಿ ಅವನನ್ನು ಹಡಗು ಹತ್ತಲು ಬಿಡುವುದಿಲ್ಲವಾದ್ದರಿಂದ, ತನ್ನಂತೆಯೇ ಕ್ರಿಶ್ಚಿಯನ್ ಆಗಿರುವ ರಾಜನ ಬಳಿಗೆ ತಾನು ಹಿಂತಿರುಗುವೆನು ಎಂದು ಕಥ್ತಾನ ಹೇಳಿದನು. ಒಂದು ವೇಳೆ ರಾಜನು ಅವನನ್ನು ಹೋಗಲು ಬಿಡದೆ, ಇದೇ ದೇಶದಲ್ಲಿ ಉಳಿಸಿಕೊಳ್ಳಲು ಬಯಸಿದರೆ, ಅವನು ತುಂಬಾ ಸಂತೋಷದಿಂದ ಉಳಿದುಕೊಳ್ಳುವನು ಎಂದು ಕೂಡ ಹೇಳಿದನು. ಅವರು ಹೋಗಲು ಅನುಮತಿ ಕೊಡಲು ಒಪ್ಪಿಕೊಂಡರು, ಆದರೆ ಹೊರಡುವ ಯಾವುದೇ ಅವಕಾಶವನ್ನು ಕೊಡದೆ, ತಕ್ಷಣವೇ ಎಲ್ಲಾ ಬಾಗಿಲುಗಳನ್ನು ಮುಚ್ಚಿದರು, ಮತ್ತು ಅನೇಕ ಶಸ್ತ್ರಸಜ್ಜಿತ ಆಳುಗಳು ನಮ್ಮನ್ನು ಕಾವಲು ಕಾಯಲು ಒಳಗೆ ಪ್ರವೇಶಿಸಿದರು. ನಮ್ಮನ್ನು ಕಾವಲುಗಾರರು ಇಲ್ಲದೆ ಹೊರಗೆ ಹೋಗಲು ಬಿಡುತ್ತಿರಲಿಲ್ಲ.

ನಂತರ ಅವರು ನಮ್ಮ ಹಾಯಿ ಮತ್ತು ಚುಕ್ಕಾಣಿಗಳನ್ನು ಅವರ ಕೈಗೆ ಕೊಡಲು ಹೇಳಿದರು. ಅದಕ್ಕೆ ನಮ್ಮ ಕಥ್ತಾನನು ತಾನು ಇವ್ಯಾವುದನ್ನೂ ಕೊಡುವುದಿಲ್ಲವೆಂದು ಹೇಳಿದನು. ಕಾಮೋಲಿಂ ರಾಜನು ಬೇಷರತ್ತಾಗಿ ತನ್ನ ಹಡಗುಗಳಿಗೆ ಹಿಂದಿರುಗಲು ಸಮ್ಮತಿಸಿರುವನು. ಹಾಗಾಗಿ ಅವರು ಅವನೊಂದಿಗೆ ಏನು ಮಾಡಲು ಇಷ್ಟಪಡುವರೋ ಅದನ್ನು ಮಾಡಬಹುದು, ಆದರೆ ತಾನು ಏನನ್ನೂ ಕೊಡುವುದಿಲ್ಲ ಎಂದು ಹೇಳಿದನು.

ಕಥ್ತಾನ ಮತ್ತು ನಾವು ಇತರರು ತುಂಬಾ ಖಿನ್ನತೆಗೆ ಒಳಗಾಗಿದ್ದೆವು, ಆದರೂ ಹೊರನೋಟಕ್ಕೆ ನಾವು, ಅವರು ಮಾಡಿದ್ದು ನಮ್ಮ ಗಮನಕ್ಕೆ ಬಂದಿಲ್ಲ ಎಂಬಂತೆ ನಟಿಸಿದೆವು. ಅವರು ತನಗೆ ಹಿಂತಿರುಗಲು ಅನುಮತಿಯನ್ನು ನಿರಾಕರಿಸಿದರೂ, ಕನಿಷ್ಠ ತನ್ನ ಸಂಗಡಿಗರಿಗಾದರೂ ಹೋಗಲು ಅನುಮತಿ ಕೊಡಬೇಕು, ಇಲ್ಲವಾದಲ್ಲಿ ಅವರು ಅಲ್ಲಿ ಹಸಿವಿನಿಂದ ಸಾಯುತ್ತಾರೆ ಎಂದು ಕಥ್ತಾನ ಅವರಿಗೆ ಹೇಳಿದನು. ಆದರೆ ಅವರು, ನಾವು ಅಲ್ಲಿಂದ ಕದಲುವಂತಿಲ್ಲ, ಹಸಿವಿನಿಂದ ಸತ್ತರೆ ಸಾಯಲಿ, ತಮಗೇನೂ ಅದರ ಬಗ್ಗೆ ಕಾಳಜಿಯಿಲ್ಲ ಎಂದು ಹೇಳಿದರು. ನಾವು ಹೀಗೆ ಬಂಧನದಲ್ಲಿದ್ದಾಗ, ಹಿಂದಿನ ರಾತ್ರಿ ಕಳೆದುಹೋಗಿದ್ದ ನಮ್ಮ ಒಬ್ಬ ಸಂಗಡಿಗ ಹಿಂದಿರುಗಿದ. ನಿನ್ನೆ ರಾತ್ರಿಯಿಂದ ನಿಕೋಲೊ ಕೊಯೆಲ್ಹೋ ದೋಣಿಗಳೊಂದಿಗೆ ಕಥ್ತಾನನ ಬರುವಿಗಾಗಿ ಕಾಯುತ್ತಿದ್ದಾನೆ ಎಂದು ಅವನು ತಿಳಿಸಿದ. ಇದನ್ನು ಕೇಳಿದ ಕಥ್ತಾನನು ನಿಕೋಲೊ ಕೊಯೆಲ್ಹೋಗೆ ನಮ್ಮ ಪರಿಸ್ಥಿತಿಯನ್ನು ವಿವರಿಸಲು ಕಾವಲುಗಾರರ ಕಣ್ಣುತಪ್ಪಿಸಿ ರಹಸ್ಯವಾಗಿ ಒಬ್ಬ ವ್ಯಕ್ತಿಯನ್ನು ಕಳುಹಿಸಿ, ಹಡಗುಗಳನ್ನು ಸುರಕ್ಷಿತ ಸ್ಥಳದಲ್ಲಿ ಇರಿಸುವಂತೆ ಹೇಳಲು ಆದೇಶಿಸಿದನು. ಈ ಸಂದೇಶವನ್ನು ಸ್ವೀಕರಿಸಿದ ನಿಕೊಲೊ ಕೊಯೆಲ್ಹೋ ತಕ್ಷಣವೇ ಅಲ್ಲಿಂದ ಹಡಗನ್ನು

ಅಲ್ಲಿಂದ ತೆಗೆದುಕೊಂಡು ಹೋದನು. ಆದರೆ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಸುಳಿವು ಸಿಕ್ಕ ನಮ್ಮ ಕಾವಲುಗಾರರು ತಕ್ಷಣವೇ ಒಂದಷ್ಟು ದೋಣಿಗಳನ್ನೇರಿ ಅವನ ಬೆನ್ನಟ್ಟಿದರು. ಆದರೆ ಅದನ್ನು ಹಿಂದಿಕ್ಕಲು ಸಾಧ್ಯವಿಲ್ಲ ಎಂದು ಗೊತ್ತಾದ ಮೇಲೆ ನಮ್ಮ ಕಥಾನನ ಬಳಿಗೆ ಮರಳಿ, ಅವನ ಸಹೋದರನಿಗೆ ಹಡಗುಗಳನ್ನು ತೀರಕ್ಕೆ ತಂದು, ಬಂದರಿನೊಳಗೆ ಬರುವಂತೆ ಹೇಳಲು ವಿನಂತಿಸಿದರು. ನಮ್ಮ ಕಥಾನನು ತಾನು ಹಾಗೆ ಹೇಳಲು ಸಿದ್ಧವಿರುವುದಾಗಿಯೂ, ಆದರೆ ತನ್ನ ಸಹೋದರ ಅದಕ್ಕೆ ಒಪ್ಪಲಾರನೆಂದೂ ಹೇಳಿದನು; ಅವನು ಒಪ್ಪಿದರೂ ಅವನ ಜೊತೆಗಿರುವವರು, ಸಾವಿಗೆ ತುತ್ತಾಗಲು ಇಚ್ಛಿಸದೆ, ಹಡಗು ತೆಗೆದುಕೊಂಡು ಹೋಗಲು ಅನುಮತಿಸುವುದಿಲ್ಲ ಎಂದು ಹೇಳಿದನು. ಆದರೆ ಅವರು ಅದು ಹೇಗೆ ಸಾಧ್ಯ, ನೀನು ಕೊಟ್ಟ ಯಾವುದೇ ಆದೇಶವನ್ನು ಪಾಲಿಸಲೇ ಬೇಕಲ್ಲವೇ ಎಂದು ಕೇಳಿದರು.

ಹಡಗುಗಳು ಬಂದರಿನೊಳಗೆ ಬರುವುದು ಕಥಾನನಿಗೆ ಇಷ್ಟ ಇರಲಿಲ್ಲ. ಏಕೆಂದರೆ ಒಮ್ಮೆ ಹಡಗು ಒಳಗೆ ಬಂತೆಂದರೆ, ಅವರು ಸುಲಭವಾಗಿ ನಮ್ಮನ್ನು ಸೆರೆಹಿಡಿದು, ಮೊದಲು ಕಥಾನನನ್ನು ಕೊಲ್ಲುತ್ತಾರೆ, ನಂತರ ನಮ್ಮನ್ನೆಲ್ಲಾ ಕೊಲ್ಲಲಿದ್ದಾರೆ, ಏಕೆಂದರೆ ನಾವು ಈಗಾಗಲೇ ಅವರ ಅಧೀನದಲ್ಲಿದ್ದೇವೆ ಎಂದು ನಮಗೆ ಮತ್ತು ಕಥಾನನಿಗೆ ಅನ್ನಿಸಿತ್ತು.

ನಾವು ಆ ದಿನವನ್ನೆಲ್ಲಾ ಅತ್ಯಂತ ಆತಂಕದಿಂದ ಕಳೆದೆವು. ರಾತ್ರಿ ಇನ್ನೊಂದಷ್ಟು ಜನರು ನಮ್ಮನ್ನು ಸುತ್ತುವರೆದರು. ನಮಗೆ ನಮ್ಮನ್ನು ಕೂಡಿಟ್ಟ ಪ್ರಾಂಗಣದಲ್ಲಿ ನಡೆಯಲು ಕೂಡ ಅನುಮತಿ ಇರಲಿಲ್ಲ. ನಾವು ಹೆಂಚುಗಳನ್ನು ಹೊದಿಸಿದ್ದ ಒಂದು ಸಣ್ಣ ಅಂಗಳದಲ್ಲಿ ಬಂಧಿಯಾಗಿದ್ದೆವು. ನಮ್ಮನ್ನು ಬಹುಸಂಖ್ಯೆಯಲ್ಲಿ ಕಾವಲುಗಾರರು ಸುತ್ತುವರಿದಿದ್ದರು. ಮರುದಿನ ನಮ್ಮನ್ನು ಪ್ರತೇಕಿಸುತ್ತಾರೆ ಅಥವಾ ಬೇರೆ ಏನಾದರೂ ಹಾನಿಯಾಗುತ್ತದೆ ಎಂದು ನಾವು ನಿರೀಕ್ಷಿಸಿದ್ದೆವು. ಏಕೆಂದರೆ ನಮ್ಮನ್ನು ಬಂಧಿಸಿದವರಿಗೆ ನಮ್ಮ ಬಗ್ಗೆ ಬಹಳ ಅಸಮಧಾನ ಇತ್ತು. ಆದಾಗ್ಯೂ, ನಾವು ಹಳ್ಳಿಯಲ್ಲಿ ಏನೆಲ್ಲಾ ಸಿಗಬಹುದೋ ಅದನ್ನು ತಿಂದು ರಾತ್ರಿ ಒಳ್ಳೆಯ ಊಟವನ್ನೇ ಮಾಡಿದೆವು. ಇಡೀ ರಾತ್ರಿ ನೂರಕ್ಕೂ ಹೆಚ್ಚು ಜನರು ನಮ್ಮನ್ನು ಕಾವಲು ಕಾಯುತ್ತಿದ್ದರು. ಎಲ್ಲರ ಬಳಿ ಖಡ್ಗಗಳು, ಎರಡು ಅಲಗಿನ ಯುದ್ಧ ಕೊಡಲಿಗಳು[42], ಗುರಾಣಿಗಳು ಮತ್ತು ಬಿಲ್ಲು ಬಾಣಗಳು ಇದ್ದವು. ಇವರು ರಾತ್ರಿಯಿಡೀ ಪಾಳಿಯಲ್ಲಿ ಕಾವಲು ಕಾಯುತ್ತಿದ್ದರು.

ಮರುದಿನ, ಶನಿವಾರ, ಜೂನ್ 2, ಬೆಳಿಗ್ಗೆ, ಈ ಮಹನೀಯರು [ಅಂದರೆ. ಕೊತ್ವಾಲ ಮತ್ತಿತರರು] ಹಿಂತಿರುಗಿದರು, ಈಗ ಅವರು ಸ್ವಲ್ಪ 'ಪ್ರಸನ್ನ'ರಾಗಿದ್ದಂತೆ ಕಂಡರು. ಅವರು ನಮ್ಮ ಕಥಾನನಿಗೆ, ಅವನು ತನ್ನ ಸರಕುಗಳನ್ನು ಇಳಿಸಲು ಉದ್ದೇಶಿಸಿದ್ದಾನೆಂದು ರಾಜನಿಗೆ ತಿಳಿಸಿದ್ದರಿಂದ, ಈಗ ಅವನು ಆ ರೀತಿ ಆದೇಶಿಸಬೇಕು, ಏಕೆಂದರೆ ಯಾವುದೇ ಹಡಗು ಬಂದ ಕೂಡಲೆ ಅದರ ಸರಕುಗಳನ್ನು ಮತ್ತು ನಾವಿಕರನ್ನು ಇಳಿಸುವುದು ಈ ದೇಶದ ಸಂಪ್ರದಾಯ; ಹಾಗೆಯೇ ಸರಕು ಸಂಪೂರ್ಣ ಮಾರಾಟವಾಗುವವರೆಗೆ ಮಾರಾಟಗಾರರು ಹಡಗಿಗೆ ಹಿಂತಿರುಗುವಂತಿಲ್ಲ, ಎಂದು ಹೇಳಿದರು. ಕಥಾನ ಇದಕ್ಕೆ ಸಮ್ಮತಿಸಿದನು ಮತ್ತು ತನ್ನ ಸಹೋದರನಿಗೆ ಪತ್ರ ಬರೆದು ಹಾಗೆ ಮಾಡಲು ಹೇಳುವುದಾಗಿ ಹೇಳಿದನು. ಇದಕ್ಕೆ ಸಮ್ಮತಿಸಿದ ಅವರು ಸರಕು ಇಳಿಸಿದ ತಕ್ಷಣ ತನ್ನ ಹಡಗಿಗೆ ಮರಳಲು ಅವನಿಗೆ ಅನುಮತಿ ನೀಡಲಾಗುವುದು ಎಂದು ಹೇಳಿದರು. ಕಥಾನನು ತಕ್ಷಣವೇ ತನ್ನ ಸಹೋದರನಿಗೆ ಕೆಲವು ಸಾಮಗ್ರಿಗಳನ್ನು ಕಳುಹಿಸುವಂತೆ ಹೇಳಿ ಪತ್ರ ಬರೆದನು ಮತ್ತು ಅವನು

[42] ಮೂಲದಲ್ಲಿ Bisarma [ಸ್ಥಳೀಯ ವ್ಯಾಪಾರಿ] ಎಂದು ಬರೆಯಲಾಗಿದೆ. ಹರ್ಕ್ಯುಲಾನೊ, ಸ್ಪೆಲ್ಮನ್ ಕೊಟ್ಟಿರುವ ವ್ಯಾಖ್ಯಾನವನ್ನು (*[v]*. Ducange, *sub* bisarma) ಒಪ್ಪುತ್ತಾರೆ.

ಕೂಡಲೇ ಅದನ್ನು ಪೂರೈಸಿದನು. ಅದು ಬಂದ ಕೂಡಲೆ ಕಥ್ತಾನನಿಗೆ ಹಡಗು ಹತ್ತಲು ಅನುಮತಿ ನೀಡಲಾಯಿತು. ಇಳಿಸಿದ ಸರಕಿನೊಂದಿಗೆ ಇಬ್ಬರು ವ್ಯಕ್ತಿಗಳು ಹಿಂದೆ ಉಳಿದರು.[43]

ಇದರಿಂದ ನಾವು ಬಹಳವಾಗಿ ಸಂತೋಷಪಟ್ಟೆವು ಮತ್ತು ಮೃಗಗಳಿಗಿಂತ ಹೆಚ್ಚಿನ ಬುದ್ಧಿಯಿಲ್ಲದ ಜನರ ಕೈಯಿಂದ ನಮ್ಮನ್ನು ರಕ್ಷಿಸಿದ್ದಕ್ಕಾಗಿ ದೇವರಿಗೆ ಧನ್ಯವಾದಗಳನ್ನು ಸಲ್ಲಿಸಿದೆವು. ಒಮ್ಮೆ ಕಥ್ತಾನ ಹಡಗು ಏರಿದನೆಂದರೆ ಕೆಳಗೆ ಇಳಿದುಕೊಂಡವರು ಭಯಪಡಬೇಕಾಗಿಲ್ಲ ಎಂದು ನಮಗೆ ಚೆನ್ನಾಗಿ ತಿಳಿದಿತ್ತು. ಕಥ್ತಾನ ಹಡಗು ಏರಿದ ಮೇಲೆ ಇನ್ನು ಮುಂದೆ ಯಾವುದೇ ಸರಕುಗಳನ್ನು ಕಳುಹಿಸಬಾರದು ಎಂದು ಆದೇಶಿಸಿದನು.

[ಪಂಡ್ರಾಣಿಯಲ್ಲಿ ಪೋರ್ಚುಗೀಸ್ ಸರಕುಗಳು, ಜೂನ್ 2-23.] ಐದು ದಿನಗಳ ನಂತರ [ಜೂನ್ 7 ರಂದು] ಕಥ್ತಾನನು ರಾಜನಿಗೆ ಸಂದೇಶವನ್ನು ಕಳುಹಿಸಿದನು. ಅದರಲ್ಲಿ ರಾಜನು ತನ್ನನ್ನು ನೇರವಾಗಿ ತನ್ನ ಹಡಗುಗಳಿಗೆ ಹೋಗಲು ಕಳುಹಿಸಿದ್ದರೂ, ರಾಜನ ಕೆಲವು ಜನರು ತನ್ನನ್ನು ಒಂದು ರಾತ್ರಿ ಮತ್ತು ಒಂದು ಹಗಲು ರಸ್ತೆಯಲ್ಲಿ ಬಂಧಿಸಿಟ್ಟಿದ್ದಾಗಿಯೂ, ಅವನು ಅವರ ಆದೇಶದಂತೆ ಸರಕುಗಳನ್ನು ಇಳಿಸಿರುವುದಾಗಿಯೂ, ಆದರೆ ಮುಸ್ಲಿಂ ವರ್ತಕರು ಅದನ್ನು ದೂಷಿಸಲು ಮಾತ್ರ ಬಂದ ಹಾಗೆ ಬಂದಿರುವುದಾಗಿಯೂ; ಮತ್ತು ಈ ಕಾರಣಗಳಿಗಾಗಿ ತಾನು ರಾಜನ ಮುಂದಿನ ಆದೇಶವನ್ನು ಎದುರು ನೋಡುತ್ತಿರುವುದಾಗಿಯೂ ಮತ್ತು ಈ ಸರಕುಗಳು ತನಗೆ ನಗಣ್ಯವೆಂದೂ, ತಾನು ಮತ್ತು ತನ್ನ ಹಡಗುಗಳು ರಾಜನ ಸೇವೆಯಲ್ಲಿರುವುದಾಗಿಯೂ ಬರೆದಿದ್ದನು. ಅದಕ್ಕೆ ಉತ್ತರವಾಗಿ ರಾಜನು ತಕ್ಷಣವೇ, ಹೀಗೆ ಮಾಡಿದವರು ಕೆಟ್ಟ ಕ್ರಿಶ್ಚಿಯನ್ನರು ಮತ್ತು ಅವರನ್ನು ಶಿಕ್ಷಿಸುವುದಾಗಿ ಹೇಳಿ ಕಳುಹಿಸಿದನು. ಅಷ್ಟೇ ಅಲ್ಲದೆ ಸರಕುಗಳನ್ನು ಪರೀಕ್ಷಿಸಲು ಮತ್ತು ಅವರು ಒಲವು ತೋರಿದರೆ ಖರೀದಿದಾರರಾಗಲು ಏಳೆಂಟು ವ್ಯಾಪಾರಿಗಳನ್ನು ಕಳುಹಿಸಿದನು. ಜೊತೆಗೆ ಅಲ್ಲಿ ಆಗಾಗಲೇ ಇರುವ ಕೊತ್ವಾಲನೊಂದಿಗೆ ಇರಲು ಇನ್ನೊಬ್ಬ ಒಳ್ಳೆಯ ಮನುಷ್ಯನನ್ನು ಕಳುಹಿಸಿದನು ಮತ್ತು ಅಲ್ಲಿಗೆ ಯಾವನೇ ಮುಸ್ಲಿಂ ವರ್ತಕ ಬಂದರೂ, ಅವನನ್ನು ಕೊಲ್ಲಲು ಅವನಿಗೆ ಅಧಿಕಾರ ನೀಡಿದನು.

ರಾಜನು ಕಳುಹಿಸಿದ ವ್ಯಾಪಾರಿಗಳು ಸುಮಾರು ಎಂಟು ದಿನಗಳವರೆಗೆ ಇದ್ದರು, ಆದರೆ ಅವರು ಖರೀದಿಸುವ ಬದಲು ಸರಕುಗಳನ್ನು ಹಾಳಾಗಲು ಬಿಟ್ಟರು. ಸರಕುಗಳನ್ನು ಸಂಗ್ರಹಿಸಿದ ಸ್ಥಳಕ್ಕೆ ಯಾವುದೇ ಮುಸ್ಲಿಂ ವ್ಯಾಪಾರಿ ಭೇಟಿ ನೀಡಲಿಲ್ಲ. ಅವರು ನಮ್ಮನ್ನು ದ್ವೇಷದಿಂದ ಕಾಣುತ್ತಿದ್ದರು. ನಾವು ಯಾರಾದರೂ ಕಂಡರೆ, ನಮ್ಮನ್ನು ನೋಡಿ, ನೆಲಕ್ಕೆ ಉಗುಳಿ, "ಪೋರ್ಚುಗಲ್, ಪೋರ್ಚುಗಲ್" ಎಂದು ಹೀಯಾಳಿಸುತ್ತಿದ್ದರು. ಅವರು ಮೊದಲಿನಿಂದಲೂ ನಮ್ಮನ್ನು ಬಂಧಿಸಿ, ಕೊಲ್ಲಲು ಹವಣಿಸುತ್ತಿದ್ದರು.

ಆ ಸ್ಥಳದಲ್ಲಿ ಸರಕುಗಳಿಗೆ ಯಾವುದೇ ಖರೀದಿದಾರರು ಇಲ್ಲ ಎಂದು ಕಥ್ತಾನ ಕಂಡುಕೊಂಡಾಗ, ಅದನ್ನು ಕ್ಯಾಲಿಕಟ್ ಗೆ ರವಾನಿಸಲು ಅನುಮತಿಗಾಗಿ ರಾಜನಿಗೆ ಅರ್ಜಿ ಸಲ್ಲಿಸಿದನು. ಪೋರ್ಚುಗಲ್‌ನ ರಾಜನಿಗೆ ಸಂಬಂಧಿಸಿದ ಯಾವುದೇ ವಸ್ತು ತನ್ನ ದೇಶದಲ್ಲಿರುವಷ್ಟು ಕಾಲ, ಅದರ ಮೇಲೆ ಹೆಚ್ಚಿನ ವೆಚ್ಚವನ್ನು ಹಾಕಬಾರದು ಎಂಬ ಕಾರಣಕ್ಕೆ ಅಷ್ಟೂ ಸರಕನ್ನು ಕ್ಯಾಲಿಕಟ್ ಗೆ ಹೊತ್ತೊಯ್ಯಲು ಆಳುಗಳನ್ನು ನಿಯೋಜಿಸಲು ರಾಜನು ಕೊತ್ವಾಲನಿಗೆ ಆದೇಶಿಸಿದನು. ಆದರೆ ನಾವು ಕಳ್ಳರು ಮತ್ತು ಕಳ್ಳತನ ಮಾಡಿಕೊಂಡು ಓಡಾಡುತ್ತಿದ್ದೇವೆ ಎಂದು ರಾಜನಿಗೆ ಯಾರೋ ಹೇಳಿದ್ದರಿಂದಾಗಿ, ನಮ್ಮ ಮೇಲೆ ಯಾವುದೇ

---

[43] ಇವರೆಂದರೆ, ನಿರ್ವಾಹಕನಾಗಿ ಡಿಯಾಗೊ ಡಯಾಸ್ ಮತ್ತು ಅವನ ಸಹಾಯಕನಾಗಿ ಅಲ್ವಾರೊ ಡಿ ಬ್ರಾಗಾ. (ಕ್ಯಾಸ್ಟಾನ್ಹೆಡಾ, I, 74.)

ಸದಭಿಪ್ರಾಯ ಇಲ್ಲದೆ ಇದನ್ನು ಮಾಡಲಾಗಿತ್ತು. ಅದೇನೇ ಇದ್ದರೂ, ಅವರು ಮೇಲೆ ಹೇಳಿದ ರೀತಿಯಲ್ಲಿ ಎಲ್ಲವನ್ನೂ ವ್ಯವಸ್ಥೆ ಮಾಡಿದರು.

[ಕ್ಯಾಲಿಕಟ್ ಗೆ ಸರಕುಗಳ ಸಾಗಣೆ, ಜೂನ್ 24] ಭಾನುವಾರ, ಜೂನ್ 24 ಸಂತ ಜಾನ್ ಬ್ಯಾಪ್ಟಿಸ್ಟರ ದಿನ. ಅವತ್ತು ಎಲ್ಲಾ ಸರಕನ್ನು ಕ್ಯಾಲಿಕಟ್ ಗೆ ಸಾಗಿಸಲಾಯಿತು. ನಮ್ಮವರೆಲ್ಲರೂ ಆ ಪಟ್ಟಣವನ್ನು ಸರದಿಯಲ್ಲಿ ಮತ್ತು ಈ ಕೆಳಗೆ ತಿಳಿಸಿದಂತೆ ಭೇಟಿ ಮಾಡಬೇಕೆಂದು ಕಫ್ತಾನ ಆಜ್ಞಾಪಿಸಿದನು: ಪ್ರತಿಯೊಂದು ಹಡಗು ಒಬ್ಬ ವ್ಯಕ್ತಿಯನ್ನು ದಡಕ್ಕೆ ಕಳುಹಿಸಬೇಕು, ಅವನು ಹಿಂದಿರುಗಿದ ಮೇಲೆ ಇನ್ನೊಬ್ಬನನ್ನು ಕಳುಹಿಸಬೇಕು. ಈ ರೀತಿಯಲ್ಲಿ ಎಲ್ಲರಿಗೂ ಸರದಿಯಲ್ಲಿ ಅವಕಾಶ ಸಿಗುತ್ತದೆ ಮತ್ತು ಅವರಿಗೆ ಏನು ಇಷ್ಟವೋ ಅದನ್ನು ಖರೀದಿಸಲು ಸಾಧ್ಯವಾಗುತ್ತದೆ. ಇವರನ್ನು ದಾರಿಯುದ್ದಕ್ಕೂ ಕ್ರೈಸ್ತಮತೀಯರು ಸ್ವಾಗತಿಸಿದರು, ಅವರ ಮನೆಗೆ ಹೋದಾಗ, ಅವರಿಗೆ ಊಟಕ್ಕೆ, ವಾಸ್ತವ್ಯಕ್ಕೆ ಸಂತೋಷದಿಂದ ಅವಕಾಶ ಮಾಡಿಕೊಟ್ಟರು ಮತ್ತು ತಮ್ಮಲ್ಲಿದ್ದುದ್ದನ್ನು ಉಚಿತವಾಗಿ ಹಂಚಿಕೊಂಡರು. ಅದೇ ಸಮಯದಲ್ಲಿ, ಅಲ್ಲಿಯ ಪುರುಷರು ನಮ್ಮ ಹಡಗಿಗೆ ಬಂದರು. ನಾವು ಅವರನ್ನು ಸ್ವಾಗತಿಸಿದೆವು. ಅವರು ನಮಗೆ ಮೀನು ಮಾರಿ, ಅದಕ್ಕೆ ಬದಲಿಯಾಗಿ ನಮ್ಮಿಂದ ಬ್ರೆಡ್ ತೆಗೆದುಕೊಂಡರು. ಅವರಲ್ಲಿ ಅನೇಕರು ತಮ್ಮ ಗಂಡುಮಕ್ಕಳು ಮತ್ತು ಚಿಕ್ಕ ಮಕ್ಕಳೊಂದಿಗೆ ಬಂದಿದ್ದರು. ಕಫ್ತಾನನು ಅವರಿಗೆ ನಾವು ಆಹಾರ ನೀಡಬೇಕೆಂದು ಆದೇಶಿಸಿದನು. ಇದೆಲ್ಲವೂ ಶಾಂತಿ ಮತ್ತು ಸೌಹಾರ್ದ ಸಂಬಂಧಗಳನ್ನು ಸ್ಥಾಪಿಸುವ ಸಲುವಾಗಿ ಮತ್ತು ಅವರು ನಮ್ಮ ಬಗ್ಗೆ ಒಳ್ಳೆಯದನ್ನು ಮಾತನಾಡಲು ಪ್ರೇರೇಪಿಸಲು ಮಾಡಿದ್ದಾಗಿತ್ತು. ಈ ಸಂದರ್ಶಕರ ಸಂಖ್ಯೆ ಎಷ್ಟು ದೊಡ್ಡದಾಗಿತ್ತೆಂದರೆ ಕೆಲವೊಮ್ಮೆ ನಾವು ಅವರನ್ನು ಸಾಗಹಾಕಬೇಕಾದರೆ ರಾತ್ರಿಯಾಗುತ್ತಿತ್ತು; ಇದಕ್ಕೆ ಈ ದೇಶದ ಅಪಾರ ಜನಸಂಖ್ಯೆ ಮತ್ತು ಆಹಾರದ ಕೊರತೆ ಕಾರಣವಾಗಿತ್ತು. ಇದು ಎಷ್ಟರ ಮಟ್ಟಿಗೆ ನಡೆಯಿತ್ತೆಂದರೆ ನಮ್ಮಲ್ಲಿ ಕೆಲವರು ಹಾಯಿಗಳನ್ನು ಸರಿಪಡಿಸಲು ಹೋಗುವಾಗ ತಮ್ಮ ಜೊತೆ ತಿನ್ನಲು ಬಿಸ್ಕತ್ತುಗಳನ್ನು ತೆಗೆದುಕೊಂಡು ಹೋದರೆ, ಮಕ್ಕಳು, ಹಿರಿಯರು ಎಂಬ ವ್ಯತ್ಯಾಸ ಇಲ್ಲದೆ, ಅವರ ಮೇಲೆ ಮುಗಿಬಿದ್ದು ಅವರ ಕೈಯಿಂದ ಬಿಸ್ಕತ್ತುಗಳನ್ನು ತೆಗೆದುಕೊಳ್ಳುತ್ತಿದ್ದರು ಮತ್ತು ಇವರಿಗೆ ತಿನ್ನಲು ಏನೂ ಉಳಿಯುತ್ತಿರಲಿಲ್ಲ.

ಈ ರೀತಿಯಾಗಿ ಹಡಗಿನಲ್ಲಿದ್ದವರೆಲ್ಲರೂ ತಮ್ಮೊಂದಿಗೆ ತಾವು ಮಾರಾಟ ಮಾಡಲು ಬಯಸಿದ ಕಡಗಗಳು, ಬಟ್ಟೆಗಳು, ಹೊಸ ಅಂಗಿಗಳು ಮತ್ತು ಇತರ ವಸ್ತುಗಳನ್ನು ತೆಗೆದುಕೊಂಡು ಇಬ್ಬಿಬ್ಬರಾಗಿ ಅಥವಾ ಮೂವರಾಗಿ ತೀರಕ್ಕೆ ಹೋದರು. ಆದರೆ ನಾವು ಮೊಜಾಂಬಿಕ್ ತಲುಪುವಾಗ ಏನು ನಿರೀಕ್ಷಿಸಿದ್ದೇವೋ ಆ ಮಟ್ಟದ್ದಲ್ಲಿ ನಮಗೆ ಇಲ್ಲಿ ವ್ಯಾಪಾರ ಮಾಡಲಾಗಲಿಲ್ಲ. ಪೋರ್ಚುಗಲ್‌ನಲ್ಲಿ 300 ರೀಸ್ ಬೆಲೆ ಬಾಳುವ ಅತ್ಯಂತ ಉತ್ತಮವಾದ ಶರ್ಟನ್ನು ಇಲ್ಲಿ ಕೇವಲ ಎರಡು ಫಣೊಗಳಿಗೆ ಮಾತ್ರ ಮಾರಲು ಸಾಧ್ಯವಾಯಿತು.[44] ಇದು ಕೇವಲ 30 ರೀಸ್ ಗಳಿಗೆ ಸಮ. ಈ ದೇಶದಲ್ಲಿ 30 ರೀಸ್ ತುಂಬ ದೊಡ್ಡ ಮೊತ್ತವಾಗಿದೆ. ನಾವು ಶರ್ಟ್‌ಗಳನ್ನು ಹೇಗೆ ಅಗ್ಗವಾಗಿ ಮಾರಾಟ ಮಾಡಿದೆವೋ ಅದೇ ರೀತಿ ಇನ್ನುಳಿದ ವಸ್ತುಗಳನ್ನು ಕೂಡ ಮಾರಾಟ ಮಾಡಿದೆವು. ಹೇಗಿದೆ ಎಂದು ತೋರಿಸಲಾದರೂ ಈ ದೇಶದಿಂದ ಕೆಲವು ವಸ್ತುಗಳನ್ನು ತೆಗೆದುಕೊಂಡು ಹೋಗುವುದಕ್ಕಾಗಿ ನಾವು ನಮ್ಮ ವಸ್ತುಗಳನ್ನು ಅಗ್ಗಕ್ಕೆ ಮಾರಬೇಕಾಯಿತು. ನಗರಕ್ಕೆ ಭೇಟಿ ನೀಡಿದವರು ಅಲ್ಲಿ ಲವಂಗ, ದಾಲ್ಚಿನ್ನಿ ಮತ್ತು

---

[44] ಕ್ಯಾಲಿಕಟ್‌ನ ಪಣೊ, ನೂನ್ಸ್ ಪ್ರಕಾರ, 25-5/7 ರೀಸ್ ಅಥವಾ 7.45 *d [dinheiro]* ಮೌಲ್ಯದ್ದಾಗಿದೆ (according to Nunes, *O Livro dos Pesos*, 1554). 1485ರಲ್ಲಿ ಠಂಕಿಸಿದ ಮುನ್ನೂರು ರೀಸ್ ಗಳನ್ನು ಪರಿವರ್ತಿಸಿದರೆ ಅದು 7*s.* 7*d. [7 ಶಿಲ್ಲಿಂಗ್ ಮತ್ತು* 7 ಪೆನ್ಸ್] ಆಗುತ್ತದೆ. ಹಾಗಾಗಿ ಒಂದು ಚಿನ್ನದ ಕ್ರುಜಾಡೋವಿನ ಪರಿವರ್ತನಾ ಮೌಲ್ಯ 9*s.* 8*d.*

ಅಮೂಲ್ಯ ಹರಳುಗಳನ್ನು ಖರೀದಿಸಿದರು; ತಾವು ಬೇಕಾಗಿದ್ದನ್ನು ಖರೀದಿಸಿದ ಅವರು ಯಾರೊಂದಿಗೂ ಮಾತನಾಡದೆ ಹಡಗುಗಳಿಗೆ ಹಿಂತಿರುಗಿದರು.

ಈ ದೇಶದ ಜನರು ನಮಗೆ ಸ್ಪಂದಿಸಿದ ರೀತಿಯನ್ನು ನೋಡಿ ಕಥ್ತಾನನು ಒಬ್ಬ ಗುಮಾಸ್ತ, ಒಬ್ಬ ಅಧಿಕಾರಿ ಮತ್ತು ಕೆಲವರನ್ನು ನಮ್ಮ ಸಾಮಗ್ರಿಗಳ ದಾಸ್ತಾನು ಇರುವಲ್ಲಿ ನಿಯೋಜಿಸಿದನು.

[ಡಿಯಾಗೋ ಡಯಾಸ್ ರಾಜನಿಗೆ ಸಂದೇಶವನ್ನು ಕೊಂಡೊಯ್ಯುತ್ತಾನೆ, ಆಗಸ್ಟ್ 13.] ನಮ್ಮ ನಿರ್ಗಮನದ ಸಮಯ ಬಂದಾಗ ಮುಖ್ಯ ಕಥ್ತಾನ, ಅಂಬರು (ಬೆಲೆ ಬಾಳುವ ಹರಳು), ಹವಳಗಳು ಮತ್ತು ಇತರ ಅನೇಕ ವಸ್ತುಗಳನ್ನು ಉಡುಗೊರೆಯಾಗಿ ರಾಜನಿಗೆ ಕಳುಹಿಸಿದನು. ಜೊತೆಗೆ ತಾನು ಪೋರ್ಚುಗಲ್‌ಗೆ ಹಿಂತಿರುಗಲಿರುವುದಾಗಿಯೂ, ಮತ್ತು ರಾಜನು ತನ್ನೊಂದಿಗೆ ಈ ದೇಶದ ಕೆಲವು ಜನರನ್ನು ಪೋರ್ಚುಗಲ್‌ನ ರಾಜನ ಬಳಿಗೆ ಕಳುಹಿಸಲು ಇಚ್ಛಿಸಿದರೆ, ತಾನು ಕೂಡ ಒಬ್ಬ ಅಧಿಕಾರಿ, ಒಬ್ಬ ಗುಮಾಸ್ತ ಮತ್ತು ಇತರ ಕೆಲವು ಜನರನ್ನು ಈ ದೇಶದಲ್ಲಿ ನಮ್ಮ ಸರಕುಗಳನ್ನು ನೋಡಿಕೊಳ್ಳಲು ನಿಯೋಜಿಸುವುದಾಗಿಯೂ ರಾಜನಿಗೆ ಸಂದೇಶ ಕಳುಹಿಸಿದನು. ತಾನು ಕಳುಹಿಸಿರುವ ಉಡುಗೊರೆಗಳಿಗೆ ಬದಲಾಗಿ, ತನ್ನ ದೊರೆಯ ಪರವಾಗಿ ರಾಜನಲ್ಲಿ ಒಂದು ಬಹಾರ್[45] ನಷ್ಟು ದಾಲ್ಚಿನ್ನಿ, ಒಂದು ಬಹಾರಿನಷ್ಟು ಲವಂಗ ಮತ್ತು ರಾಜನು ಇಚ್ಛಿಸುವ ಇತರ ಯಾವುದೇ ಸಂಬಾರ ದ್ರವ್ಯಗಳ ಮಾದರಿಗಳನ್ನು ಕಳುಹಿಸಲು ಬೇಡಿಕೊಂಡನು. ರಾಜನು ಇಚ್ಛಿಸಿದರೆ ತನ್ನ ಅಧಿಕಾರಿಯು ಇದರ ಬೆಲೆಯನ್ನು ಪಾವತಿಸುವನು ಎಂದು ಕೂಡ ಅರುಹಿದನು.

ಈ ಸಂದೇಶವನ್ನು ರವಾನಿಸಿದ ನಂತರ, ಆತ ರಾಜನೊಂದಿಗೆ ಮಾತನಾಡಲು ನಾಲ್ಕು ದಿನ ಕಾಯಬೇಕಾಯಿತು. ಈ ದೂತನು ರಾಜನ ಆಸ್ಥಾನಕ್ಕೆ ಹೋದ ಸಂದರ್ಭದಲ್ಲಿ ರಾಜ ಅವನನ್ನು 'ಮುಖ ಗಂಟಿಕ್ಕಿಕೊಂಡು' ನೋಡಿ, ಏನಾಗಬೇಕು ಎಂದು ಕೇಳಿದನು. ದೂತನು ಸಂದೇಶ ಪತ್ರವನ್ನು ಮೇಲೆ ಹೇಳಿದಂತೆ ರಾಜನಿಗೆ ಒಪ್ಪಿಸಿ, ರಾಜನಿಗಾಗಿ ಕಳುಹಿಸಿರುವ ಉಡುಗೊರೆಗಳ ಬಗ್ಗೆ ಪ್ರಸ್ತಾಪ ಮಾಡಿದನು. ಅದಕ್ಕೆ ರಾಜನು ಅವನು ತಂದಿರುವ ಉಡುಗೊರೆಗಳನ್ನು ತನ್ನ ಕಾರ್ಯಾಧಿಕಾರಿಗೆ ಕಳುಹಿಸಬೇಕಾಗಿತ್ತೆಂದೂ ಮತ್ತು ತಾನು ಅದನ್ನು ನೋಡಲು ಬಯಸುವುದಿಲ್ಲವೆಂದೂ ಹೇಳಿದನು. ನಂತರ, ಕಥ್ತಾನನು ನಿರ್ಗಮಿಸಲು ಬಯಸಿದಲ್ಲಿ ಅವನು 600 ಶೆರಾಫಿಂ[46] ಗಳನ್ನು ಪಾವತಿಸಿ, ನಂತರ ಹೊರಡತಕ್ಕದ್ದು; ಇದು ಈ ದೇಶದ ಮತ್ತು ಇಲ್ಲಿಗೆ ಬಂದವರ ಸಂಪ್ರದಾಯ ಎಂದು ತಿಳಿಸಲು ಹೇಳಿದನು. ಈ ಸಂದೇಶವನ್ನು ತೆಗೆದುಕೊಂಡು ಹೋಗಿದ್ದ ಡಿಯಾಗೊ ಡಯಾಸ್ ಇದನ್ನು ತಾನು ಕಥ್ತಾನನಿಗೆ ತಿಳಿಸುವುದಾಗಿ ಹೇಳಿದನು. ಆದರೆ ಅವನು [ಅರಮನೆಯಿಂದ] ಹೊರಟಾಗ ಒಂದಷ್ಟು ಜನರು ಅವನನ್ನು ಹಿಂಬಾಲಿಸಿದರು ಮತ್ತು ಅವನು ಕ್ಯಾಲಿಕಟ್ ನಲ್ಲಿ ಸರಕುಗಳನ್ನು ದಾಸ್ತಾನು ಮಾಡಿದ್ದ ಮಳಿಗೆಗೆ ಬಂದಾಗ, ಅಲ್ಲಿರುವ ಸರಕನ್ನು ಎಲ್ಲೂ ತೆಗೆದುಕೊಂಡು ಹೋಗದಂತೆ ನೋಡಿಕೊಳ್ಳಲು ಅವನ ಜೊತೆ ಒಂದಷ್ಟು ಜನರನ್ನು ಕಾವಲು ಇರಿಸಿದರು. ಅದೇ ಸಮಯದಲ್ಲಿ ಯಾವುದೇ ದೋಣಿಗಳು ನಮ್ಮ ಹಡಗುಗಳ ಬಳಿ ಹೋಗಬಾರದು ಎಂದು ಪಟ್ಟಣದಾದ್ಯಂತ ಸಾರಲಾಯಿತು.

ತಮ್ಮನ್ನು ಕೈದು ಮಾಡಲಾಗಿದೆ ಎಂದು ತಿಳಿದ ಕೂಡಲೆ, ಡಿಯಾಗೋ ಡಯಾಸ್ ತಮ್ಮೊಂದಿಗೆ ಇದ್ದ ಒಬ್ಬ ಆಫ್ರಿಕಾ ಮೂಲದ ವ್ಯಕ್ತಿಯನ್ನು ಕರೆದು ಅವನು ಕರಾವಳಿಯುದ್ದಕ್ಕೂ ಪ್ರಯಾಣಿಸಿ, ರಾಜನ ಆದೇಶದಂತೆ ತನ್ನನ್ನು ಕೈದು ಮಾಡಲಾಗಿದೆ ಎಂಬ ಸಂದೇಶವನ್ನು ಹಡಗಿನಲ್ಲಿದ್ದವರಿಗೆ ತಲುಪಿಸಲು ಸಾಧ್ಯವಾಗುವಂತೆ, ಹಡಗಿಗೆ ಕರೆದೊಯ್ಯಲು ಯಾರಾದರೂ ಸಿಗುವರೇ

---

[45] ಕ್ಯಾಲಿಕಟ್‌ನ ಒಂದು ಬಹಾರ್ 208.16 ಕಿಲೋಗ್ರಾಂಗಳಿಗೆ ಸಮನಾಗಿತ್ತು. (Nunes, *O Livro dos Pesos*.)

[46] ಕ್ಯಾಲಿಕಟ್‌ನಲ್ಲಿರುವ ಶೆರಾಫಿಂ ಸುಮಾರು 7*s*. 5*d*. *(7* ಶಿಲ್ಲಿಂಗ್. 5ಪೆನ್ಸ್); ಆದ್ದರಿಂದ ಬೇಡಿಕೆಯ ಮೊತ್ತವು £223 ಆಗಿತ್ತು.

ಎಂದು ಹುಡುಕಲು ಹೇಳಿದನು. ಡಿಯಾಗೋ ಕಳುಹಿಸಿದ ವ್ಯಕ್ತಿಯು ಪಟ್ಟಣದ ಹೊರವಲಯಕ್ಕೆ ಹೋದನು. ಅಲ್ಲಿ ಕೆಲವು ಮೀನುಗಾರರು ವಾಸಿಸುತ್ತಿದ್ದರು. ಅವರಲ್ಲಿ ಒಬ್ಬನು ಮೂರು ಫಣೊಗಳಿಗೆ ಅವನನ್ನು ತನ್ನ ದೋಣಿಯಲ್ಲಿ ಕೂರಿಸಿ ಹಡಗಿಗೆ ಕರೆದೊಯ್ಯಲು ಒಪ್ಪಿದನು. ಆಗ ಕತ್ತಲೆಯಾಗಿದ್ದ ಕಾರಣ ಮೀನುಗಾರನು ಇದನ್ನು ಮಾಡಲು ಮುಂದಾಗಿದ್ದನು ಮತ್ತು ನಗರದಲ್ಲಿರುವವರಿಗೆ ಇದು ಗೊತ್ತಾಗುವ ಸಾಧ್ಯತೆ ಇರಲಿಲ್ಲ. ಅವನು ಆತನನ್ನು ತನ್ನ ದೋಣಿಯಲ್ಲಿ ಕೂರಿಸಿ ತಕ್ಷಣವೇ ಹೊರಟನು. ಇದು ನಡೆದದ್ದು ಸೋಮವಾರ, 13 ಆಗಸ್ಟ್, 1498 ರಂದು.

ಈ ಸುದ್ದಿ ನಮಗೆ ದುಃಖ ತಂದಿತು; ನಮ್ಮ ಕೆಲವು ಜನರು ಶತ್ರುಗಳ ಕೈಯಲ್ಲಿ ಸಿಲುಕಿಹಾಕಿಕೊಂಡಿದ್ದಾರೆ ಎಂದು ಮಾತ್ರವಲ್ಲ, ಜೊತೆಗೆ ಇದು ನಮ್ಮ ನಿರ್ಗಮನಕ್ಕೆ ಅಡ್ಡಿಯಾಗಿತ್ತು ಕೂಡ. ನಾವು ನಮ್ಮವನೆಂದು ಭಾವಿಸಿದ ಒಬ್ಬ ಕ್ರೈಸ್ತ ರಾಜನು ನಮಗೆ ಹೀಗೆ ಮೋಸ ಮಾಡಿದನೆಂದು ನಾವು ದುಃಖಿತರಾಗಿದ್ದೆವು. ಆದರೆ ನಾವು ಅವನನ್ನು ತಪ್ಪಿತಸ್ಥನನ್ನಾಗಿ ನೋಡಲಿಲ್ಲ, ಏಕೆಂದರೆ ನಮ್ಮ ಬಗ್ಗೆ ತಿಳಿದಿದ್ದ ಮೆಕ್ಕಾ ಮತ್ತು ಇತರೆಡೆಗಳಿಂದ ಬಂದಿದ್ದ ಮುಸ್ಲಿಂ ವ್ಯಾಪಾರಿಗಳಿಗೆ ನಮ್ಮ ಬಗ್ಗೆ ತೀವ್ರ ಅಸಹನೆ ಇದೆ ಎಂದು ನಮಗೆ ಚೆನ್ನಾಗಿ ತಿಳಿದಿತ್ತು. ನಾವು ಕಳ್ಳರು ಎಂದು ಅವರು ರಾಜನಿಗೆ ಹೇಳಿದ್ದರು ಮತ್ತು ಒಮ್ಮೆ ನಮ್ಮ ಹಡಗುಗಳು ಅವನ ದೇಶದ ಮೂಲಕ ಹಾದು ಹೋದರೆ ಮೆಕ್ಕಾದಿಂದ ಅಥವಾ ಕ್ಯಾಂಬೆಯಿಂದ ಅಥವಾ ಇಮ್ಗೋಸ್[47] ನಿಂದ ಅಥವಾ ಬೇರೆ ಎಲ್ಲಿಂದಲೂ ಯಾವುದೇ ಹಡಗುಗಳು ಇಲ್ಲಿಗೆ ಬರಲಾರವು ಎಂದು ಅವರು ರಾಜನಿಗೆ ಹೇಳಿದ್ದರು. ಅಷ್ಟೇ ಅಲ್ಲದೆ, ರಾಜನಿಗೆ ನಮ್ಮಿಂದ [ಪೋರ್ಚುಗಲ್‌ನೊಂದಿಗಿನ ವ್ಯಾಪಾರದಿಂದ] ಯಾವುದೇ ಲಾಭ ಇಲ್ಲ, ಏಕೆಂದರೆ ನಮ್ಮಲ್ಲಿ ನೀಡಲು ಏನೂ ಇಲ್ಲ, ಬದಲಿಗೆ ನಾವು ಇಲ್ಲಿ ಇದ್ದುದ್ದನ್ನು ತೆಗೆದುಕೊಂಡು ಹೋಗುತ್ತೇವೆ ಮಾತ್ರ; ಇದರಿಂದ ದೇಶ ಹಾಳಾಗಿ ಹೋಗುತ್ತದೆ, ಎಂದು ಅವರು ಹೇಳಿದ್ದರು. ಇದಲ್ಲದೆ, ನಾವು ಪೋರ್ಚುಗಲ್ ಗೆ ಹಿಂತಿರುಗದಂತೆ, ನಮ್ಮನ್ನು ಸೆರೆಹಿಡಿದು ಕೊಲ್ಲಲು ಅವರು ರಾಜನಿಗೆ ದೊಡ್ಡ ಮೊತ್ತದ ಲಂಚವನ್ನು ನೀಡಿದ್ದರು.

ಇದೆಲ್ಲವೂ ನಮ್ಮ ಕಥ್ತಾನನಿಗೆ ಈ ದೇಶದ ಒಬ್ಬ ಮುಸ್ಲಿಂ ವ್ಯಾಪಾರಿಯ ಮೂಲಕ ತಿಳಿದುಬಂತು.[48] ಅವನು ತಮ್ಮವರ ಉದ್ದೇಶವನ್ನು ಬಹಿರಂಗಪಡಿಸಿ, ನಮ್ಮ ಕಥ್ತಾನ, ಅದರಲ್ಲೂ ವಿಶೇಷವಾಗಿ ಮುಖ್ಯ ಕಥ್ತಾನ ತೀರಕ್ಕೆ ಹೋಗದಂತೆ ಎಚ್ಚರಿಕೆ ನೀಡಿದನು. ಈ ವರ್ತಕನ ಮೂಲಕ ಇದು ನಮಗೆ ಗೊತ್ತಾಗುವ ಜೊತೆಗೆ, ಇಬ್ಬರು ಕ್ರಿಶ್ಚಿಯನ್ನರು ಕೂಡ ನಮಗೆ ಇದನ್ನೇ ಹೇಳಿದರು. ಕಥ್ತಾನನೇನಾದರೂ ತೀರಕ್ಕೆ ಹೋದರೆ ಅವನ ತಲೆಯನ್ನು ಕತ್ತರಿಸಲಾಗುವುದು, ತನಗೆ ಚಿನ್ನವನ್ನು ಉಡುಗೊರೆ ನೀಡದೆ ತನ್ನ ದೇಶಕ್ಕೆ ಬಂದವರೊಂದಿಗೆ ರಾಜ ವ್ಯವಹರಿಸುವ ರೀತಿ ಇದು, ಎಂದು ಅವರು ಹೇಳಿದರು.

ಆಗಿನ ಸ್ಥಿತಿ ಹೀಗಿತ್ತು. ಮರುದಿನ [ಆಗಸ್ಟ್ 14] ಯಾವುದೇ ದೋಣಿಗಳು ಹಡಗುಗಳ ಬಳಿ ಬರಲಿಲ್ಲ. ಅದರ ಮರುದಿನ [ಆಗಸ್ಟ್ 15] ನಾಲ್ಕು ಜನ ಯುವಕರು ಮರದ ದೋಣಿಯೊಂದರಲ್ಲಿ ಬೆಲೆಬಾಳುವ ಹರಳುಗಳನ್ನು ಮಾರಾಟಕ್ಕೆ ತಂದರು; ಆದರೆ ಅವರು ಈ ರತ್ನಗಳನ್ನು ಮಾರುವ ಉದ್ದೇಶದಿಂದ ಬಂದಿರುವ ಬದಲು, ಅವರಿಗೆ ನಾವು ಏನು ಮಾಡುತ್ತೇವೆ ಎಂದು ನೋಡಲು ಮುಸ್ಲಿಂ ವರ್ತಕರ ಆದೇಶದ ಮೇರೆಗೆ ಬಂದಿದ್ದಾರೆಂದು ನಮಗೆ ತೋರಿತು. ಆದಾಗ್ಯೂ, ಕಥ್ತಾನನು ಅವರನ್ನು ಸ್ವಾಗತಿಸಿದನು ಮತ್ತು ತೀರದಲ್ಲಿರುವ ಅವರ ಜನರಿಗೆ ತಲುಪಿಸಲು ಒಂದು ಪತ್ರವನ್ನು ಬರೆದನು. ಅವರು ಅದನ್ನು ತಮ್ಮೊಂದಿಗೆ ತೆಗೆದುಕೊಂಡು ಹೋದರು. ಅವರಿಗೆ ಯಾವುದೇ ಹಾನಿಯಾಗಿಲ್ಲ ಎಂದು ಅವರಿಗೆ ಗೊತ್ತಾದ ಮೇಲೆ, ಪ್ರತಿದಿನ ಅನೇಕ

---

[47] ಇದು ಒರ್ಮುಜ್ ಆಗಿರಬಹುದೇ?

[48] ಈ ಮುಸಲ್ಮಾನ ಮೊನ್ಸೈಡ್ ಆಗಿದ್ದ. ಇವರನ್ನು ಬೇರೆಡೆ ಹೆಚ್ಚು ನಿಖರವಾಗಿ "ಟುನಿಸ್ ನ ಮುಸಲ್ಮಾನ' ಎಂದು ಉಲ್ಲೇಖಿಸಲಾಗಿದೆ. ಅನುಬಂಧ ಇ ನೋಡಿ.

ವ್ಯಾಪಾರಿಗಳು ಮತ್ತು ವ್ಯಾಪಾರಸ್ಥರಲ್ಲದವರು ಕುತೂಹಲದಿಂದ ನಮ್ಮನ್ನು ನೋಡಲು ಬಂದರು ಮತ್ತು ನಾವು ಎಲ್ಲರನ್ನೂ ಸ್ವಾಗತಿಸಿ, ಅವರಿಗೆ ಊಟತಿಂಡಿ ನೀಡಿ ಕಳುಹಿಸಿದೆವು.

ಮುಂದಿನ ಭಾನುವಾರ [ಆಗಸ್ಟ್ 19] ಸುಮಾರು ಇಪ್ಪತ್ತೈದು ಮಂದಿ ಬಂದರು. ಅವರಲ್ಲಿ ಆರು ಜನ ಒಳ್ಳೆಯ ವ್ಯಕ್ತಿಗಳಂತೆ ಕಂಡರು. ಅವರ ಮೂಲಕ ಆ ಊರಿನಲ್ಲಿ ಸೆರೆಯಾಳುಗಳಾಗಿ ಇರಿಸಲ್ಪಟ್ಟ ನಮ್ಮವರನ್ನು ಬಿಡಿಸಿಕೊಳ್ಳಬಹುದು ಎಂದು ಕಥ್ತಾನ ಯೋಚಿಸಿದನು. ಅವರನ್ನು ಮತ್ತು ಅವರ ಜೊತೆ ಇನ್ನು ಹದಿನೆಂಟು ಮಂದಿ[49]ಯನ್ನು ಕಥ್ತಾನ ನಮ್ಮ ಜೊತೆ ಇರಿಸಿಕೊಂಡು, ಉಳಿದವರನ್ನು ದೋಣಿಗೆ ಇಳಿಸಿ, ಅವರ ಕೈಯಲ್ಲಿ ರಾಜನ ಮುಸ್ಲಿಂ ಕೊತ್ವಾಲನ ಕೈಗೆ ತಲುಪಿಸಲು ಒಂದು ಪತ್ರವನ್ನು ಕೊಟ್ಟನು. ಆ ಪತ್ರದಲ್ಲಿ, ಅವರು ಸೆರೆಯಾಳುಗಳಾಗಿಟ್ಟ ನಮ್ಮವರನ್ನು ಕಳುಹಿಸಿಕೊಟ್ಟರೆ ನಾವು ಕೂಡ ನಮ್ಮ ಸೆರೆಯಲ್ಲಿರುವ ಅವರ ಜನರನ್ನು ಬಿಟ್ಟುಬಿಡುವುದಾಗಿ ಬರೆದಿದ್ದನು. ಅವರ ಕಡೆಯವರು ನಮ್ಮ ಬಂಧನದಲ್ಲಿದ್ದಾರೆ ಎಂದು ದಡದಲ್ಲಿದ್ದವರಿಗೆ ಗೊತ್ತಾದ ಕೂಡಲೆ ಅವರ ಒಂದು ಗುಂಪು ನಮ್ಮ ಸರಕುಗಳನ್ನು ದಾಸ್ತಾನು ಮಾಡಿಟ್ಟ ಮನೆಗೆ ತೆರಳಿ, ಅಲ್ಲಿದ್ದ ನಮ್ಮವರನ್ನು ಯಾವುದೇ ಹಾನಿ ಮಾಡದೆ ರಾಜನ ಕೊತ್ವಾಲನ ಮನೆಗೆ ಕರೆದೊಯ್ದರು.

ಇದೇ ತಿಂಗಳ 23,[50] ಗುರುವಾರ, ನಾವು ಪೋರ್ಚುಗಲ್‌ಗೆ ಹೊರಟೆವು, ಆದರೆ ಶೀಘ್ರದಲ್ಲೇ ಹಿಂತಿರುಗುವ ಭರವಸೆ ಇಟ್ಟುಕೊಂಡಿದ್ದೇವೆ, ಆಗ ಅವರಿಗೆ ನಾವು ನಾವು ಕಳ್ಳರೋ ಅಲ್ಲವೋ ಎಂಬುದು ತಿಳಿಯುತ್ತದೆ, ಎಂದು ಹೇಳಿ, ನಮ್ಮ ನೌಕಾಯಾನ ಶುರು ಮಾಡಿದೆವು. ನಾವು ಕ್ಯಾಲಿಕಟ್ ನಿಂದ ಸುಮಾರು ನಾಲ್ಕು ಲೀಗ್‌ಗಳನ್ನು ದೂರದಲ್ಲಿ, ಎದುರುಗಾಳಿಯಿಂದ ತಪ್ಪಿಸಿಕೊಳ್ಳಲು ಲಂಗರು ಹಾಕಿದೆವು.

ಮರುದಿನ [ಆಗಸ್ಟ್ 23] ನಾವು ಭೂಮಿಗೆ ಹತ್ತಿರವಾಗುವಂತೆ ಚಲಿಸಿದೆವು. ಆದರೆ ಕ್ಯಾಲಿಕಟ್ ಗೆ ಎದುರಾಗಿ ಸಮುದ್ರದಲ್ಲಿ ಆಳ ಇಲ್ಲದ ಕಾರಣ, ನಾವು ಮತ್ತೆ ನಗರಕ್ಕೆ ಹತ್ತಿರವಾಗಿ ಲಂಗರು ಹಾಕಿದೆವು.

ಶನಿವಾರ [ಆಗಸ್ಟ್ 25] ನಾವು ಮತ್ತೆ ತೀರದಿಂದ ತುಂಬಾ ದೂರಕ್ಕೆ ಹೋಗಿ ಲಂಗರು ಹಾಕಿದೆವು. ಅಲ್ಲಿಂದ ಭೂಪ್ರದೇಶ ಅಷ್ಟು ಸುಲಭದಲ್ಲಿ ಕಾಣಿಸುತ್ತಿರಲಿಲ್ಲ. ಭಾನುವಾರ [ಆಗಸ್ಟ್ 26] ನಾವು ಲಂಗರು ಹಾಕಿ, ಹಾಯಿ ಬಿಚ್ಚಲು ಗಾಳಿಗಾಗಿ ಕಾಯುತ್ತಿರುವಾಗ, ನಮ್ಮನ್ನು ಹುಡುಕಿಕೊಂಡು ದೋಣಿಯೊಂದು ಹತ್ತಿರ ಬಂತು. ಅದರಲ್ಲಿದ್ದವರು, ಡಿಯಾಗೊ ಡಯಾಸ್ ರಾಜನ ಮನೆಯಲ್ಲಿದ್ದಾನೆ ಮತ್ತು ನಾವು ಬಂಧಿಸಿದವರನ್ನು ಬಿಡುಗಡೆ ಮಾಡಿದರೆ, ಆತನನ್ನು ಹಡಗಿಗೆ ಕರೆತರುತ್ತಾರೆ, ಎಂದು ಹೇಳಿದರು. ಆದರೆ, ಕಥ್ತಾನನಿಗೆ ಅವರು ಡಿಯಾಗೊ ಡಯಾಸ್ ನನ್ನು ಸಾಯಿಸಿದ್ದಾರೆ; ನಮಗೆ ಆತನನ್ನು ಕರೆತರುವುದಾಗಿ ಹೇಳುವ ಮೂಲಕ ಅವರು ಅವರ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸುವವರೆಗೆ, ಅಥವಾ ನಮ್ಮನ್ನು ಸೆರೆಹಿಡಿಯಲು ಸಾಧ್ಯವಾಗುವ ಹಡಗುಗಳು ಮೆಕ್ಕಾದಿಂದ ಬರುವವರೆಗೆ ನಮ್ಮನ್ನು ತಡೆಹಿಡಿಯುವ ಪ್ರಯತ್ನ ಇದು ಎಂದು ಅನ್ನಿಸಿತು. ಹಾಗಾಗಿ ಅವನು ಅವರನ್ನು ಅಲ್ಲಿಂದ ಜಾಗ ಖಾಲಿ ಮಾಡಲು ಹೇಳಿದನು, ಇಲ್ಲದಿದ್ದರೆ ಅವರ ಮೇಲೆ ಫಿರಂಗಿದಾಳಿ ಮಾಡುವುದಾಗಿ ಬೆದರಿಕೆ ಹಾಕಿದನು. ಡಯಾಸ್ ಮತ್ತು ಅವನ ಸಂಗಡಿಗರನ್ನು ಅಥವಾ ಅವರಿಂದ ಒಂದು ಕನಿಷ್ಠ ಪತ್ರವನ್ನಾದರೂ ತರದೆ ಹಿಂತಿರುಗುವಂತಿಲ್ಲ ಎಂದು ಆದೇಶಿಸಿದನು. ಅವರು ಇದನ್ನು ತ್ವರಿತವಾಗಿ ಮಾಡದಿದ್ದಲ್ಲಿ ನಮ್ಮ ಬಂಧನದಲ್ಲಿರುವ ಅವರ

---

[49] ಲೇಖಕರು ಹತ್ತೊಂಬತ್ತು ಎಂದು ಹೇಳುತ್ತಾರೆ; ಆದರೆ ಹಿಂದೆ ಏನಾಯಿತು ಎಂಬುದನ್ನು ನೋಡಿದರೆ, ಅಲ್ಲಿ ಒಟ್ಟು ಹದಿನೆಂಟು ಜನ ಮಾತ್ರ ಇದ್ದರು ಎಂದು ತೋರುತ್ತದೆ. ಅನುಬಂಧ ಇ ನೋಡಿ.

[50] ಲೇಖಕರು ಬುಧವಾರ ಎಂದು ಹೇಳುತ್ತಾರೆ, ಆದರೆ ಆ ದಿನ 22ನೇ ತಾರೀಖು ಆಗಿತ್ತು.

ಜನರ ತಲೆಗಳನ್ನು ಕತ್ತರಿಸುವುದಾಗಿ ಬೆದರಿಸಿದನು. ನಂತರ ಗಾಳಿ ಚೆನ್ನಾಗಿ ಬೀಸಿತು. ನಾವು ಕರಾವಳಿಯುದ್ದಕ್ಕೂ ಸಾಗಿ, ಮುಂದಕ್ಕೆ ಲಂಗರು ಹಾಕಿದೆವು.

[ರಾಜನು ಡಿಯಾಗೊ ಡಯಾಸ್‌ನನ್ನು ಕರೆಸಿಕೊಳ್ಳುತ್ತಾನೆ]

ನಾವು ಪೋರ್ಚುಗಲ್‌ಗೆ ಮರಳುತ್ತಿದ್ದೇವೆ ಎಂಬುದನ್ನು ಅರಿತ ರಾಜನು ನಮ್ಮೊಂದಿಗೆ ಆತನಿಗೆ ಬೇಕಾದ ಹಾಗೆ ಇನ್ನು ವರ್ತಿಸಲು ಸಾಧ್ಯವಿಲ್ಲ ಎಂದು ಅರಿತು, ಇಲ್ಲಿ ತನಕ ನಡೆದ ತಪ್ಪನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿದನು. ಅವನು ಡಿಯಾಗೊ ಡಯಾಸ್ ನನ್ನು ಕರೆತರಲು ಆದೇಶಿಸಿದನು ಮತ್ತು ಅವನು ಬಂದಾಗ, ಅವನು ಉಡುಗೊರೆ ತೆಗೆದುಕೊಂಡು [ವಾಸ್ಕೋ ಕಳುಹಿಸಿದ ಉಡುಗೊರೆ] ಹೋದಾಗ ನೋಡಿಕೊಂಡದ್ದಕ್ಕಿಂತಲೂ ಹೆಚ್ಚಿನ ಸಹೃದಯತೆಯಿಂದ ಸ್ವಾಗತಿಸಿದನು. ಇಲ್ಲಿಯ ಜನರನ್ನು ಕಥ್ತಾನ ಏಕೆ ಕರೆದೊಯ್ದಿದ್ದಾನೆ ಎಂದು ಕೇಳಿದನು. ರಾಜನು ತನ್ನನ್ನು ಮತ್ತು ತನ್ನ ಸಂಗಡಿಗರನ್ನು ಹಡಗುಗಳಿಗೆ ಹಿಂತಿರುಗಲು ಅನುಮತಿಸದೆ, ಅವರನ್ನು ನಗರದಲ್ಲಿ ಕೈದಿಗಳಾಗಿ ಬಂಧಿಸಿರುವ ಕಾರಣ ಹೀಗೆ ಮಾಡಿರುವುದು ಎಂದು ಡಿಯಾಗೊ ಡಯಾಸ್ ಹೇಳಿದನು. ತಾನು ಒಳ್ಳೆಯದನ್ನೇ ಮಾಡಿದ್ದೆ ಎಂದು ಹೇಳಿ, ತನಗೆ ಇದರ ಬಗ್ಗೆ ಏನೂ ತಿಳಿಯದು, ಇದಕ್ಕೆಲ್ಲಾ ತನ್ನ ಕೊತ್ವಾಲರೇ ಕಾರಣ ಎನ್ನುವ ರೀತಿಯಲ್ಲಿ ರಾಜನು ತನ್ನ ಕೊತ್ವಾಲನು ಏನಾದರೂ ಬೇಡಿಕೆ ಇಟ್ಟಿದ್ದನೇ[51] ಎಂದು ಕೇಳಿದನು. ಆಗ ತನ್ನ ಕೊತ್ವಾಲನ ಕಡೆ ತಿರುಗಿ, ಈ ದೇಶಕ್ಕೆ ಬಂದ ಕೆಲವು ವ್ಯಾಪಾರಿಗಳ ಮೇಲೆ ಸುಂಕ ವಿಧಿಸಿದ ಕಾರಣಕ್ಕೆ ಇನ್ನೊಬ್ಬ ಕೊತ್ವಾಲನನ್ನು ಸಾಯಿಸಿದ್ದು ನಿನಗೆ ತಿಳಿದಿಲ್ಲವೇ ಎಂದು ಕೇಳಿದನು. ನಂತರ ರಾಜನು, ಡಿಯಾಗೋಗೆ, ನೀನು ಮತ್ತು ನಿಮ್ಮೊಂದಿಗೆ ಇರುವ ಇತರರು ಹಡಗುಗಳಿಗೆ ಹಿಂತಿರುಗಿ; ಅಲ್ಲಿ ಬಂಧನದಲ್ಲಿಟ್ಟ ಜನರನ್ನು ಹಿಂದೆ ಕಳುಹಿಸಲು ಕಥ್ತಾನನಿಗೆ ತಿಳಿಸು. ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುವವರು, ನಿಮ್ಮ ಕಥ್ತಾನ ಈ ನೆಲದ ಮೇಲೆ ಸ್ಥಾಪಿಸಲು ಬಯಸಿರುವ ಸ್ತಂಭವನ್ನು ತೆಗೆದುಕೊಂಡು ಬಂದು ಸ್ಥಾಪಿಸುತ್ತಾರೆ. ನೀನು ಕೂಡ ನಿಮ್ಮ ಸರಕುಗಳೊಂದಿಗೆ ಇಲ್ಲಿಯೇ ಇರು ಎಂದು ಹೇಳಿದನು, ಇದರ ಜೊತೆಗೆ ಕಥ್ತಾನನಿಗೆ ತಲುಪಿಸಲು ರಾಜನು ಒಂದು ಪತ್ರ ಬರೆದನು. ಅದನ್ನು ಡಿಯಾಗೊ ಡಯಾಸ್ ರಾಜನಿಗೆ ಬರೆದು ಕೊಟ್ಟನು. ಅದನ್ನು ಈ ದೇಶದ ಪದ್ಧತಿಯಂತೆ ತಾಳೆಗರಿಯ ಮೇಲೆ ಕಬ್ಬಿಣದ ಪೆನ್ನಿನಿಂದ ಬರೆಯಲಾಗಿತ್ತು. ಅ ಪತ್ರ ಪೋರ್ಚುಗಲ್ ರಾಜನನ್ನು ಉದ್ದೇಶಿಸಿ ಬರೆಯಲಾಗಿತ್ತು. ಈ ಪತ್ರದ ಧಾಟಿ[52] ಹೀಗಿದೆ:-

"ನಿಮ್ಮ ದೇಶದ ಸಜ್ಜನರಾದ ವಾಸ್ಕೋ ಡ ಗಾಮಾ ನನ್ನ ದೇಶಕ್ಕೆ ಬಂದಿದ್ದಾರೆ. ಅದು ನನಗೆ ಸಂತೋಷ ಕೊಟ್ಟಿದೆ. ನನ್ನ ದೇಶವು ದಾಲ್ಚಿನ್ನಿ, ಲವಂಗ, ಶುಂಠಿ, ಮೆಣಸು ಮತ್ತು ಅಮೂಲ್ಯವಾದ ರತ್ನಗಳಿಂದ ಸಮೃದ್ಧವಾಗಿದೆ. ಇದಕ್ಕೆ ವಿನಿಮಯವಾಗಿ ನಾನು ನಿಮ್ಮಿಂದ ಚಿನ್ನ, ಬೆಳ್ಳಿ, ಹವಳಗಳು ಮತ್ತು ಕಡುಗೆಂಪು ಬಟ್ಟೆಯನ್ನು ಅಪೇಕ್ಷಿಸುತ್ತೇನೆ"

[ಕ್ಯಾಲಿಕಟ್ ಬಿಟ್ಟು ಮುಂದಕ್ಕೆ, ಆಗಸ್ಟ್ 27-30.]

ಸೋಮವಾರ, ಈ ತಿಂಗಳ 27 ರಂದು, ಬೆಳಿಗ್ಗೆ, ನಾವು ಲಂಗರು ಹಾಕಿದ್ದಾಗ, ಏಳು ದೋಣಿಗಳಲ್ಲಿ ಅನೇಕ ಜನರು ಡಿಯಾಗೊ ಡಯಾಸ್ ಮತ್ತು ಅವನೊಂದಿಗೆ ಇದ್ದ ಇತರರನ್ನು [ಪೋರ್ಚುಗೀಸ್] ಕರೆತಂದರು. ಅವನನ್ನು ಹಡಗಿಗೆ ಏರಿಸಲು ಧೈರ್ಯ ಮಾಡದೆ, ಹಡಗಿಗೆ ಇನ್ನೂ ಕಟ್ಟಿಕೊಂಡೇ ಇದ್ದ ಕಥ್ತಾನನ ಉದ್ದನೆಯ ದೋಣಿಯಲ್ಲಿ ಅವನನ್ನು ಇಳಿಸಿದರು. ಅವರು ಯಾವುದೇ ಸರಕುಗಳನ್ನು ತಂದಿರಲಿಲ್ಲ, ಏಕೆಂದರೆ ಡಿಯಾಗೊ ಡಯಾಸ್ ಅವರೊಂದಿಗೆ ಹಿಂತಿರುಗುತ್ತಾನೆ ಎಂದು ಅವರು

---

[51] 600 ಶೆರಾಫಿಂಗಳ ಕುರಿತಾಗಿನ ಉಲ್ಲೇಖ

[52] "ಧಾಟಿ", ಅಕ್ಷರಶಃ ಪದ ಬಳಕೆ ಅಲ್ಲ; ಹಾಗಾಗಿ ಪೂರ್ವದೇಶದ ಜನರು ಸಾಮಾನ್ಯವಾಗಿ ಗೌರವಾದಾರದಿಂದ ಬಳಸುವ ಪದಗಳ ಬಳಕೆ ಇಲ್ಲದಿರುವುದನ್ನು ಅವರು ಪೋರ್ಚುಗಲ್‌ನ ರಾಜನಿಗೆ ಉದ್ದೇಶಪೂರ್ವಕವಾಗಿ ಮಾಡಿರುವ ಅವಮಾನವೆಂದು ವ್ಯಾಖ್ಯಾನಿಸಬಾರದು.

ಅಂದುಕೊಂಡಿದ್ದರು. ಆದರೆ ಒಮ್ಮೆ ಅವನನ್ನು ಹಡಗಿಗೆ ಬರಮಾಡಿಕೊಂಡ ಕಫ್ತಾನನು ಮತ್ತೆ ಅವನನ್ನು ಹಿಂದೆ ಕಳುಹಿಸಲು ಸಮ್ಮತಿಸಲಿಲ್ಲ. ರಾಜನು ಆದೇಶಿಸಿದಂತೆ ಸ್ತಂಭ[53]ವನ್ನು ಸ್ಥಾಪಿಸಲು ಅದನ್ನು ದೋಣಿಯಲ್ಲಿದ್ದವರಿಗೆ ಕೊಡಲಾಯಿತು. ಜೊತೆಗೆ ಅವನ ಸೆರೆಯಲ್ಲಿದ್ದ ಆರು ಪ್ರಮುಖರನ್ನು ಬಿಡುಗಡೆ ಮಾಡಿ, ಇತರ ಆರು ಜನರನ್ನು ಉಳಿಸಿಕೊಂಡನು. ಮಾರನೆ ದಿನ ಅವರು ಸರಕುಗಳನ್ನು ಹಿಂದೆ ತಂದರೆ ಅವರನ್ನು ಕೂಡ ಹಿಂದೆ ಕಳುಹಿಸಿಕೊಡುವುದಾಗಿ ಭರವಸೆ ನೀಡಿದನು.

ಮಂಗಳವಾರ [ಆಗಸ್ಟ್ 28] ಬೆಳಿಗ್ಗೆ, ಲಂಗರು ಹಾಕುತ್ತಿರುವಾಗ, ನಮ್ಮ ಭಾಷೆಯನ್ನು ಮಾತನಾಡುವ ಟ್ಯೂನಿಸ್‌ನ ಮುಸ್ಲಿಂ ವರ್ತಕ[54]ನೊಬ್ಬನು, ನಮ್ಮ ಹಡಗೊಂದರಲ್ಲಿ ಆಶ್ರಯ ಪಡೆದನು. ಅವನಲ್ಲಿದ್ದುದ್ದೆಲ್ಲವನ್ನೂ ಅವನಿಂದ ಕಸಿದುಕೊಳ್ಳಲಾಗಿದೆಯೆಂದೂ, ಅವನಿಗಿನ್ನು ಆಪತ್ತು ಕಾದಿದೆಯೆಂದೂ, ಮತ್ತು ಇದು ಅವನ ಎಂದಿನ ಹಣೆಬರಹ ಎಂದೂ ಅಲವತ್ತುಕೊಂಡನು. ಅವನು ಪೋರ್ಚುಗಲ್ ರಾಜನ ಆದೇಶದ ಮೇರೆಗೆ ಕ್ಯಾಲಿಕಟ್ ಗೆ ಬಂದಿದ್ದಾನೆ, ಅವನೊಬ್ಬ ಕ್ರಿಶ್ಚಿಯನ್, ಎಂದು ಈ ದೇಶದ ಜನರು ಅವನ ಮೇಲೆ ಆರೋಪ ಹೊರಿಸಿರುವರೆಂದೂ, ಅದಕ್ಕಾಗಿ ಅವನು ಯಾವುದೇ ದಿನ ಹತ್ಯೆಗೊಳಗಾಗುವ ಸಾಧ್ಯತೆಯಿದ್ದುದರಿಂದ, ಆ ದೇಶದಲ್ಲಿ ಉಳಿಯುವ ಬದಲಾಗಿ ನಮ್ಮೊಂದಿಗೆ ಬರುವುದೇ ಉತ್ತಮ ಎಂದು ನಿರ್ಧರಿಸಿರುವುದಾಗಿಯೂ ಹೇಳಿದನು.

ಹತ್ತು ಗಂಟೆಗೆ ಬಹಳ ಜನರಿದ್ದ ಏಳು ದೋಣಿಗಳು ನಮ್ಮ ಬಳಿಗೆ ಬಂದವು. ಅವುಗಳಲ್ಲಿ ಮೂರು ದೋಣಿಗಳ ಬೆಂಚುಗಳ ಮೇಲೆ ನಾವು ಅವರ ಊರಿನಲ್ಲಿ ಬಿಟ್ಟಿದ್ದ ಪಟ್ಟೆ ಪಟ್ಟೆಯ ಬಟ್ಟೆಗಳನ್ನು ಹೊದಿಸಲಾಗಿತ್ತು. ಇದಿಷ್ಟೇ ನಮಗೆ ಸೇರಿದ ಸರಕು ಎಂದು ಅವರು ನಮಗೆ ಹೇಳುತ್ತಿದ್ದಾರೆ ಎಂದು ನಮಗೆ ಅರ್ಥವಾಯಿತು.[55] ಈ ಮೂರು ದೋಣಿಗಳು ಹಡಗಿನಿಂದ ತುಸು ಅಂತರದಲ್ಲಿ ನಿಂತುಕೊಂಡವು, ಆದರೆ ಇತರ ನಾಲ್ಕು ದೋಣಿಗಳು ಇನ್ನೂ ದೂರ ಉಳಿದವು. ಅವರ ಜನರನ್ನು ನಮ್ಮ ದೋಣಿಯೊಂದರಲ್ಲಿ ನಾವು ಕಳುಹಿಸಿದರೆ, ಅದಕ್ಕೆ ಬದಲಾಗಿ ಅವರು ನಮ್ಮ ಸರಕುಗಳನ್ನು ಹಿಂತಿರುಗಿಸಲಿದ್ದಾರೆ ಎಂದು ಅವರು ನಮಗೆ ತಿಳಿಸಿದರು. ಆದರೆ, ನಮಗೆ ಅವರ ಕುತಂತ್ರ ಅರ್ಥವಾಯಿತು ಮತ್ತು ನಮ್ಮ ಮುಖ್ಯ ಕಫ್ತಾನ ನಮಗೆ ಅವರು ತಂದಿರುವ ಯಾವ ಸರಕುಗಳು ಬೇಕಾಗಿಲ್ಲವೆಂದೂ, ಅವರು ಹೊರಟುಹೋಗಬೇಕೆಂದೂ, ನಾವು ನಮ್ಮೊಂದಿಗೆ ಇರಿಸಿಕೊಂಡಿರುವವರನ್ನು ಪೋರ್ಚುಗಲ್‌ಗೆ ಕರೆದೊಯ್ಯುತ್ತೇವೆ[56] ಎಂದೂ ಹೇಳಿದನು. ಅಷ್ಟೇ ಅಲ್ಲದೆ, ನಾವು ಸ್ವಲ್ಪ ಸಮಯದಲ್ಲಿಯೇ ಮತ್ತೆ ಕ್ಯಾಲಿಕಟ್ ಗೆ ಹಿಂದಿರುಗುವುದಾಗಿಯೂ, ಆಗ ಮುಸ್ಲಿಂ ವರ್ತಕರು ನಮ್ಮ ಬಗ್ಗೆ ಹೇಳಿರುವಂತೆ ನಾವು ಕಳ್ಳರೋ ಅಲ್ಲವೋ ಎಂಬುದು ಅವರಿಗೆ ತಿಳಿಯುವುದಾಗಿಯೂ, ಹಾಗಾಗಿ ಅವರು ಜಾಗ್ರತೆಯಿಂದ ವರ್ತಿಸುವುದು ಉತ್ತಮವೆಂದೂ ಹೇಳಿದನು.

ಬುಧವಾರ, 29 [ಆಗಸ್ಟ್]ರಂದು, ಮುಖ್ಯ ಕಫ್ತಾನ ಮತ್ತು ಇತರ ಕಫ್ತಾನರು ತಮ್ಮ ನಡುವೆ ಮಾತನಾಡಿಕೊಂಡು, ನಾವು ಯಾವ ದೇಶವನ್ನು ಹುಡುಕಿಕೊಂಡು ಹೊರಟಿದ್ದೆವೋ ಅದನ್ನು ಮತ್ತು ಅದರ ಜೊತೆಗೆ ಸಂಬಾರ ದ್ರವ್ಯಗಳು ಮತ್ತು ಅಮೂಲ್ಯ ರತ್ನಗಳು ಇರುವುದನ್ನು ಕಂಡುಕೊಂಡಾಗಿದೆ; ಆದರೆ ಇಲ್ಲಿಯ ಜನರ ಜೊತೆ ಸೌಹಾರ್ದ ಸಂಬಂಧವನ್ನು ಸ್ಥಾಪಿಸುವುದು

---

[53] ಈ ಸ್ತಂಭವನ್ನು ಸಂತ ಗ್ಯಾಬ್ರಿಯಲ್ ಅವರಿಗೆ ಸಮರ್ಪಿಸಲಾಯಿತು. ಆದರೆ ರಾಜನು ತಾನು ವಾಗ್ದಾನ ಮಾಡಿದಂತೆ ಅದನ್ನು ಸ್ಥಾಪಿಸಿದ ಎಂಬುದಕ್ಕೆ ಯಾವುದೇ ದಾಖಲೆಗಳಿಲ್ಲ.

[54] ಈ "ಟ್ಯುನಿಸ್ ನ ಮುಸಲ್ಮಾನ", ಕ್ಯಾಸ್ಟಾನ್ಹೆಡಾ ಪ್ರಕಾರ (I, c. 24, p. 8), ಬೋನ್ತೈಬ್ (Bontaibe, Monçaide), ಈತನ ಬಗ್ಗೆ ಅನುಬಂಧ E ನೋಡಿ

[55] ವಾಸ್ತವದಲ್ಲಿ, ಇದು ಕೆಳಗಿಳಿಸಿದ ಸರಕಿನ ಒಂದು ಭಾಗ ಮಾತ್ರವಾಗಿತ್ತು, ಮತ್ತು ಯಾವುದನ್ನು ಹಿಂದಿರುಗಿಸರಿರಲಿಲ್ಲವೋ ಅದಕ್ಕೆ ಜಾಮೋರಿನ್ ಕಡೆಯಿಂದ ಹಿಂಪಾವತಿ ಪಡೆಯಬೇಕೆಂದು ಕಬ್ರಾಲ್‌ಗೆ ಆದೇಶಿಸಲಾಗಿತ್ತು. (*Alguns documentos*, p. 98)

[56] ಕ್ಯಾಲಿಕಟ್‌ನ ಈ ಐದು ಜನರನ್ನು ಲಿಸ್ಬನ್‌ಗೆ ಕರೆದೊಯ್ಯಲಾಗಿತ್ತು. ಅವರನ್ನು ಕಬ್ರಾಲ್ ಮತ್ತೆ ಅವರ ದೇಶಕ್ಕೆ ಹಿಂದೆ ಕರೆದುಕೊಂಡು ಬಂದರು. (see *Alguns documentos*, p. 97).

ಅಸಾಧ್ಯ. ಹಾಗಾಗಿ ನಾವು ಹಿಂದಿರುಗುವುದು ಉತ್ತಮ ಎಂಬ ನಿರ್ಧಾರಕ್ಕೆ ಬಂದರು. ಜೊತೆಗೆ ನಾವು ಸೆರೆ ಹಿಡಿದಿರುವ ಜನರನ್ನು ನಮ್ಮೊಂದಿಗೆ ಕರೆದುಕೊಂಡು ಹೋಗುವುದು ಉತ್ತಮ, ಏಕೆಂದರೆ ಮತ್ತೆ ನಾವು ಕ್ಯಾಲಿಕಟ್ ಗೆ ಹಿಂದಿರುಗುವಾಗ ಅಲ್ಲಿಯ ಜನರ ಜೊತೆ ಸೌಹಾರ್ದಯುತ ಸಂಬಂಧವನ್ನು ಸ್ಥಾಪಿಸಲು ಅವರು ನಮಗೆ ಸಹಾಯ ಮಾಡಬಹುದು ಎಂಬ ನಿರ್ಧಾರಕ್ಕೆ ಬರಲಾಯಿತು. ಹಾಗೆ ನಾವು ಇಷ್ಟು ದೊಡ್ಡ ಆವಿಷ್ಕಾರ ಮಾಡಿದ ನಮ್ಮ ಅದೃಷ್ಟಕ್ಕಾಗಿ ಬಹಳವೇ ಸಂತೋಷಪಡುತ್ತಾ ಪೋರ್ಚುಗಲ್ ದಿಕ್ಕಿನಲ್ಲಿ ನಮ್ಮ ಪ್ರಯಾಣವನ್ನು ಮುಂದುವರಿಸಿದೆವು.

ಗುರುವಾರ [ಆಗಸ್ಟ್ 30], ಮಧ್ಯಾಹ್ನ, ನಾವು ಕ್ಯಾಲಿಕಟ್ ನ ಉತ್ತರದಿಕ್ಕಿನಲ್ಲಿ ಸುಮಾರು ಒಂದು ಲೀಗ್‌ನಷ್ಟು ದೂರದಲ್ಲಿ ಕಾಯುತ್ತಾ ನಿಂತಿದ್ದಾಗ [ಸೂಕ್ತ ಗಾಳಿಗಾಗಿ] ಜನರಿಂದ ಕಿಕ್ಕಿರಿದ ಸುಮಾರು ಎಪ್ಪತ್ತು ದೋಣಿಗಳು[57] ನಮ್ಮ ಬಳಿಗೆ ಬಂದವು. ಅವರು ಕೆಂಪು ಬಟ್ಟೆಯನ್ನು ಮಡಿಚಿ ಮಾಡಿದ ಒಂದು ರೀತಿಯ ಮೈಗಾಪು ಧರಿಸಿದ್ದರು. ಅವರ ದೇಹ, ತೋಳುಗಳು ಮತ್ತು ತಲೆಯ ಮೇಲೆ ಇದ್ದ ಆಯುಧಗಳು ಇವು[58]... ಈ ದೋಣಿಗಳು ನಮ್ಮ ಫಿರಂಗಿ ದಾಳಿಯ ವ್ಯಾಪ್ತಿಯೊಳಗೆ ಬಂದಾಗ, ಮುಖ್ಯ ಕಫ್ತಾನ ನಮಗೆ ಗುಂಡು ಹಾರಿಸಲು ಆದೇಶಿಸಿದನು. ಅವರು ಸುಮಾರು ಒಂದೂವರೆ ಗಂಟೆಗಳ ಕಾಲ ನಮ್ಮನ್ನು ಹಿಂಬಾಲಿಸಿದರು; ಅಷ್ಟರಲ್ಲಿ ಗುಡುಗು ಸಹಿತ ಮಳೆಯು ನಮ್ಮನ್ನು ಸಮುದ್ರಕ್ಕೆ ಕೊಂಡೊಯ್ಯಿತು; ಅವರಿಗೆ ನಮ್ಮ ಮೇಲೆ ಇನ್ನು ದಾಳಿ ಮಾಡಲು ಸಾಧ್ಯವಿಲ್ಲ ಎಂದು ಗೊತ್ತಾದಾಗ ಅವರು ಹಿಂತಿರುಗಿದರು. ನಾವು ನಮ್ಮ ಮಾರ್ಗವನ್ನು ಅನುಸರಿಸಿಕೊಂಡು ಪ್ರಯಾಣ ಮುಂದುವರಿಸಿದೆವು.

[ಕ್ಯಾಲಿಕಟ್ ಮತ್ತು ಅಲ್ಲಿನ ವಾಣಿಜ್ಯ ವ್ಯವಹಾರ.]

ಕ್ಯಾಲಿಕಟ್ ಅಥವಾ ಆಲ್ಟಾ ಇಂಡಿಯಾ[59] ಎಂಬ ಈ ದೇಶದಿಂದ ಬರುವ ಸಂಬಾರ ಪದಾರ್ಥಗಳನ್ನು ಪ್ರಪಂಚದ ಇತರ ಎಲ್ಲ ದೇಶಗಳಂತೆ ಪೋರ್ಚುಗಲ್ಲಿನ ಪೂರ್ವ ಮತ್ತು ಪಶ್ಚಿಮದಲ್ಲಿ ಕೂಡ ಬಳಸುತ್ತಾರೆ, ಹಾಗೆಯೇ ವೈವಿಧ್ಯಮಯವಾದ ಅಮೂಲ್ಯ ರತ್ನಗಳು ಕೂಡ. ಈ ಕ್ಯಾಲಿಕಟ್ ನಗರದಲ್ಲಿ ಈ ಕೆಳಗಿನ ಸಂಬಾರ ದ್ರವ್ಯಗಳು ಕಂಡುಬರುತ್ತವೆ, ಇಲ್ಲಿ ಶುಂಠಿ ಮತ್ತು ಕರಿಮೆಣಸು ಮತ್ತು ದಾಲ್ಚಿನ್ನಿಯನ್ನು ಬೆಳೆಯುತ್ತಾರೆ. ಆದರೆ ಇಲ್ಲಿಯ ದಾಲ್ಚಿನ್ನಿ, ಇಲ್ಲಿಂದ ಎಂಟು ದಿನ ಪ್ರಯಾಣ ಮಾಡಿದ ನಂತರ ಸಿಗುವ ಸಿಲಾನ್ [ಸಿಲೋನ್][60]ಎಂಬ ದ್ವೀಪದಲ್ಲಿ ಸಿಗುವ ದಾಲ್ಚಿನ್ನಿಯಷ್ಟು ಉತ್ಕೃಷ್ಟವಾಗಿಲ್ಲ. ಕ್ಯಾಲಿಕಟ್ ನಲ್ಲಿ ಎಲ್ಲಾ ದಾಲ್ಚಿನ್ನಿ ಹೇರಳವಾಗಿ ದೊರಕುತ್ತದೆ. ಮೆಲೆಕ್ವಾ [ಮಲಕ್ಕಾ][61] ಎಂಬ ದ್ವೀಪದಿಂದ ಲವಂಗವನ್ನು ಈ ನಗರಕ್ಕೆ ತರಲಾಗುತ್ತದೆ. ಮೆಕ್ಕಾದ ಹಡಗುಗಳು ಈ ಮಸಾಲೆಗಳನ್ನು ಇಲ್ಲಿಂದ ಮೆಕ್ಕಾ[62]ದ ಜುಡೆಯ [ಜಿಡ್ಡಾ] ಎಂಬ ನಗರಕ್ಕೆ ಒಯ್ಯುತ್ತವೆ ಮತ್ತು ಈ ದ್ವೀಪದಿಂದ ಜುಡೆಯಾಗೆ ಗಾಳಿ ಬೀಸುವ ದಿಕ್ಕಿನಲ್ಲಿ ಸಾಗಿದರೆ ಐವತ್ತು ದಿನಗಳು ಬೇಕಾಗುತ್ತವೆ, ಏಕೆಂದರೆ ಈ ದೇಶದ

---

[57]ಕ್ಯಾಸ್ಟಾನ್ಹೆಡಾ ಇವುಗಳನ್ನು "ಬಾರ್ಕಾಸ್", ತೋನಿ [ದೋಣಿ]' ಎಂದು ಕರೆಯುತ್ತಾರೆ. ಹುಟ್ಟುಹಾಕಿ ಸಾಗುವ ಇವುಗಳನ್ನು ಹಲಗೆಗಳನ್ನು ಒಟ್ಟುಸೇರಿಸಿ ಕಟ್ಟಲಾಗಿರುತ್ತದೆ.

[58] ದಾಖಲೆಯನ್ನು ನಕಲು ಮಾಡಿ ಬರೆಯುತ್ತಿರುವವನ ಟಿಪ್ಪಣಿಯು ಹೀಗೆ ಹೇಳುತ್ತದೆ:-"ಲೇಖಕರು ಈ ಆಯುಧಗಳನ್ನು ಹೇಗೆ ತಯಾರಿಸಲಾಗಿದೆ ಎಂದು ನಮಗೆ ಹೇಳುವುದನ್ನು ಬಿಟ್ಟುಬಿಟ್ಟಿದ್ದಾರೆ."

[59] ಪ್ರೆಸ್ಟರ್ ಜಾನ್ ದೇಶ(ಅಬಿಸ್ಸಿನಿಯಾ)ವನ್ನು "ಲೋವರ್ ಇಂಡಿಯಾ" ಎಂದು ಕರೆಯಲಾಗುತ್ತಿತ್ತು

[60] ಸಿಲೋನ್ ದಾಲ್ಚಿನ್ನಿ ಇನ್ನೂ ತನ್ನ ಪ್ರಾಧಾನ್ಯತೆಯನ್ನು ಉಳಿಸಿಕೊಂಡಿದೆ. ಪ್ರಪಂಚದ ಇತರ ಭಾಗಗಳಲ್ಲಿ ಅದರ ಕೃಷಿಯು ಇಲ್ಲಿಯವರೆಗೆ ಅಂತಹ ಯಶಸ್ಸನ್ನು ಸಾಧಿಸಿಲ್ಲ. ಮಲಬಾರ್‌ನಲ್ಲಿ ಕಂಡುಬರುವ "ದಾಲ್ಚಿನ್ನಿ" ಅಥವಾ ಕ್ಯಾಸಿಯಾ ಅತ್ಯಂತ ಕಡಿಮೆ ಗುಣಮಟ್ಟದ್ದಾಗಿದೆ.

[61] ಮಲಕ್ಕಾ ದ್ವೀಪಗಳು ಮತ್ತು ಅದರಲ್ಲೂ ವಿಶೇಷವಾಗಿ ಅಂಬೋಯಿನಾ, ಲವಂಗದ ನಿಜವಾದ ನೆಲೆಯಾಗಿದೆ, ಇದರ ಕೃಷಿಯನ್ನು ಈಗ ಪ್ರಪಂಚದ ವಿವಿಧ ಭಾಗಗಳಲ್ಲಿ ವ್ಯಾಪಕವಾಗಿ ನಡೆಸಲಾಗುತ್ತಿದೆ.

[62] ಅರೇಬಿಯಾ ಆಗಿರಬೇಕು.

ಹಡಗುಗಳಿಗೆ ಗಾಳಿಗೆದುರಾಗಿ ದಿಕ್ಕು ಬದಲಾಯಿಸಿ ಸಾಗುವ ಸಾಮರ್ಥ್ಯ ಇಲ್ಲ. ಜುಡೆಯಾದಲ್ಲಿ ಅವರು ಅಲ್ಲಿನ ದೊಡ್ಡ ಸುಲ್ತಾನ್[63](Grand Sultan)ನಿಗೆ ಸುಂಕವನ್ನು ಪಾವತಿಸಿ ತಮ್ಮ ಸರಕುಗಳನ್ನು ಇಳಿಸುತ್ತಾರೆ. ನಂತರ ಸರಕುಗಳನ್ನು ಸಣ್ಣ ಹಡಗುಗಳಿಗೆ ರವಾನಿಸಲಾಗುತ್ತದೆ, ಅವುಗಳನ್ನು ಅದನ್ನು ಕೆಂಪು ಸಮುದ್ರದ ಮೂಲಕ ಸಿನೈ ಪರ್ವತದ ಸಾಂಟಾ ಕ್ಯಾತರಿನಾ ಎಂಬ ಜಾಗಕ್ಕೆ ಹತ್ತಿರವಿರುವ ತೂಜ್ [64] ಎಂಬ ಸ್ಥಳಕ್ಕೆ ಸಾಗಿಸುತ್ತವೆ. ಅಲ್ಲಿ ಮತ್ತೊಮ್ಮೆ ಸುಂಕ ಪಾವತಿ ಮಾಡಲಾಗುತ್ತದೆ. ಆ ಸ್ಥಳದಿಂದ ವ್ಯಾಪಾರಿಗಳು ಸಂಬಾರ ದ್ರವ್ಯಗಳನ್ನು ಒಂಟೆಗಳನ್ನು ಪ್ರತಿ ಒಂಟೆಗೆ 4 ಕ್ರುಜಾಡೋಗಳ ದರದಲ್ಲಿ ಬಾಡಿಗೆಗೆ ತೆಗೆದುಕೊಂಡು, ಅವುಗಳ ಮೇಲೆ ಹೇರಿಕೊಂಡು, ಕ್ವಾಯ್ರೊಗೆ [ಕೈರೋ] ಗೆ ಪ್ರಯಾಣ ಮುಂದುವರಿಸುತ್ತಾರೆ. ಇದು ಹತ್ತು ದಿನಗಳ ಪ್ರಯಾಣ. ಕ್ವಾಯ್ರೋದಲ್ಲಿ ಮತ್ತೆ ಸುಂಕ ಪಾವತಿಸಲಾಗುತ್ತದೆ. ಕೈರೋಗೆ ಹೋಗುವ ಈ ರಸ್ತೆಯಲ್ಲಿ ಆ ದೇಶದಲ್ಲಿ ವಾಸಿಸುವ ಬೆಡೂಯಿನ್ ಜನಾಂಗದ ಹಾಗೆಯೇ ಮತ್ತಿತರ ದರೋಡೆಕೋರರು ಇವರ ಸರಕುಗಳನ್ನು ದೋಚುತ್ತಾರೆ.

ಕೈರೋದಲ್ಲಿ ಸಂಬಾರ ದ್ರವ್ಯಗಳನ್ನು ನೈಲ್ ನದಿಯ ಮೂಲಕ ಸಾಗಿಸಲಾಗುತ್ತದೆ. ಇದು ಲೋವರ್ ಇಂಡಿಯಾದ ಪ್ರೆಸ್ಟರ್ ಜಾನ್ ಎಂಬ ಪ್ರದೇಶದಲ್ಲಿ ಹುಟ್ಟುತ್ತದೆ ಮತ್ತು ಈ ನದಿಯ ಮೂಲಕ ಎರಡು ದಿನಗಳವರೆಗೆ ದಕ್ಷಿಣಾಭಿಮುಖವಾಗಿ ಅವರು ರೋಕ್ಸೆಟ್ [ರೊಸೆಟ್ಟಾ] ಎಂಬ ಸ್ಥಳವನ್ನು ತಲುಪುತ್ತಾರೆ, ಅಲ್ಲಿ ಮತ್ತೊಮ್ಮೆ ಸುಂಕ ಪಾವತಿಸಬೇಕಾಗುತ್ತದೆ. ಅಲ್ಲಿ ಅವುಗಳನ್ನು ಮತ್ತೆ ಒಂಟೆಗಳ ಮೇಲೆ ಹೊರಿಸಿ, ಅಲ್ಲಿಂದ ಅಲೆಕ್ಸಾಂಡ್ರಿಯಾ ಎಂಬ ನಗರಕ್ಕೆ ಸಾಗಿಸಲಾಗುತ್ತದೆ. ಇದು ಒಂದು ಬಂದರು ನಗರವಾಗಿದ್ದು ಅಲ್ಲಿಗೆ ತಲುಪಲು ಒಂದು ದಿನ ಹಿಡಿಯುತ್ತದೆ. ಈ ನಗರಕ್ಕೆ ವೆನಿಸ್ ಮತ್ತು ಜಿನೋವಾದಿಂದ ಸಂಬಾರ ಪದಾರ್ಥಗಳನ್ನು ಅರಸಿಕೊಂಡು ಹಡಗುಗಳು ಬರುತ್ತವೆ. ಇದು ಇಲ್ಲಿನ ಗ್ರ್ಯಾಂಡ್ ಸುಲ್ತಾನನಿಗೆ ಸುಂಕದ ರೂಪದಲ್ಲಿ 600,000 ಕ್ರುಜಾಡೋಸ್[65] ನಷ್ಟು ಆದಾಯವನ್ನು ತರುತ್ತದೆ.

ಅದರಲ್ಲಿ ಅವನು ಸಿದಾದಿಮ್ [66] ಎಂಬ ರಾಜನಿಗೆ ವಾರ್ಷಿಕ 100,000 ಕ್ರುಜಾಡೋಗಳನ್ನು ಪ್ರೆಸ್ಟರ್ ಜಾನ್ ಮೇಲೆ ಯುದ್ಧ ಮಾಡಲು ಪಾವತಿಸುತ್ತಾನೆ. ಗ್ರ್ಯಾಂಡ್ ಸುಲ್ತಾನ್ ಎಂಬ ಬಿರುದನ್ನು ಹಣದಿಂದ ಖರೀದಿಸಲಾಗುತ್ತದೆ ಮತ್ತು ಇದು ತಂದೆಯಿಂದ ಮಗನಿಗೆ ತಲೆಮಾರಿನಿಂದ ತಲೆಮಾರಿಗೆ ಜನ್ಮದತ್ತವಾಗಿ ಬರುವುದಿಲ್ಲ.

[ಮರಳಿ ಮನೆಗೆ.] ನಾನು ಈಗ ಮರಳಿ ಮನೆ ಕಡೆ ಪಯಣದ ಬಗ್ಗೆ ಮಾತನಾಡುತ್ತೇನೆ.

ಗಾಳಿ ಕ್ಷೀಣವಾಗಿತ್ತು. ನಾವು ಕರಾವಳಿಯುದ್ದಕ್ಕೂ ಭೂಮಿ ಮತ್ತು ಸಮುದ್ರದ ಗಾಳಿಯ ಬೀಸುವಿಕೆಗೆ ಅನುಗುಣವಾಗಿ ದಿಕ್ಕು ಬದಲಾಯಿಸುತ್ತಾ ಕರಾವಳಿಯುದ್ದಕ್ಕೂ ಚಲಿಸಿದೆವು. ಗಾಳಿ ಬೀಸದೆ ಇದ್ದ ಸಂದರ್ಭದಲ್ಲಿ ಒಂದೆಡೆ ನಿಂತು ಕಾಯುತ್ತಿದ್ದೆವು.

---

[63] "ಗ್ರ್ಯಾಂಡ್ ಸುಲ್ತಾನ್" 14ನೇ ಶತಮಾನದಲ್ಲಿ ಈಜಿಪ್ಟನ್ನು ಆಳಿದ ಸರ್ಕ್ಯಾಸಿಯ ಮೂಲದ ಬುಡಕಟ್ಟು ಜನಾಂಗದಿಂದ ಬೆಳೆದು ಬಂದ ಮಾಮ್ಲುಕ್ ಸುಲ್ತಾನೇಟ್ ಗೆ ಸೇರಿದ ಸುಲ್ತಾನ.

[64] ಪ್ರೊ. ಕೋಪ್ಕೆ ಈ ಸ್ಥಳವನ್ನು ಸ್ವಲ್ಪ ಅವಸರದಿಂದ ಸೂಯೆಜ್‌ನೊಂದಿಗೆ ಗುರುತಿಸುತ್ತಾರೆ, ಆದರೆ ಇದು ಟೋರ್ ಆಗಿರಬೇಕು ಎಂದು M. F. ಡೆನಿಸ್ ಸೂಚಿಸುತ್ತಾರೆ.

[65] ಕ್ರುಜಾಡೊ ಸುಮಾರು 9 ಶಿಲ್ಲಿಂಗ್ 8 ಪೆನ್ಸ್ ಮೌಲ್ಯದ ಪೋರ್ಚುಗೀಸ್ ಚಿನ್ನದ ನಾಣ್ಯವಾಗಿತ್ತು. ಹಾಗಾಗಿ 600,000 ಕ್ರುಜಾಡೋಗಳ ಮೌಲ್ಯ £290,000 ನಷ್ಟಿತ್ತು.

[66] ಈ ಸಿದಾದಿಂ (ಅಫೊನ್ಸೊ ಡಿ ಅಲ್ಬುಕರ್ಕ್, ಅವರ ಟಿಪ್ಪಣಿಯಲ್ಲಿ (Hakluyt Society, 1875, i, p. 202) ಇದನ್ನು ಕದಾದಿಂ ಎಂದು ಕರೆಯಲಾಗಿದೆ) ಅನ್ನು ಹರಾರ್‌ನ ಸುಲ್ತಾನ್ ಮುಹಮ್ಮದ್ ಬೆನ್ ಅಜರ್ ಎಡ್-ದಿನ್ ಬೆನ್ ಅಲಿ ಬೆನ್ ಅಬು ಬೆಕ್ರ್ ಬೆನ್ ಸಾದ್ ಎಡ್ ದಿನ್ (Sultan Muhammed ben Azhar ed-din ben Ali ben Abu Bekr ben Sa'd ed din, of Harar) ಜೊತೆ ಗುರುತಿಸಬಹುದು. ಇವರು 1487–1520ರಲ್ಲಿ ಆಳ್ವಿಕೆ ನಡೆಸಿದರು (see Paulitschke, *Harar*, p. 506).

ಸೋಮವಾರ, ಸೆಪ್ಟೆಂಬರ್ 10 ರಂದು, ಮುಖ್ಯ ಕಫ್ತಾನ ನಮ್ಮ ಜೊತೆ ಬಂದಿದ್ದ ಒಬ್ಬ ಮುಸ್ಲಿಂ ವರ್ತಕನ ಕೈಯಲ್ಲಿ ಅರೇಬಿಕ್ ಭಾಷೆಯಲ್ಲಿ ಒಂದು ಪತ್ರ ಬರೆಸಿ,[67] ಅದನ್ನು ನಾವು ನಮ್ಮ ಜೊತೆ ಇರಿಸಿಕೊಂಡಿದ್ದ, ಒಂದು ಕಣ್ಣು ಕಳೆದುಕೊಂಡಿದ್ದ ವ್ಯಕ್ತಿಯೊಬ್ಬನ ಕೈಯಲ್ಲಿ ಕೊಟ್ಟು, ಅದನ್ನು ಕಾಮೋಲಿಂಗೆ ಕೊಡಲು ಹೇಳಿ, ಹಡಗಿನಿಂದ ಇಳಿಸಿ ಕಳುಹಿಸಿದೆವು. ನಾವು ಆತನನ್ನು ಇಳಿಸಿದ ದೇಶದ ಹೆಸರು ಕೋಂಪಿಯಾ[68] ಮತ್ತು ಅದರ ರಾಜನ ಹೆಸರು ಬಿಯಾಕೋಟ್ ಎಂದಾಗಿತ್ತು. ಅವನೂ ಕ್ಯಾಲಿಕಟ್ ನ ರಾಜನೂ ಪರಸ್ಪರ ಯುದ್ಧದಲ್ಲಿ ತೊಡಗಿಕೊಂಡಿದ್ದರು.

ಮರುದಿನ [ಸೆಪ್ಟೆಂಬರ್ 11], ನಾವು ಸಮುದ್ರದಲ್ಲಿ ತಂಗಿದ್ದಾಗ, ಕೆಲವು ದೋಣಿಗಳು ನಮ್ಮ ಹಡಗುಗಳ ಬಳಿಗೆ ಬಂದವು. ಅವುಗಳಲ್ಲಿ ಮೀನು ಮಾರಲು ಬಂದ ವ್ಯಾಪಾರಸ್ಥರು ಯಾವುದೇ ಭಯ ಇಲ್ಲದೆ ನಮ್ಮ ಹಡಗಿನೊಳಗೆ ಬಂದರು.

[ಸಂತ ಮಾರಿಯಾ ದ್ವೀಪಗಳು.] [69]

ಮೇಲ್ಕಾಣಿಸಿದ ತಿಂಗಳ 15ನೇ ಶನಿವಾರದಂದು, ತೀರದಿಂದ ಸುಮಾರು ಎರಡು ಲೀಗ್‌ಗಳಷ್ಟು ದೂರದಲ್ಲಿರುವ ಕೆಲವು ದ್ವೀಪಗಳನ್ನು ನಾವು ಸಮೀಪಿಸಿದೆವು. ಅಲ್ಲಿ ನಾವು ದೋಣಿಯೊಂದನ್ನು ಇಳಿಸಿ, ಅಲ್ಲಿನ ಒಂದು ದ್ವೀಪದಲ್ಲಿ ನಾವು ತಂದಿದ್ದ ಸ್ತಂಭವೊಂದನ್ನು ಸ್ಥಾಪಿಸಿ ಆ ದ್ವೀಪಕ್ಕೆ ಸಂತ ಮಾರಿಯಾ ಎಂದು ನಾಮಕರಣ ಮಾಡಿದೆವು. ನಮ್ಮ ರಾಜನು ಮೂರು ಸ್ತಂಭಗಳನ್ನು ಸ್ಥಾಪಿಸಿ, ಅವುಗಳಿಗೆ ಸಂತ. ರಫಾಯೆಲ್, ಸಂತ ಗ್ಯಾಬ್ರಿಯೆಲ್ ಮತ್ತು ಸಂತ ಮಾರಿಯಾ ಎಂದು ಹೆಸರಿಡಲು ಆದೇಶಿಸಿದ್ದನು. ನಾವು ಈ ಮೂರನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದೆವು. ಮೊದಲನೆಯದು ರಿಯೊ ಡಾಸ್ ಬಾನ್ಸ್ ಸಿನ್ಯೇಸ್ ನಲ್ಲಿ ಸ್ಥಾಪಿಸಿದ ಸಂತ ರಫಾಯೆಲ್ ಸ್ತಂಭ, ಎರಡನೆಯದು ಕ್ಯಾಲಿಕಟ್‌ನಲ್ಲಿ ಸ್ಥಾಪಿಸಿದ ಸಂತ ಗ್ಯಾಬ್ರಿಯೆಲ್ ನ ಸ್ತಂಭ ಮತ್ತು ಕೊನೆಯದಾಗಿ ಇದು, ಸಂತ ಮಾರಿಯಾ.

ಇಲ್ಲಿ ಕೂಡಾ ಮೀನು ಮಾರಿಕೊಂಡು ಹಲವು ದೋಣಿಗಳು ನಮ್ಮ ಬಳಿಗೆ ಬಂದವು, ನಮ್ಮ ಕಫ್ತಾನ ಅವರಿಗೆ ಶರ್ಟುಗಳನ್ನು ಕೊಟ್ಟು ಅವರನ್ನು ಸಂತೋಷಪಡಿಸಿದನು. ಆ ದ್ವೀಪದಲ್ಲಿ ನಾವು ಒಂದು ಸ್ತಂಭವನ್ನು ಸ್ಥಾಪಿಸಿದರೆ ಅವರು ಸಂತೋಷಪಡುತ್ತಾರೆಯೇ ಎಂದು ಅವರನ್ನು ಕೇಳಿದನು. ಅವರು ತಮಗೆ ನಿಜವಾಗಿಯೂ ತುಂಬಾ ಸಂತೋಷವಾಗುತ್ತದೆ

---

[67]ಕ್ಯಾಸ್ಟಾನ್ಹೆಡಾ (I, c. 25, p. 84) ಮಾನ್ಕೈಡ್ ಈ ಪತ್ರವನ್ನು ಬರೆದಿದ್ದಾರೆ ಎಂದು ಹೇಳುತ್ತಾರೆ, ಇದರಲ್ಲಿ ವಾಸ್ಕೋ ಡ ಗಾಮಾ ಮಲಬಾರಿಗಳನ್ನು ಒಯ್ದಿದ್ದಕ್ಕಾಗಿ ಕ್ಷಮೆಯಾಚಿಸಿದನು; ಇವರು ತಾವು ಈ ಭೂಭಾಗಗಳನ್ನು ಕಂಡುಹಿಡಿದುದಕ್ಕೆ ಸಾಕ್ಷಿಯಾಗಿ ಕರೆದಕೊಂಡು ಬಂದೆ ಎಂದು ಪತ್ರದಲ್ಲಿ ವಿವರಿಸುತ್ತಾರೆ: ಮತ್ತು ತನ್ನ ಒಬ್ಬ ವ್ಯಕ್ತಿ (ನಿರ್ವಾಹಕ)ಯನ್ನು ಅಲ್ಲಿ ಬಿಟ್ಟು ಬಂದಿರುತ್ತಿದ್ದೆ ಆದರೆ ಮುಸ್ಲಿಮರು ಎಲ್ಲಿ ಅವನನ್ನು ಕೊಂದುಬಿಡುತ್ತಾರೋ ಎಂಬ ಭಯದಿಂದ ಹಾಗೆ ಮಾಡಲಿಲ್ಲ ಎಂದು ಹೇಳುತ್ತಾನೆ. ಅಂತಿಮವಾಗಿ ನಮ್ಮ ನಡುವೆ ಪರಸ್ಪರ ಒಳಿತಿಗಾಗಿ ಸೌಹಾರ್ದ ಸಂಬಂಧ ಉಂಟಾಗಲಿ ಎಂಬುದು ನಮ್ಮ ಅಭಿಲಾಶೆ ಎಂದು ಹೇಳುತ್ತಾರೆ. ಈ ಪತ್ರದ ಆವೃತ್ತಿಯನ್ನು ಸಹ ನೀಡುವ ಗೋಯೆಸ್ (c. 43), ರಾಜನು ಅದನ್ನು ಓದಿ ತುಂಬಾ ಸಂತೋಷಪಟ್ಟನು ಮತ್ತು ಅದನ್ನು ತನ್ನ ಹೆಂಡತಿಯರು ಮತ್ತು ಅಪಹರಣಕ್ಕೊಳಗಾದವರ ಸಂಬಂಧಿಕರಿಗೂ ಓದಿ ಹೇಳಿದನು ಎಂದು ಹೇಳುತ್ತಾರೆ.

[68]ಬರ್ಟನ್ (ಕಮೋಸ್) ಕಾಂಪಿಯಾವನ್ನು ಕಣ್ಣನೂರು ಜೊತೆ ಗುರುತಿಸುತ್ತಾರೆ. ಇದು ಚೆರ್ಮಾನ್ ಪೆರುಮಾಳ್ ಸಾಮ್ರಾಜ್ಯದ ವಿಭಜನೆಯ ನಂತರ ಚಿರಕಲ್ ರಾಜರ ಸಾಮ್ರಾಜ್ಯದಲ್ಲಿ ಸೇರಿಸಲ್ಪಟ್ಟಿತು. 1502ರಲ್ಲಿ ವಾಸ್ಕೋ ಡ ಗಾಮಾ ಒಪ್ಪಂದ ಮಾಡಿಕೊಂಡ ರಾಜನನ್ನು ಕೋಲ್ಟೆರಿ ಎಂದು ಕರೆಯುತ್ತಿದ್ದರು ಎಂದು ನಮಗೆ ಜುವಾನ್ ಡಿ ಸೋಜಾ ಅವರ ದಾಖಲೆಗಳಿಂದ (*Documentos Arabicos*, p. 80) ತಿಳಿಯುತ್ತದೆ. ಕೊರೆಯಾ (Stanley's *Vasco da Gama*, p. 224) ತನ್ನ ಮೊದಲ ಸಮುದ್ರಯಾನದಲ್ಲಿ ವಾಸ್ಕೋ ಡ ಗಾಮಾ ಕಣ್ಣಾನ್ನೂರಿನ ರಾಜನೊಂದಿಗೆ ನಡೆಸಿದ ವ್ಯವಹಾರಗಳ ಸಾಂದರ್ಭಿಕ ವಿವರಣೆಯನ್ನು ಕೊಡುತ್ತಾರೆ. ಈ ಘಟನೆಗಳ ಬಗ್ಗೆ ಗೋಯೆಸ್ ಅಥವಾ ಬ್ಯಾರೋಸ್‌ಗೆ ಏನೂ ತಿಳಿದಿಲ್ಲ.

[69] ಇವು ನೇತ್ರಾಣಿ ಅಥವಾ ಪಾರಿವಾಳ ದ್ವೀಪಗಳು (Ilhas dos Pombos), ಅಕ್ಷಾಂಶ 14° 1´ N., ದಲ್ಲಿ ಇರುವ ಇವುಗಳಲ್ಲಿ ಅತ್ಯಂತ ದೊಡ್ಡದು ಸುಮಾರು ಅರ್ಧ ಮೈಲಿ ಉದ್ದ ಮತ್ತು 300 ಅಡಿ ಎತ್ತರ ಇದೆ.

ಏಕೆಂದರೆ, ಇದು ನಾವು ಕೂಡ ಅವರಂತೆಯೇ ಕ್ರಿಶ್ಚಿಯನ್ನರು ಎಂಬುದನ್ನು ದೃಢೀಕರಿಸುತ್ತದೆ ಎಂಬುದಾಗಿ ಹೇಳಿದರು. ಹಾಗಾಗಿ ಇಲ್ಲಿ ಬಹಳ ಸೌಹಾರ್ದತೆಯಿಂದ ಸ್ತಂಭವನ್ನು ಸ್ಥಾಪಿಸಲಾಯಿತು.

[ಅಂಜಿದಿವಾ, ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 5.][70]

ಅದೇ ರಾತ್ರಿ, ಭೂಮಿಯ ಕಡೆಯಿಂದ ಬೀಸುತ್ತಿದ್ದ ತಂಗಾಳಿಯ ಸಹಾಯದಿಂದ ಮತ್ತೆ ನಮ್ಮ ಯಾನವನ್ನು ಮುಂದುವರಿಸಿದೆವು. ಮುಂದಿನ ಗುರುವಾರ, ತಿಂಗಳ 20ನೇ ತಾರೀಖಿನಂದು[71], ನಾವು ಒಂದು ಗುಡ್ಡಗಾಡು ದೇಶಕ್ಕೆ ಬಂದೆವು. ಬಹಳ ಸುಂದರವಾದ ಮತ್ತು ಹಿತಕರವಾದ ಆ ಪ್ರದೇಶಕ್ಕೆ ಸಮೀಪದಲ್ಲಿ ಆರು ಸಣ್ಣ ದ್ವೀಪಗಳಿದ್ದವು.

ಅಲ್ಲಿ ನಾವು ಭೂಮಿಗೆ ಹತ್ತಿರವಾಗಿ ಲಂಗರು ಹಾಕಿ, ದೋಣಿಯೊಂದನ್ನು ಇಳಿಸಿದೆವು. ಗಾಳಿ ಪ್ರಶಸ್ತವಾಗಿದ್ದರೆ, ಕೊಲ್ಲಿಯ ಮೂಲಕ ನಮ್ಮ ಪ್ರಯಾಣ ಮುಂದುವರಿಸಿ ನಮ್ಮ ಗಮ್ಯಸ್ಥಾನವನ್ನು ತಲುಪಲು ನಮಗೆ ಅಗತ್ಯವಾದ ನೀರು ಮತ್ತು ಉರುವಲನ್ನು ಇಲ್ಲಿ ದಾಸ್ತಾನು ಮಾಡುವುದು ನಮ್ಮ ಉದ್ದೇಶವಾಗಿತ್ತು. ನಾವು ಅಲ್ಲಿ ಒಬ್ಬ ಯುವಕನನ್ನು ಭೇಟಿಯಾದೆವು, ಅವನು ನದಿಯ ದಡದಲ್ಲಿ ಎರಡು ಬೆಟ್ಟಗಳ ಮೂಲಕ ಹರಿದು ಬರುತ್ತಿರುವ ಅತ್ಯುತ್ಕೃಷ್ಟವಾದ ನೀರಿನ ಝರಿಯನ್ನು ತೋರಿಸಿದನು. ಮುಖ್ಯ ಕಫ್ತಾನ ಆತನಿಗೆ ಒಂದು ಟೋಪಿಯನ್ನು ನೀಡಿದನು ಮತ್ತು ಆತನ ಬಳಿ ಆತ ಮುಸ್ಲಿಮನೋ ಅಥವಾ ಕ್ರಿಶ್ಚಿಯನ್ನೋ ಎಂದು ಕೇಳಿದನು. ಆತ ತಾನು ಕ್ರಿಶ್ಚಿಯನ್ ಎಂದು ಹೇಳಿದನು ಮತ್ತು ನಾವೂ ಕೂಡ ಕ್ರಿಶ್ಚಿಯನ್ನರು ಎಂದು ಹೇಳಿದಾಗ ಅವನು ತುಂಬಾ ಸಂತೋಷಪಟ್ಟನು.

ಮರುದಿನ [ಸೆಪ್ಟೆಂಬರ್ 21]ರಂದು ಸೋರೆಕಾಯಿ, ಕುಂಬಳಕಾಯಿ, ಸೌತೆಕಾಯಿಗಳನ್ನು ಪೇರಿಸಿಕೊಂಡು, ಒಂದು ದೋಣಿಯಲ್ಲಿ ನಾಲ್ಕು ಜನರು ನಮ್ಮ ಬಳಿಗೆ ಬಂದರು. ಈ ದೇಶದಲ್ಲಿ ದಾಲ್ಚಿನ್ನಿ, ಶುಂಠಿ ಅಥವಾ ಇನ್ನಾವುದೇ ಸಂಬಾರ ದ್ರವ್ಯಗಳು ಸಿಗುತ್ತವೆಯೇ ಎಂದು ಮುಖ್ಯ ಕಫ್ತಾನ ಅವರನ್ನು ಕೇಳಿದನು. ಇಲ್ಲಿ ಸಾಕಷ್ಟು ದಾಲ್ಚಿನ್ನಿ ದೊರಕುತ್ತದೆ, ಇತರ ಯಾವುದೇ ಸಂಬಾರ ಪದಾರ್ಥ ಲಭ್ಯ ಇಲ್ಲ ಎಂದು ಅವರು ಹೇಳಿದರು, ತಕ್ಷಣ ಕಫ್ತಾನನು ಅವರೊಂದಿಗೆ ನಮ್ಮ ಇಬ್ಬರು ಸಹವರ್ತಿಗಳನ್ನು ಈ ಸಂಬಾರ ಪದಾರ್ಥಗಳ ಮಾದರಿಗಳನ್ನು ತರಲು ಮುಖ್ಯ ಭೂಮಿಗೆ ಕಳುಹಿಸಿದನು. ತುಂಬಾ ದಾಲ್ಚಿನ್ನಿ ಮರಗಳು ಬೆಳೆಯುತ್ತಿದ್ದ ಒಂದು ಕಾಡಿಗೆ ಅವರನ್ನು ಕರೆದೊಯ್ಯಲಾಯಿತು ಮತ್ತು ಅವರು ಎರಡು ದೊಡ್ಡ ಕೊಂಬೆಗಳನ್ನು, ಎಲೆ ಸಮೇತವಾಗಿ ಕತ್ತರಿಸಿ ತಂದರು. ನಾವು ನಮ್ಮ ದೋಣಿಗಳಲ್ಲಿ ನೀರು ತರಲು ಹೋದಾಗ, ಈ ರೆಂಬೆಗಳನ್ನು ಹಿಡಿದುಕೊಂಡು ಬರುತ್ತಿದ್ದ ಇವರಿಬ್ಬರು ನಮಗೆ ಎದುರು ಸಿಕ್ಕರು ಮತ್ತು ಅವರೊಂದಿಗೆ ಕಫ್ತಾನನಿಗಾಗಿ ಕೋಳಿಗಳು, ಹಸುವಿನ ಹಾಲು, ಸೋರೆಕಾಯಿ, ಸೌತೆಕಾಯಿಗಳನ್ನು ಹೊತ್ತುಕೊಂಡು ಸುಮಾರು ಇನ್ನಿಪ್ಪತ್ತು ಜನರು ಕೂಡ ಇದ್ದರು. ಅವರು ಕಫ್ತಾನನ ಬಳಿ,

---

[70] ಅಂಜಿದಿವಾ ಅಥವಾ "ಐದು ದ್ವೀಪಗಳು" 14° 45´ N. ಅಕ್ಷಾಂಶದಲ್ಲಿ ಕರಾವಳಿಗೆ ಹತ್ತಿರದಲ್ಲಿದ್ದು, ಗೋವಾದಿಂದ ದಕ್ಷಿಣಕ್ಕೆ ಸುಮಾರು 40 ಮೈಲುಗಳಷ್ಟು ದೂರದಲ್ಲಿವೆ. ಇವುಗಳಲ್ಲಿ ಅತಿ ದೊಡ್ಡದು ಒಂದು ಮೈಲಿ ದೂರ ಕೂಡ ಇಲ್ಲ. ಇದು ಸಮುದ್ರದಿಂದ ಜೋರಾಗಿ ಎದ್ದುಬಂದಂತೆ ಕಂಡರೂ ಅದರ ಉತ್ತರ ಭಾಗದಲ್ಲಿರುವ ಕಡಲತೀರವು ಹಡಗುಗಳು ಲಂಗರು ಹಾಕಲು ಅಗತ್ಯ ಸೌಕರ್ಯವನ್ನು ಹೊಂದಿದೆ. ಫ್ರಾನ್ಸಿಸ್ಕೊ ಡಿ ಅಲ್ಮೇಡಾ 1505 ರಲ್ಲಿ ಅಲ್ಲಿ ಕೋಟೆಯನ್ನು ನಿರ್ಮಿಸಿದರು. ಆದರೆ ಏಳು ತಿಂಗಳ ನಂತರ ಅದನ್ನು ಕೆಡವಲಾಯಿತು. ಈಗ ಅಸ್ತಿತ್ವದಲ್ಲಿರುವ ಕೋಟೆಗಳನ್ನು 1682ರಲ್ಲಿ ಫ್ರಾನ್ಸಿಸ್ಕೊ ಡಿ ಟಾವೊರಾ, ಕೊಂಡೆ ಡಿ ಅಲ್ವಾರ್ ಅವರ ಆದೇಶದ ಮೇರೆಗೆ ನಿರ್ಮಿಸಲಾಗಿದೆ. (See A. Lopez Mendes, *A India Portugueza*, ii, 1886, p. 209, with map.)

[71] ಲೇಖಕರು 19 ಎಂದು ಹೇಳುತ್ತಾರೆ, ಆದರೆ ಗುರುವಾರ 20ನೇ ತಾರೀಖಾಗಿತ್ತು.

ಅಲ್ಲಿಂದ ಸ್ವಲ್ಪ ದೂರದಲ್ಲಿ ಸಾಕಷ್ಟು ಒಣ ದಾಲ್ಚಿನ್ನಿ ಇರುವುದಾಗಿಯೂ, ಇವರಿಬ್ಬರನ್ನು ಅವರ ಜೊತೆ ಕಳುಹಿಸಿದರೆ, ಅವರಿಗೆ ಅದನ್ನು ತೋರಿಸುವುದಾಗಿಯೂ ಮತ್ತು ಅವರು ಅದರ ಮಾದರಿಗಳನ್ನು ತರಬಹುದೆಂದೂ ಹೇಳಿದರು.[72]

ನಾವು ನೀರನ್ನು ತೆಗೆದುಕೊಂಡು ಹಡಗುಗಳಿಗೆ ಮರಳಿದೆವು ಮತ್ತು ಈ ಜನರು ತಾವು ಮಾರನೆ ದಿನ ಹಸುಗಳು, ಹಂದಿಗಳು ಮತ್ತು ಕೋಳಿಗಳನ್ನು ಉಡುಗೊರೆಯಾಗಿ ತರುವುದಾಗಿ ಭರವಸೆ ನೀಡಿದರು.

ಮರುದಿನ ಮುಂಜಾನೆ [ಸೆಪ್ಟೆಂಬರ್ 22] ನಾವು ತೀರಕ್ಕೆ ಹತ್ತಿರವಾಗಿ, ಸುಮಾರು ಎರಡು ಲೀಗ್ ದೂರದಲ್ಲಿ ಎರಡು ಹಡಗುಗಳು ನಿಂತಿರುವುದನ್ನು ನೋಡಿದೆವು, ಆದರೆ ಅವುಗಳ ಬಗ್ಗೆ ಹೆಚ್ಚಿನ ಗಮನ ಕೊಡಲಿಲ್ಲ. ನದಿಗೆ ಹೋಗಿ ನೀರು ತರಲು ಸಾಧ್ಯವಾಗುವಂತೆ ಸಮುದ್ರದ ಉಬ್ಬರ ಇಳಿಯಲು ಕಾಯುತ್ತಾ, ಉರುವಲು ಕತ್ತರಿಸುತ್ತಿದ್ದೆವು. ಹಾಗೆ ಮಾಡುವಾಗ ಈ ಹಡಗುಗಳು ತಾನು ಅಂದುಕೊಂಡದ್ದಕ್ಕಿಂತಲೂ ದೊಡ್ಡದಾಗಿವೆ ಎಂದು ನಮ್ಮ ಕಥ್ತಾನನಿಗೆ ಅನ್ನಿಸಿತು. ಆದ್ದರಿಂದ ಅವನು ನಮಗೆ ಊಟ ಆದ ಕೂಡಲೆ, ದೋಣಿಗಿಳಿಯಲು ಹೇಳಿ, ಈ ಹಡಗುಗಳ ಬಳಿ ಹೋಗಿ ಅವುಗಳು ಮುಸ್ಲಿಂ ವರ್ತಕರಿಗೆ ಸೇರಿದವುಗಳೋ ಅಥವಾ ಕ್ರಿಶ್ಚಿಯನ್ನರಿಗೆ ಸೇರಿದವುಗಳೋ ಎಂದು ಕಂಡುಹಿಡಿಯಲು ಹೇಳಿದನು. ಅವನು ಹಡಗಿಗೆ ಹಿಂದಿರುಗಿದ ನಂತರ, ಅವನು ಒಬ್ಬ ನಾವಿಕನಿಗೆ ಹಡಗಿನ ಕೂವೆಯ ತುದಿಗೆ ಹೋಗಿ ದೂರದಲ್ಲಿ ಬೇರೆ ಯಾವುದಾದರೂ ಹಡಗುಗಳು ಕಾಣುತ್ತವೆಯೋ ಎಂದು ನೋಡಲು ಆದೇಶಿಸಿದನು. ಅವನು ಬಂದು ತೆರೆದ ಸಮುದ್ರದಲ್ಲಿ, ಸುಮಾರು ಆರು ಲೀಗ್‌ಗಳ ದೂರದಲ್ಲಿ ಎಂಟು ಹಡಗುಗಳು ತಂಗಿವೆ ಎಂದು ವರದಿ ಮಾಡಿದನು. ಇದನ್ನು ಕೇಳಿದ ಕಥ್ತಾನನು ತಕ್ಷಣವೇ ಈ ಹಡಗುಗಳನ್ನು ಮುಳುಗಿಸಲು ಆದೇಶಿಸಿದನು. ಅವರು ಗಾಳಿ ಬೀಸಲು ಆರಂಭವಾದ ಕೂಡಲೆ, ಚುಕ್ಕಾಣಿಯನ್ನು ವಿರುದ್ದ ದಿಕ್ಕಿನಲ್ಲಿ ತಿರುಗಿಸಿ, ಹಡಗಿನ ದಿಕ್ಕನ್ನು ಬದಲಾಯಿಸಿದರು. ಅವರು ನಮ್ಮ ಪಕ್ಕದಲ್ಲಿ ಸುಮಾರು ಒಂದೆರಡು ಲೀಗ್‌ಗಳ ದೂರದಲ್ಲಿ ಇದ್ದಾರೆ ಮತ್ತು ನಾವು ಅವರ ಕಣ್ಣಿಗೆ ಬೀಳಬಹುದು ಎಂದು ಅನ್ನಿಸಿದಾಗ ನಾವು ಅವರನ್ನು ಆಕ್ರಮಿಸಿದೆವು. ನಾವು ಬರುವುದನ್ನು ನೋಡಿ ಅವರು ತೀರದೆಡೆಗೆ ಚಲಿಸಿದರು. ಅವುಗಳಲ್ಲಿ ಒಂದು ಹಡಗಿನ ಚುಕ್ಕಾಣಿ ಮುರಿದು ಹೋಗಿದ್ದರಿಂದಾಗಿ, ಆ ಹಡಗಿನಲ್ಲಿದ್ದವರು ದೋಣಿಗಿಳಿದು ತಪ್ಪಿಸಿಕೊಂಡರು, ಅದನ್ನು ಅವರು ತೀರಕ್ಕೆ ಎಳೆದುಕೊಂಡು ಹೋಗಿ, ಸುರಕ್ಷಿತವಾಗಿ ತೀರ ತಲುಪಿದರು. ಆ ಹಡಗಿನ ಹತ್ತಿರವಿದ್ದ ನಾವು ತಕ್ಷಣ ಅದನ್ನು ಹತ್ತಿದೆವು, ಆದರೆ ಅದರಲ್ಲಿ ಆಹಾರ ಪದಾರ್ಥಗಳು, ತೆಂಗಿನಕಾಯಿಗಳು, ನಾಲ್ಕು ಜಾಡಿ ಬೆಲ್ಲ ಮತ್ತು ಆಯುಧಗಳು, ನಿಲುಭಾರಕ್ಕಾಗಿ ಬಳಸುವ ಮರಳು ಬಿಟ್ಟು ಬೇರೆ ಏನೂ ಕಂಡುಬರಲಿಲ್ಲ. ಇತರ ಏಳು ಹಡಗುಗಳು ಅಲ್ಲೇ ನಿಂತಿದ್ದವು ಮತ್ತು ನಾವು ನಮ್ಮ ದೋಣಿಗಳಿಂದ ಅವುಗಳ ಮೇಲೆ ಗುಂಡು ಹಾರಿಸಿದೆವು.

[72] ರಾಜನ ಪತ್ರದಿಂದ ನಮಗೆ ತಿಳಿಯುವಂತೆ ಈ ರೆಂಬೆ ಕೊಂಬೆಗಳು ಮತ್ತು ಎಲೆಗಳನ್ನು ಪೋರ್ಚುಗಲ್‌ಗೆ ಕೊಂಡೊಯ್ಯಲಾಯಿತು (ಅನುಬಂಧ A ನೋಡಿ). ಆದರೆ ಅವು ಖಂಡಿತವಾಗಿಯೂ ಉತ್ತಮವಾದ ದಾಲ್ಚಿನ್ನಿ ಮರಗಳದ್ದಾಗಿರಲಿಲ್ಲ, ಏಕೆಂದರೆ ಭಾರತದ ಆ ಭಾಗದಲ್ಲಿ ಕೇವಲ ಕೆಳಮಟ್ಟದ ಕ್ಯಾಸಿಯಾ ಮರಗಳು ಮಾತ್ರ ಕಂಡುಬರುತ್ತವೆ.

ಮರುದಿನ ಬೆಳಿಗ್ಗೆ [ಸೆಪ್ಟೆಂಬರ್ 23], ನಾವು ಲಂಗರು ಹಾಕಿ ನಿಂತಿದ್ದಾಗ, ಏಳು ಜನ ಒಂದು ದೋಣಿಯಲ್ಲಿ ಬಂದು, ಈ ಹಡಗುಗಳು ನಮ್ಮನ್ನು ಹುಡುಕಿಕೊಂಡು ಕ್ಯಾಲಿಕಟ್‌ನಿಂದ ಬಂದಿದ್ದಾಗಿಯೂ ಮತ್ತು ನಾವೇನಾದರೂ ಅವರಿಗೆ ಸೆರೆಸಿಕ್ಕಿದ್ದರೆ ಅವರು ನಮ್ಮನ್ನು ಸಾಯಿಸುತ್ತಿದ್ದರು ಎಂಬುದಾಗಿಯೂ ಹೇಳಿದರು.[73]

ಮರುದಿನ ಬೆಳಿಗ್ಗೆ, ಈ ಸ್ಥಳದಿಂದ ಹೊರಟು, ನಾವು ಮೊದಲು ಇದ್ದ ಸ್ಥಳದಿಂದ ಎರಡು ಫಿರಂಗಿ ಗುಂಡುಗಳು ತಲುಪುವಷ್ಟು ದೂರದಲ್ಲಿದ್ದ ಒಂದು ದ್ವೀಪಕ್ಕೆ ಸಮೀಪವಾಗಿ ಲಂಗರು ಹಾಕಿದೆವು. ಅಲ್ಲಿ ನೀರು ಸಿಗುತ್ತದೆ ಎಂದು ನಮಗೆ ಹೇಳಲಾಗಿತ್ತು.[74] ಮುಖ್ಯ ಕಫ್ತಾನ ತಕ್ಷಣವೇ ನಿಕೋಲೊ ಕೊಯೆಲ್ಹೋ ನನ್ನು ಸಶಸ್ತ್ರ ದೋಣಿಯಲ್ಲಿ ಈ ನೀರಿನ ಸ್ಥಳವನ್ನು ಹುಡುಕಲು ಕಳುಹಿಸಿದನು. ಅಲ್ಲಿ ಕೊಯೆಲ್ಹೋಗೆ ಮುಸ್ಲಿಮ್ ವ್ಯಾಪಾರಿಗಳು ನಾಶಪಡಿಸಿದ್ದ ಒಂದು ದೊಡ್ಡ ಕಲ್ಲಿನ ಚರ್ಚ್‌ನ ಅವಶೇಷಗಳು ಕಂಡವು. ಅಲ್ಲಿ ಒಣಹುಲ್ಲಿನ ಛಾವಣಿಯಿದ್ದ ಒಂದು ಸಣ್ಣ ಪ್ರಾರ್ಥನಾ ಮಂದಿರ ಮಾತ್ರ ಉಳಿದಿತ್ತು. ಇದನ್ನು ಆ ಪ್ರಾರ್ಥನಾ ಮಂದಿರದ ಮಧ್ಯದಲ್ಲಿ ಇರಿಸಿದ್ದ ಮೂರು ಕಪ್ಪು ಕಲ್ಲುಗಳಿಗೆ ಪೂಜೆ ಸಲ್ಲಿಸುತ್ತಿದ್ದ ಆ ದೇಶದ ಸ್ಥಳೀಯರು ನಮಗೆ ಹೇಳಿದರು.[75] ಈ ಚರ್ಚ್‌ನ ಪಕ್ಕದಲ್ಲಿ ಈ ಚರ್ಚ್ ಕಟ್ಟಿದ ರೀತಿಯಲ್ಲೇ, ಕೆತ್ತಿದ ಕಲ್ಲಿನಿಂದ ಕಟ್ಟಿದ ಒಂದು ನೀರಿನ ತೊಟ್ಟಿ ಇತ್ತು. ಅಲ್ಲಿಂದ ನಾವು ನಮಗೆ ಬೇಕಾದಷ್ಟು ನೀರನ್ನು ತೆಗೆದುಕೊಂಡೆವು. ಇನ್ನೊಂದು ದೊಡ್ಡ ಗಾತ್ರದ ಸುಮಾರು ನಾಲ್ಕು ಫ್ಯಾದಮ್ ಗಳಷ್ಟು ಆಳದ ತೊಟ್ಟಿ[ಬಾವಿ]ಯೊಂದು ಈ ದ್ವೀಪದ ಅತ್ಯಂತ ಉತ್ತರಕ್ಕೆ ಇತ್ತು. ಸಮುದ್ರತೀರದಲ್ಲಿ, ಚರ್ಚ್ ಗೆ ಎದುರಾಗಿ, ನಾವು ಬೆರಿಯೋ (ಬೆರಿಯೋ ಎಂಬ ಹೆಸರಿನ ಆಹಾರ ಸಾಮಗ್ರಿಗಳನ್ನು ಹೊತ್ತೊಯ್ಯಲು ಬಳಸುತ್ತಿದ್ದ ಸಣ್ಣ ಹಡಗು] ಮತ್ತು ನಮ್ಮ ಕಫ್ತಾನನ ಹಡಗುಗಳನ್ನು ನಿಲ್ಲಿಸಿ, ಅವುಗಳ ದುರಸ್ತಿ ಕಾರ್ಯ ಕೈಗೊಂಡೆವು. ಕೆಲವು ತೊಂದರೆಗಳು ಇದ್ದ ಕಾರಣಕ್ಕೆ ರಫಾಯೆಲ್ ಅನ್ನು ನಾವು ಕಡಲತೀರಕ್ಕೆ ಎಳೆಯಲು ಆಗಲಿಲ್ಲ. ಅದನ್ನು ಮುಂದಕ್ಕೆ ಮತ್ತಷ್ಟು ಉಲ್ಲೇಖಿಸಲಾಗುತ್ತದೆ.

ಕಡಲತೀರಕ್ಕೆ ಎಳೆದು ತಂದು ನಿಲ್ಲಿಸಿದ ಬೆರಿಯೊದಲ್ಲಿ ನಾವು ಒಂದು ದಿನ ಕಳೆಯುವಷ್ಟರಲ್ಲಿ ಜನರಿಂದ ಕಿಕ್ಕಿರಿದ ಎರಡು ದೊಡ್ಡ ದೋಣಿಗಳು (ಫುಸ್ತಾಸ್)[76] ನಮ್ಮನ್ನು ಸಮೀಪಿಸಿದವು. ಅವರು ಕೊಂಬು ಕಹಳೆಗಳನ್ನು ನುಡಿಸುತ್ತಾ, ಡೋಲು ಬಾರಿಸಿಕೊಂಡು ದೋಣಿ ಸಾಗಿಸುತ್ತಿದ್ದರು ಮತ್ತು ಆ ದೋಣಿಗಳ ಕೂವೆಯ ನೆತ್ತಿಯ ಮೇಲೆ ಧ್ವಜಗಳನ್ನು ಹಾರಿಸಿದ್ದರು. ಅವರ ರಕ್ಷಣೆಗಾಗಿ ಐದು ಇತರ ದೋಣಿಗಳು ಸಮುದ್ರದ ದಡದಲ್ಲಿ ಕಾವಲು ಕಾಯುತ್ತಿದ್ದವು. ಅವರು ಹತ್ತಿರ ಬಂದಾಗ ನಾವು ನಮ್ಮೊಂದಿಗೆ ಇದ್ದವರ ಬಳಿ ಅವರು ಯಾರೆಂದು ಕೇಳಿದೆವು. ಅವರು ದರೋಡೆಕೋರರು, ಅವರನ್ನು ಹಡಗಿಗೆ ಬರಲು ಬಿಡಬೇಡಿ, ಅವರು ಅವಕಾಶ ಸಿಕ್ಕರೆ ನಮ್ಮನ್ನು ಸೆರೆಹಿಡಿಯುತ್ತಾರೆ, ಎಂದು ಅವರು ಹೇಳಿದರು. ಈ ದೇಶದ ಜನರು ಶಸ್ತ್ರಾಸ್ತ್ರ ಸಜ್ಜಿತರಾಗಿರುತ್ತಾರೆ, ಸ್ನೇಹಿತರಂತೆ ಬಂದು ಹಡಗುಗಳನ್ನು ಹತ್ತುತ್ತಾರೆ, ಸಂದರ್ಭ ಸಿಕ್ಕಕೂಡಲೆ ಸೆರೆಹಿಡಿದುಬಿಡುತ್ತಾರೆ ಎಂದು ಅವರು ಹೇಳಿದರು. ಹಾಗಾಗಿ ನಾವು ಅವರು ನಮ್ಮ ಫಿರಂಗಿದಾಳಿಯ ವ್ಯಾಪ್ತಿಯೊಳಗೆ ಬಂದ ತಕ್ಷಣ ರಫಾಯೆಲ್ ಮತ್ತು ಮುಖ್ಯ ಕಫ್ತಾನನ ಹಡಗಿನಿಂದ ಅವರ ಮೇಲೆ ಗುಂಡು ಹಾರಿಸಿದೆವು. ಅವರು "ತಾಂಬರಂ" ತಾಂಬರಂ[77] ಎಂದು ಕೂಗಲು ಪ್ರಾರಂಭಿಸಿದರು,

---

[73]ಬ್ಯಾರೋಸ್ ಮತ್ತು ಗೋಯೆಸ್, ಈ ಹಡಗುಗಳ ನಾಯಕ ಟಿಮೋಯಾ ಎಂಬ ಕಡಲುಗಳ್ಳನಾಗಿದ್ದ ಮತ್ತು ಆತನ ಪ್ರಧಾನ ಕಚೇರಿ ಒನೋರ್‌ನಲ್ಲಿತ್ತು ಎಂದು ಹೇಳುತ್ತಾರೆ. ಅವನು ತರುವಾಯ ಪೋರ್ಚುಗೀಸರಿಗೆ ಅಮೂಲ್ಯವಾದ ಸೇವೆಗಳನ್ನು ಒದಗಿಸಿದನು. (ಸ್ಟಾನ್ಲಿಯ ವಾಸ್ಕೋ ಡ ಗಾಮಾ, ಪುಟ 244 ನೋಡಿ.)

[74] ಈ ದ್ವೀಪವು ಅಂಜಿದಿವಾದಲ್ಲಿ ಅತ್ಯಂತ ದೊಡ್ಡ ದ್ವೀಪವಾಗಿದೆ.

[75] ಮೂರು ಲಿಂಗಗಳು, ಸೃಷ್ಟಿಶಕ್ತಿಯ ಸಂಕೇತಗಳು?

[76] ಫಸ್ತಾ (*fusta)* ಎಂಬುದು ಮೇಲ್ಛಾವಣಿ ಇರದ ಹುಟ್ಟು ದೋಣಿಯಾಗಿದ್ದು, ಅದಕ್ಕೆ ಒಂದು ಹಾಯಿ ಇರುತ್ತದೆ. ವಿವರಣೆಗಾಗಿ Linschoten's *Itinerarium ofte Schip-vaert*, etc. ನೋಡಿ.

[77] ತಾಂಬರಂ, ಮಲಯಾಳಂನಲ್ಲಿ ಇದು ಕೇವಲ ಯಜಮಾನ ಎಂಬ ಅರ್ಥವನ್ನು ಮಾತ್ರ ಹೊಂದಿದೆ

ಅಂದರೆ ಕ್ರಿಶ್ಚಿಯನ್ನರು ಎಂದರ್ಥ, ಭಾರತದ ಕ್ರಿಶ್ಚಿಯನ್ನರು ದೇವರನ್ನು "ತಾಂಬರಂ" ಎಂದು ಕರೆಯುತ್ತಾರೆ. ನಾವು ಇದಕ್ಕೆ ಸೊಪ್ಪುಹಾಕುವುದಿಲ್ಲ ಎಂದು ಅವರಿಗೆ ಗೊತ್ತಾದಾಗ ಅವರು ಅಲ್ಲಿಂದ ತೀರದ ಕಡೆಗೆ ಕಾಲ್ಕಿತ್ತರು. ನಿಕೋಲೊ ಕೊಯೆಲ್ಹೋ ಅವರನ್ನು ಸ್ವಲ್ಪ ದೂರದವರೆಗೆ ಹಿಂಬಾಲಿಸಿದನು. ಆದರೆ ಮುಖ್ಯ ಕಫ್ತಾನ ಹಡಗಿನಿಂದ ಸಂಕೇತ ಧ್ವಜ ಹಾರಿಸಿ ಆತನನ್ನು ಹಿಂದೆ ಕರೆಸಿಕೊಂಡನು.

ಮರುದಿನ, ಕಫ್ತಾನ ಮತ್ತು ನಮ್ಮ ಅನೇಕ ಜನರು ಬೆರಿಯೊವನ್ನು ನೋಡಿಕೊಳ್ಳುತ್ತಿರುವಾಗ, ಎರಡು ಸಣ್ಣ ದೋಣಿಗಳು ಬಂದವು, ಅವುಗಳಲ್ಲಿ ಉತ್ತಮ ಉಡುಪುಗಳನ್ನು ಧರಿಸಿದ್ದ ಹನ್ನೆರಡು ಜನರಿದ್ದರು. ಅವರು ಕಫ್ತಾನನಿಗೆ ಉಡುಗೊರೆಯಾಗಿ ಕಬ್ಬಿನ ಕಟ್ಟು ತಂದರು. ಅವರು ಇಳಿದ ನಂತರ ನಮ್ಮ ಹಡಗುಗಳನ್ನು ನೋಡಲು ಅನುಮತಿ ಕೇಳಿದರು. ನಾಯಕನು ಅವರನ್ನು ಗೂಢಚಾರರೆಂದು ಭಾವಿಸಿದನು ಮತ್ತು ಕೋಪಗೊಂಡನು. ಅಷ್ಟರಲ್ಲಿ ಅಷ್ಟೇ ಜನರಿದ್ದ ಇನ್ನೆರಡು ದೋಣಿಗಳು ಕಾಣಿಸಿಕೊಂಡವು. ಆದರೆ ಮೊದಲು ಬಂದವರು, ಕಫ್ತಾನ ತಮ್ಮ ಕಡೆಗೆ ಒಲವು ತೋರದಿರುವುದನ್ನು ಕಂಡು, ಈ ಹೊಸಬರಿಗೆ ಇಳಿಯಬೇಡಿ, ಹಿಂತಿರುಗಿ ಎಂದು ಎಚ್ಚರಿಸಿದರು. ಅವರೂ ಕೂಡ ಕೂಡಲೆ ಮತ್ತೆ ದೋಣಿ ಏರಿ ಹಿಂದಿರುಗಿದರು.

ಮುಖ್ಯ ಕಫ್ತಾನ ಹಡಗನ್ನು ದುರಸ್ತಿ ಮಾಡುತ್ತಿರುವಾಗ ಅಲ್ಲಿಗೆ ವೆನಿಷಿಯನ್ ಭಾಷೆ ಚೆನ್ನಾಗಿ ಮಾತನಾಡುವ ಸುಮಾರು ನಲವತ್ತು ವರ್ಷ ವಯಸ್ಸಿನ ಒಬ್ಬ ವ್ಯಕ್ತಿ ಬಂದನು.[78] ಅವನು ಉತ್ಕೃಷ್ಟ ಹತ್ತಿಬಟ್ಟೆ (ಲಿನನ್) ಧರಿಸಿದ್ದನು, ಅವನ ತಲೆಯ ಮೇಲೆ ಒಳ್ಳೆಯ ಶಿರವಸ್ತ್ರವನ್ನು (ಟೌಕಾ)ವನ್ನು ಧರಿಸಿದ್ದನು ಮತ್ತು ಅವನ ಸೊಂಟಪಟ್ಟಿಯಿಂದ ಖಡ್ಗ ನೇತಾಡುತ್ತಿತ್ತು. ಅವನು ಬಂದಿಳಿದ ಕೂಡಲೆ ಮುಖ್ಯ ಕಫ್ತಾನ ಮತ್ತು ಮತ್ತು ಇತರ ಕಫ್ತಾನರನ್ನು ಆಲಂಗಿಸಿದನು ಮತ್ತು ತಾನು ಪಶ್ಚಿಮದಿಂದ ತನ್ನ ಎಳೆಹರೆಯದಲ್ಲಿಯೇ ಇಲ್ಲಿ ಬಂದು ನೆಲೆಸಿರುವ ಕ್ರಿಶ್ಚಿಯನ್ ಎಂದು ಹೇಳಿದನು. ಈಗ ಅವನು ಒಬ್ಬ ಮುಸ್ಲಿಂ ಯಜಮಾನ[79]ನ ಸೇವೆಯಲ್ಲಿರುವುದಾಗಿಯೂ ಮತ್ತು ಆತ 40,000ದಷ್ಟು ಕುದುರೆ ಸವಾರರನ್ನು ಒಟ್ಟುಗೂಡಿಸಬಲ್ಲವನೆಂದೂ ಮತ್ತು ಈಗ ತಾನು ಕೂಡ ಒಬ್ಬ ಮುಸ್ಲಿಮನಾಗಿರುವನೆಂದೂ, ಆದರೆ ಹೃದಯದಲ್ಲಿ ಇನ್ನೂ ಕ್ರಿಶ್ಚಿಯನ್ ಆಗಿ ಉಳಿದಿರವನೆಂದೂ ಹೇಳಿದನು. ಒಂದು ದಿನ ತನ್ನ ಯಜಮಾನನ ಮನೆಯಲ್ಲಿದ್ದಾಗ, ಕ್ಯಾಲಿಕಟ್‌ಗೆ ಯಾರೋ ಬಂದಿದ್ದಾರೆ, ಆದರೆ ಅವರ ಭಾಷೆ ಯಾರಿಗೂ ಅರ್ಥವಾಗುತ್ತಿಲ್ಲ, ಅವರು ಸಂಪೂರ್ಣ ಉಡುಗೆ ತೊಟ್ಟಿರುವವರೆಂದೂ ಮಾತಾಡಿಕೊಳ್ಳುತ್ತಿದ್ದು ಅವನ ಕಿವಿಗೆ ಬಿತ್ತೆಂದೂ, ಹಾಗೆ ಕೇಳಲ್ಪಟ್ಟಾಗ ಬಂದವರು ಬಹುಶಃ ಫ್ರಾಂಕ್ಸ್ ಆಗಿರಬೇಕು ಎಂದು ಅವನು ಅಂದುಕೊಂಡಿದ್ದಾಗಿಯೂ ಹೇಳಿದನು. ನಮ್ಮನ್ನು [ಯುರೋಪಿಯನ್ನರನ್ನು] ಈ ಭಾಗಗಳಲ್ಲಿ ಫ಼್ರಾಂಕ್ಸ್ ಎಂಬ ಹೆಸರಿನಿಂದ ಕರೆಯುತ್ತಾರೆ. ನಂತರ ಅವನು ತನ್ನ ಯಜಮಾನನ ಅನುಮತಿಯನ್ನು ಬೇಡಿಕೊಂಡನೆಂದೂ, ಯಜಮಾನನೇನಾದರೂ ನಿರಾಕರಿಸಿದರೆ ತಾನು ದುಃಖದಿಂದ ಸಾಯುವುದಾಗಿ ಹೇಳಿದನೆಂದೂ ಹೇಳಿದನು. ನಂತರ ಅವನ ಯಜಮಾನನು ನಾವು ಈ ದೇಶದಲ್ಲಿ ನಮಗೆ ಬೇಕಾದ ಸಾಮಾನುಗಳು ಸೇರಿದಂತೆ ಏನನನ್ನಾದರೂ ತೆಗೆದುಕೊಳ್ಳಲು ಹೇಳಿರುವುದಾಗಿಯೂ, ಅಷ್ಟೇ ಅಲ್ಲದೆ ನಾವೇನಾದರೂ ಇಲ್ಲಿ ಶಾಶ್ವತವಾಗಿ ಉಳಿಯಲು ಬಯಸಿದರೆ ಅದು ಅವನಿಗೆ ಹೆಚ್ಚಿನ ಸಂತೋಷವನ್ನು ನೀಡುತ್ತದೆ ಎಂದು ನಮಗೆ ಹೇಳಲು ಹೇಳಿದುದಾಗಿಯೂ ಹೇಳಿದನು. ಈ ಆಶ್ವಾಸನೆಗಾಗಿ ನಮ್ಮ ಕಫ್ತಾನನು ಅವನಿಗೆ ಹೃತ್ಪೂರ್ವಕವಾಗಿ ಧನ್ಯವಾದಗಳನ್ನು ಸಲ್ಲಿಸಿದನು. ಇದನ್ನು ವಿಶ್ವಾಸದಿಂದ ಮಾಡಲಾಗಿದೆ ಎಂಬುದು ಅವನ ನಂಬಿಕೆಯಾಗಿತ್ತು. ಇದಕ್ಕೆ ಪ್ರತಿಯಾಗಿ ನಮ್ಮ ಸಂದರ್ಶಕನು ತನಗೆ ಒಂದು ತುಂಡು ಚೀಸ್ ಕೊಡುವಂತೆ ಕೋರಿದನು, ಅದನ್ನು ಅವನು ಇಲ್ಲಿ ಎಲ್ಲವೂ ಚೆನ್ನಾಗಿ ನಡೆಯಿತು ಎಂಬ ಸಂಕೇತವಾಗಿ,

[78] ಈತ ಮುಂದಕ್ಕೆ ಗ್ಯಾಸ್ಪರ್ ಡ ಗಾಮಾ ಎಂದು ಪ್ರಸಿದ್ಧನಾದನು. ಅನುಬಂಧ ಇ ನೋಡಿ.

[79] ಸಬಯೋ ಅಥವಾ ಗೋವಾದ ಗವರ್ನರ್.

ತೀರದಲ್ಲಿ ಉಳಿದಿರುವ ತನ್ನ ಸಹಚರನಿಗೆ ತೆಗೆದುಕೊಂಡು ಹೋಗಲು ಬಯಸಿರುವುದಾಗಿ ಹೇಳಿದನು. ಕಥ್ತಾನನು ಅವನಿಗೆ ಚೀಸ್ ಮತ್ತು ಎರಡು ಮೃದುವಾದ ಬ್ರೆಡ್ ನೀಡಲು ಆದೇಶಿಸಿದನು. ಅವನು ದ್ವೀಪದಲ್ಲಿಯೇ ಅದು ಇದು ಮಾತನಾಡುತ್ತಾ, ಕೆಲವೊಮ್ಮೆ ತಾನು ಹಿಂದೆ ಹೇಳಿದುದನ್ನೇ ಮತ್ತೆ ಅಲ್ಲಗಳೆಯುತ್ತಾ ಬಹಳ ಹೊತ್ತು ಕಳೆದನು. ಈ ಮಧ್ಯೆ ಪೌಲೋ ದ ಗಾಮಾ, ಈ ಸಂದರ್ಶಕನೊಂದಿಗೆ ಬಂದ ಕ್ರಿಶ್ಚಿಯನ್ನರನ್ನು ಹುಡುಕಿ, ಈತ ಯಾರೆಂದು ಕೇಳಿದನು. ಅವರು ಅವನು ಒಬ್ಬ ಕಡಲುಗಳ್ಳನೆಂದೂ, ಅವನು ನಮ್ಮ ಮೇಲೆ ದಾಳಿ ಮಾಡಲು ಬಂದಿದ್ದಾನೆಂದೂ ಮತ್ತು ಹಲವು ಜನರಿಂದ ಕೂಡಿದ ಅವನ ಹಡಗುಗಳು ತೀರದಲ್ಲಿ ಕಾಯುತ್ತಿರುವುದಾಗಿಯೂ ಹೇಳಿದರು. ಇಷ್ಟು ತಿಳಿದು, ಉಳಿದುದನ್ನು ಊಹಿಸಿ, ನಾವು ಅವನನ್ನು ಸೆರೆಹಿಡಿದು, ಕಡಲತೀರದಲ್ಲಿ ನಿಲ್ಲಿಸಿದ ಹಡಗಿಗೆ ಅವನನ್ನು ಕರೆದೊಯ್ದು, ಅವನು ನಿಜವಾಗಿಯೂ ದರೋಡೆಕೋರನೇ ಅಥವಾ ಏನು, ಅವನು ನಮ್ಮಲ್ಲಿಗೆ ಬಂದ ಉದ್ದೇಶ ಏನು ಎಂದು ಅವನು ಹೇಳುವಂತೆ ಅವನನ್ನು ಚೆನ್ನಾಗಿ ಥಳಿಸಿದೆವು. ಈ ಇಡೀ ದೇಶದ ಮಂದಿಗೆ ನಮ್ಮ ಬಗ್ಗೆ ಸಂಶಯ ಇದೆ. ಹಲವಾರು ಶಸ್ತ್ರಸಜ್ಜಿತ ವ್ಯಕ್ತಿಗಳು ಸುತ್ತಲೂ ಅಡಗಿದ್ದಾರೆ. ಆದರೆ ಅವರು ಪ್ರಸ್ತುತ ನಮ್ಮ ಮೇಲೆ ದಾಳಿ ಮಾಡಲು ಪ್ರಯತ್ನಿಸುವುದಿಲ್ಲ. ಏಕೆಂದರೆ ನಮ್ಮನ್ನು ಹಿಂಬಾಲಿಸಲು ಶಸ್ತ್ರಸಜ್ಜಿತವಾದ ನಲವತ್ತು ಹಡಗುಗಳನ್ನು ನಿರೀಕ್ಷಿಸಲಾಗುತ್ತಿದೆ. ಅವರು ಯಾವಾಗ ನಮ್ಮ ಮೇಲೆ ದಾಳಿ ಮಾಡಲು ಸಿದ್ಧರಾಗುತ್ತಾರೆ ಎಂದು ತನಗೆ ತಿಳಿದಿಲ್ಲ ಎಂದು ಅವನು ಹೇಳಿದನು. ತನ್ನ ಬಗ್ಗೆ ತಾನು ಮೊದಲು ಹೇಳಿದ್ದನ್ನು ಬಿಟ್ಟರೆ ಬೇರೇನೂ ಹೇಳಲು ಇಲ್ಲ ಎಂದು ಅವನು ಹೇಳಿದನು. ನಂತರ ಅವನನ್ನು ಮೂರ್ನಾಲ್ಕು ಬಾರಿ "ಪ್ರಶ್ನೆ"[80] ಮಾಡಲಾಯಿತು, ಅವನು ಖಚಿತವಾಗಿ ಹೇಳದಿದ್ದರೂ, ಅವನು ಹಡಗುಗಳನ್ನು ನೋಡಲು ಮತ್ತು ನಾವು ಯಾವ ರೀತಿಯ ಜನರು, ಯಾವ ರೀತಿಯ ಶಸ್ತ್ರಾಸ್ತ್ರಗಳನ್ನು ಹೊಂದಿದ್ದೇವೆ ಎಂದು ನೋಡಲು ಬಂದಿದ್ದಾನೆಂದು ನಾವು ಅವನ ಹಾವಭಾವದಿಂದ ಅರ್ಥಮಾಡಿಕೊಂಡೆವು.

ತೀರದಿಂದ ಮಾರಾಟಕ್ಕೆ ತಂದ ಮೀನು, ಕುಂಬಳಕಾಯಿ, ಸೌತೆಕಾಯಿ ತಿನ್ನುತ್ತಾ ಈ ದ್ವೀಪದಲ್ಲಿ ನಾವು ಹನ್ನೆರಡು ದಿನ ಉಳಿದುಕೊಂಡೆವು. ಅಷ್ಟೇ ಅಲ್ಲದೆ ಅವರು ನಮಗೆ ದೋಣಿ ತುಂಬಾ ಎಲೆ ಸಮೇತ ದಾಲ್ಚಿನ್ನಿ ಮರದ ಹಸಿ ಕೊಂಬೆಗಳನ್ನು ತಂದರು. ನಮ್ಮ ಹಡಗುಗಳ ದುರಸ್ತಿ ಕೆಲಸ ಮುಗಿಸಿ, ನಮ್ಮ ಪ್ರಯಾಣಕ್ಕೆ ಬೇಕಾದಷ್ಟು ನೀರನ್ನು ಸಂಗ್ರಹಿಸಿ, ನಾವು ವಶಪಡಿಸಿಕೊಂಡ ಹಡಗನ್ನು ಒಡೆದು ಹಾಕಿದ ನಂತರ ನಾವು ಹೊರಡಲು ಸಿದ್ಧರಾದೆವು. ಇದು ನಡೆದದ್ದು ಶುಕ್ರವಾರ, ಅಕ್ಟೋಬರ್ 5 ರಂದು.[81]

ನಾವು ಸೆರೆಹಿಡಿದ ಹಡಗನ್ನು ಒಡೆಯುವ ಮೊದಲು, ಕಥ್ತಾನನು ನಮಗೆ ಅದನ್ನು 1000 ಫಣೊಗಳಿಗೆ ಮಾರುವ ಪ್ರಸ್ತಾಪ ಮಾಡಿದನು ಆದರೆ ಮುಖ್ಯ ಕಥ್ತಾನ ಅದು ಮಾರಾಟಕ್ಕಿಲ್ಲ ಎಂದು ಹೇಳಿದನು ಮತ್ತು ಅದು ಶತ್ರುಗಳಿಗೆ ಸೇರಿದ್ದರಿಂದ ಅದನ್ನು ಸುಡಲು ನಿರ್ಧರಿಸಿದರು.

ನಾವು ಸಮುದ್ರದಲ್ಲಿ ಸುಮಾರು ಇನ್ನೂರು ಲೀಗ್ ನಷ್ಟು ದೂರದಲ್ಲಿದ್ದಾಗ, ನಾವು ನಮ್ಮೊಂದಿಗೆ ಕರೆದೊಯ್ದ ಮುಸ್ಲಿಂ ವರ್ತಕನು ತಾನು ತನ್ನ ನಿಜ ಬಣ್ಣ ಇಷ್ಟು ಹೊತ್ತು ಮುಚ್ಚಿಟ್ಟದ್ದು ಸಾಕು ಎಂದು ತೀರ್ಮಾನಿಸಿದನು. ಅವನು ಆತನ ಯಜಮಾನನ ಮನೆಯಲ್ಲಿದ್ದಾಗ, ನಾವು ಸಮುದ್ರದಲ್ಲಿ ದಿಕ್ಕು ತಪ್ಪಿ ಅಲೆಯುತ್ತಿದ್ದೇವೆ, ನಮ್ಮ ದೇಶಕ್ಕೆ ಹೋಗುವುದು ಹೇಗೆ ಎಂಬುದು ನಮಗೆ

[80] ಮೂಲ ಹಸ್ತಪ್ರತಿಯಲ್ಲಿ "ಪರ್ಗುಂಟರ್" (perguntar) ಎಂಬ ಕ್ರಿಯಾಪದವನ್ನು ಬಳಸಲಾಗಿದೆ, ಅಂದರೆ ಪ್ರಶ್ನಿಸಲಾಯಿತು, ಎಂದು. ಆದರೆ ಬ್ಯಾರೋಸ್ ಹೇಳುವಂತೆ ಆತನನ್ನು ಹಿಂಸೆಗೆ ಒಳಪಡಿಸಲಾಗಿತ್ತು. ಹಾಗಾಗಿ ಅವನು ಅದಕ್ಕಿಂತ ಮೊದಲು ಅವರಿಗೆ ಅರ್ಥವಾಗುವಂತೆ ನಿರರ್ಗಳವಾಗಿ ಮಾತನಾಡಿದರೂ, ಆಮೇಲೆ "ಸನ್ನೆಗಳ" ಮೂಲಕ ತಾನು ಹೇಳಬೇಕಾದುದನ್ನು ಅರ್ಥಮಾಡಿಸುವ ಪ್ರಯತ್ನ ಮಾಡಿದ.

[81] ಸೆಪ್ಟೆಂಬರ್ 24 ರಿಂದ ಅಕ್ಟೋಬರ್ 5 ರವರೆಗೆ ಎರಡೂ ದಿನಗಳು ಸೇರಿ ಹನ್ನೆರಡು ದಿನಗಳು.

ತಿಳಿಯುತ್ತಿಲ್ಲ ಎಂದು ಮಾತನಾಡುತ್ತಿದ್ದುದ್ದನ್ನು ಕೇಳಿಸಿಕೊಂಡಿದ್ದಾಗಿಯೂ ಮತ್ತು ಅವರು ನಮ್ಮನ್ನು ಸೆರೆಹಿಡಿಯಲು ಅನೇಕ ಹಡಗುಗಳನ್ನು ಕಳುಹಿಸಿರುವುದಾಗಿಯೂ ಹೇಳಿದನು. ಅದರ ಜೊತೆಗೆ ನಾವು ಏನು ಮಾಡುತ್ತಿದ್ದೇವೆಂದು ತಿಳಿದುಕೊಳ್ಳಲು ಮತ್ತು ನಮ್ಮನ್ನು ಅವರ ದೇಶಕ್ಕೆ ಆಕರ್ಷಿಸಲು ಅವನ ಯಜಮಾನ ಅವನನ್ನು ಕಳುಹಿಸಿರುವುದು ನಿಜ ಎಂದೂ ಹೇಳಿದನು. ಏಕೆಂದರೆ ಯಾವನೇ ಖಾಸಗಿ ನೌಕಾಯಾನಿ ನಮ್ಮನ್ನು ಸೆರೆಹಿಡಿದರೆ, ಈತನ ಯಜಮಾನನಿಗೆ ಆ ಲೂಟಿಯಲ್ಲಿ ಯಾವುದೇ ಪಾಲು ಸಿಗುತ್ತಿರಲಿಲ್ಲ. ಹಾಗಾಗಿ ನಾವು ಹೇಗೂ ಅವನ ಸೀಮೆಯೊಳಗೆ ಇದ್ದಿದ್ದರಿಂದ ನಾವು ಸಂಪೂರ್ಣವಾಗಿ ಅವನ ಅಧೀನದಲ್ಲಿ ಇರಬೇಕೆಂಬುದು ಅವನ ಇರಾದೆ ಎಂದು ಹೇಳಿದನು. ಅಷ್ಟೇ ಅಲ್ಲದೆ ಅವನ ಯಜಮಾನ ಶೌರ್ಯವಂತನಾಗಿದ್ದು, ನೆರೆಯ ರಾಜರೊಂದಿಗಿನ ತನ್ನ ಯುದ್ಧಗಳಲ್ಲಿ ನಮ್ಮನ್ನು ಬಳಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಇಟ್ಟುಕೊಂಡಿದ್ದಾನೆ ಎಂದು ಅವನು ಹೇಳಿದನು. ಆದರೆ ಈ ಲೆಕ್ಕಾಚಾರವನ್ನು ಅವರು ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆಯೇ ಮಾಡಿದ್ದರು.

[ಅರೇಬಿಯನ್ ಸಮುದ್ರದಾದ್ಯಂತ ಪ್ರಯಾಣ.]

ಆಗಾಗ ಎದುರಾಗುವ ನಿಶ್ಚಲ ವಾತಾವರಣ ಮತ್ತು ಪ್ರತಿಕೂಲ ಗಾಳಿಯಿಂದಾಗಿ ಈ ಕೊಲ್ಲಿಯನ್ನು ದಾಟಲು ನಮಗೆ ಮೂರು ದಿನ ಕಡಿಮೆ ಮೂರು ತಿಂಗಳು ಬೇಕಾಯಿತು.[82] ನಮ್ಮ ಎಲ್ಲಾ ಜನರು ಒಸಡುಗಳ ಬೇನೆಗೆ ತುತ್ತಾದರು. ಅವರ ಒಸಡುಗಳು ಹಲ್ಲುಗಳ ಮೇಲೆ ಬೆಳೆಯತೊಡಗಿದವು. ಆದ್ದರಿಂದ ಅವರಿಗೆ ಊಟ ಮಾಡುವುದು ಕಷ್ಟವಾಗುತ್ತಿತ್ತು. ಅವರ ಕಾಲುಗಳು ಮತ್ತು ದೇಹದ ಇತರ ಭಾಗಗಳು ಊದಿಕೊಂಡವು ಮತ್ತು ಜನರು ಈ ಊತದ ಕಾರಣದಿಂದಾಗಿ, ಇತರ ಯಾವುದೇ ಕಾಯಿಲೆಯ ಲಕ್ಷಣಗಳಿಲ್ಲದೆಯೇ ಸಾಯತೊಡಗಿದರು. ನಮ್ಮ ಮೂವತ್ತು ಜನ ಇದೇ ರೀತಿಯಲ್ಲಿ ಈ ಹಿಂದೆ ಮರಣ ಹೊಂದಿದ್ದರು. ಇದೇ ಸಂಖ್ಯೆಯಲ್ಲಿ ಇದಕ್ಕಿಂತ ಹಿಂದೆಯೂ ಜನರು ಸತ್ತಿದ್ದರು. ನಮ್ಮ ಹಡಗುಗಳನ್ನು ಚಲಾಯಿಸಲು ಕೇವಲ ಏಳೆಂಟು ಮಂದಿಯಷ್ಟೆ ಉಳಿದಿದ್ದರು ಮತ್ತು ಇವರ ಪರಿಸ್ಥಿತಿ ಕೂಡ ಆಶಾದಾಯಕವಾಗಿರಲಿಲ್ಲ. ಇದೇ ಪರಿಸ್ಥಿತಿ ಇನ್ನೂ ಹದಿನೈದು ದಿನಗಳವರೆಗೆ ಮುಂದುವರಿದಿದ್ದರೆ, ಹಡಗುಗಳನ್ನು ಚಲಾಯಿಸಲು ಯಾರೂ ಉಳಿಯುತ್ತಿರಲಿಲ್ಲ ಎಂದು ನಾನು ಖಂಡಿತವಾಗಿ ಹೇಳಬಲ್ಲೆ. ಪರಿಸ್ಥಿತಿ ಎಷ್ಟು ಹದಗೆಟ್ಟು ಹೋಗಿತ್ತೆಂದರೆ ಎಲ್ಲಾ ಶಿಸ್ತು, ನಿಯಮಗಳ ಕಟ್ಟುಪಾಡುಗಳು ಮುರಿದುಹೋಗಿದ್ದವು. ಈ ಸಂಕಟದಲ್ಲಿ ನಾವು ನಮ್ಮ ಹಡಗುಗಳ ರಕ್ಷಕ ಸಂತರಿಗೆ ಮೊರೆಯಿಟ್ಟೆವು, ಹರಕೆ ಹೊತ್ತೆವು. ನಮ್ಮ ಕಥ್ತಾನರು ಸಭೆ ನಡೆಸಿ ಒಂದು ವೇಳೆ ನಮಗೆ ಅನುಕೂಲಕರವಾದ ಗಾಳಿಯು ಬೀಸಿದರೆ, ನಾವು ಹೊರಟಲ್ಲಿಗೆ, ಅಂದರೆ ಇಂಡಿಯಾಗೆ ಮರಳುವುದೇ ಸೂಕ್ತ ಎಂಬ ತೀರ್ಮಾನಕ್ಕೆ ಬಂದಿದ್ದರು.

ಆದರೆ ದೇವರ ದಯೆಯಿಂದ ಬೀಸಿದ ಪ್ರಶಸ್ತ ಗಾಳಿಯು ಆರು ದಿನಗಳಲ್ಲಿ ನಮ್ಮನ್ನು ಭೂಮಿ ಕಣ್ಣಿಗೆ ಬೀಳುವಷ್ಟು ದೂರಕ್ಕೆ ಕರೆದೊಯ್ಯಿತು. ಆ ಭೂಮಿ ಪೋರ್ಚುಗಲ್ ಏನೋ ಎಂಬಷ್ಟು ನಾವು ಸಂತೋಷಪಟ್ಟೆವು. ದೇವರ ದಯೆಯಿಂದ ಅಲ್ಲಿ ನಾವು ಹಿಂದೊಮ್ಮೆ ಚೇತರಿಸಿಕೊಂಡಂತೆ[83] ಮತ್ತೆ ಚೇತರಿಸಿಕೊಳ್ಳುವ ನಿರೀಕ್ಷೆ ಇಟ್ಟುಕೊಂಡೆವು.

ಇದು ನಡೆದದ್ದು ಜನವರಿ 2, 1499ರಂದು.[84] ನಾವು ಭೂಮಿಯ ಹತ್ತಿರ ಬಂದಾಗ ರಾತ್ರಿಯಾಗಿತ್ತು ಹಾಗಾಗಿ ನಾವು ಹಡಗನ್ನು ಅಲ್ಲೇ ನಿಲ್ಲಿಸಿಕೊಂಡು ರಾತ್ರಿ ಕಳೆದೆವು. ಬೆಳಿಗ್ಗೆ [ಜನವರಿ 3] ಭಗವಂತ ನಮ್ಮನ್ನು ಎಲ್ಲಿಗೆ ಕರೆದೊಯ್ದಿದ್ದಾನೆ ಎಂದು

---

[82] ಅಕ್ಟೋಬರ್ 5 ರಿಂದ ಜನವರಿ 2 ರವರೆಗೆ.

[83] ಮೊಂಬಾಸಾದಲ್ಲಿ.

[84] ಹಸ್ತಪ್ರತಿ "ಫೆಬ್ರವರಿ" ಎಂದು ಹೇಳುತ್ತದೆ. ಆದರೆ ಅದು ಖಂಡಿತಾ ತಪ್ಪು.

ಕಂಡುಹಿಡಿಯಲು ನಾವು ಕರಾವಳಿಯನ್ನು ಮರುಪರಿಶೀಲಿಸಿದೆವು, ಏಕೆಂದರೆ ನಕ್ಷೆ ನೋಡಿ ನಾವು ಎಲ್ಲಿದ್ದೇವೆ ಎಂದು ಹೇಳಲು ಹಡಗಿನಲ್ಲಿ ಯಾವುದೇ ಕಥ್ತಾನನಾಗಲಿ ಅಥವಾ ನಕ್ಷೆ ಓದಬಲ್ಲವರಾಗಲಿ ಇರಲಿಲ್ಲ. ನಮ್ಮ ಜೊತೆ ಇದ್ದ ಕೆಲವರು ನಾವು ಮೊಝಾಂಬಿಕ್‌ನ ಮುಖ್ಯ ಭೂಭಾಗದಿಂದ[85] ಸುಮಾರು 300 ಲೀಗ್‌ಗಳಷ್ಟು ದೂರದಲ್ಲಿರುವ ದ್ವೀಪ ತಲುಪಿರಬೇಕು ಎಂದು ಹೇಳಿದರು; ಇದನ್ನು ಅವರು ಹೇಳಲು ಕಾರಣ ಎಂದರೆ ನಾವು ಮೊಝಾಂಬಿಕ್‌ನಿಂದ ಕರೆತಂದ ಮುಸ್ಲಿಂ ವರ್ತಕನೊಬ್ಬನು ಈ ದ್ವೀಪಗಳು ತುಂಬಾ ಅನಾರೋಗ್ಯಕರವೆಂದೂ ಮತ್ತು ಇಲ್ಲಿನ ನಿವಾಸಿಗಳು ಕೂಡ ನಮ್ಮನ್ನು ಬಾಧಿಸಿರುವಂತಹ ಕಾಯಿಲೆಯಿಂದ ಬಳಲುತ್ತಿದ್ದಾರೆಂದೂ ಹೇಳಿದ್ದನು.

[ಮಗದೊಶು (Magadoxo)]

ನಾವು ಒಂದು ದೊಡ್ಡ ಪಟ್ಟಣದ ಬಳಿ ಇದ್ದೆವು. ಅಲ್ಲಿ ಹಲವು ಅಂತಸ್ತುಗಳ ಮನೆಗಳಿದ್ದವು.ಆ ಊರಿನ ಕೇಂದ್ರಭಾಗದಲ್ಲಿ ದೊಡ್ಡ ಅರಮನೆಗಳಿದ್ದು, ಅದರ ಸುತ್ತಲೂ ನಾಲ್ಕು ಗೋಪುರಗಳಿದ್ದವು. ಈ ಪಟ್ಟಣವು ಸಮುದ್ರಕ್ಕೆ ಮುಖ ಮಾಡಿತ್ತು. ಮುಸ್ಲಿಂ ವರ್ತಕರಿಗೆ ಸೇರಿದ ಈ ಪಟ್ಟಣವನ್ನು ಮಗದೊಶು[86] ಎಂದು ಕರೆಯುತ್ತಿದ್ದರು. ನಾವು ಅದರ ಹತ್ತಿರದಲ್ಲಿ ಸಾಗುತ್ತಿದ್ದಾಗ ಅನೇಕ ಫಿರಂಗಿ ಗುಂಡುಗಳನ್ನು ಸಿಡಿಸಿದೆವು,[87] ಮತ್ತು ಗಾಳಿ ಪ್ರಶಸ್ತವಾಗಿದ್ದು, ಕರಾವಳಿಯುದ್ದಕ್ಕೂ ಮುಂದುವರಿದೆವು. ಹಗಲಿನಲ್ಲಿ ಹೀಗೆಯೇ ಸಾಗುತ್ತಾ, ರಾತ್ರಿ ಸಮುದ್ರದಲ್ಲಿ ತಂಗಿದೆವು. ನಾವು ಹೋಗಲು ಬಯಸಿದ ಮಿಲಿಂಗ್ [ಮಲೀಂಡಿ] ಇಲ್ಲಿಂದ ಎಷ್ಟು ದೂರದಲ್ಲಿದೆ ಎಂದು ನಮಗೆ ತಿಳಿದಿರಲಿಲ್ಲ.

ಶನಿವಾರ, ತಿಂಗಳ 5 ನೇ ತಾರೀಖಿನಂದು, ಪ್ರತಿಕೂಲ ಗಾಳಿಯ ಕಾರಣಕ್ಕೆ ನಾವು ಒಂದೆಡೆ ತಂಗಿದ್ದಾಗ, ಗುಡುಗು ಸಹಿತ ಮಳೆ ಹೊಡೆದು, ನಮ್ಮ ರಫಾಯೆಲ್ ಹಡಗನ್ನು ಕಟ್ಟಿದ ಹಗ್ಗಗಳನ್ನು ಕಿತ್ತುಹಾಕಿತು. ನಾವು ಇವುಗಳನ್ನು ದುರಸ್ತಿ ಮಾಡುತ್ತಿದ್ದಾಗ ಒಬ್ಬ ಖಾಸಗಿ ನೌಕಾಯಾನಿ ಪಾಟೆ[88] ಎಂಬ ಪಟ್ಟಣದಿಂದ ಎಂಟು ದೋಣಿಗಳು ಮತ್ತು ಅನೇಕ ಜನರೊಂದಿಗೆ ನಮ್ಮನ್ನು ಸಮೀಪಿಸಿದ. ಆದರೆ ಅವನು ನಮ್ಮ ಫಿರಂಗಿದಾಳಿಯ ವ್ಯಾಪ್ತಿಗೆ ಬಂದ ತಕ್ಷಣ ನಾವು ಅವನ ಮೇಲೆ ಗುಂಡು ಹಾರಿಸಿದೆವು. ಅವನು ಓಡಿಹೋದನು. ಗಾಳಿ ಅನುಕೂಲಕರವಾಗಿಲ್ಲದ ಕಾರಣ ನಾವು ಅವನ ಬೆಂಬತ್ತಲು ಸಾಧ್ಯವಾಗಲಿಲ್ಲ.

ಸೋಮವಾರ, 7 [ಜನವರಿ]ರಂದು[89] ನಾವು ಮತ್ತೆ ಮಲೀಂಡಿಯಲ್ಲಿ ಲಂಗರು ಹಾಕಿದಾಗ, ಅಲ್ಲಿನ ರಾಜನು ಕೂಡಲೆ ತನ್ನ ಒಂದಷ್ಟು ಜನರನ್ನು ಒಂದು ದೋಣಿಯ ಮೂಲಕ ನಮ್ಮಲ್ಲಿಗೆ ಕಳುಹಿಸಿದನು. ಅವರು ರಾಜನ ಸಂದೇಶ ಪತ್ರ ಜೊತೆಗೆ ನಮ್ಮ ಮುಖ್ಯ ಕಥ್ತಾನನಿಗೆ ಉಡುಗೊರೆಯಾಗಿ ಕುರಿಗಳನ್ನು ತೆಗೆದುಕೊಂಡು ಬಂದು, ನಮಗೆ ಸ್ವಾಗತ ಕೋರಿದರು. ಅಲ್ಲಿಯ ರಾಜನು ತನ್ನ ಸಂದೇಶಪತ್ರದಲ್ಲಿ ಬಹಳ ದಿನಗಳಿಂದ ನಮ್ಮ ಬರುವಿಕೆಗಾಗಿ ಕಾಯುತ್ತಿದ್ದುದ್ದಾಗಿ ಹೇಳಿದ್ದನು ಮತ್ತು ಸೌಹಾರ್ದಯುತ ಭಾವನೆಗಳನ್ನು ವ್ಯಕ್ತಪಡಿಸಿದ್ದನು. ನಮ್ಮ ಮುಖ್ಯ ಕಥ್ತಾನ ಅದಕ್ಕೆ ಪ್ರತಿಯಾಗಿ ನಮ್ಮಲ್ಲೊಬ್ಬರನ್ನು ಈ ದೂತರೊಂದಿಗೆ ದಡಕ್ಕೆ ಕಳುಹಿಸಿ, ಹಡಗಿನಲ್ಲಿದ್ದ ರೋಗಿಗಳಿಗೆ ಅಗತ್ಯವಾಗಿ ಬೇಕಾಗಿದ್ದ ಕಿತ್ತಳೆ ಹಣ್ಣುಗಳನ್ನು ತರಲು

---

[85] ಮೊಜಾಂಬಿಕ್‌ನಿಂದ ಮಡಗಾಸ್ಕರ್‌ಗೆ ಕೇವಲ 60 ಲೀಗ್‌ಗಳು; 300 ಲೀಗ್‌ಗಳು ಪ್ರಯಾಣ ಮಾಡಿದರೆ ಹಡಗು ಸೀಶೆಲ್ಸ್‌ನಷ್ಟು ದೂರ ತಲುಪುವುದಿತ್ತು.

[86] ಅರಬ್ಬರ ಮುಖದಿಶೋ, ಸೋಮಾಲಿಗಳ ಮದಿಶಾ, ಅಕ್ಷಾಂಶ 5° N. ಈ ಪಟ್ಟಣವನ್ನು ಅರಬ್ಬರು 907ರಲ್ಲಿ ಬಹುಶಃ ಇನ್ನೂ ಹೆಚ್ಚು ಪುರಾತನವಾದ ನಗರ ಇದ್ದ ಜಾಗದಲ್ಲಿ ಕಟ್ಟಿದ್ದರು. ಇದು ಬಹುಶಃ ಹದಿನಾರನೇ ಶತಮಾನದಲ್ಲಿ ಅಬ್ಗಲ್ ಸೋಮಾಲ್ ನಿಂದ ಹೊರಹಾಕಲ್ಪಟ್ಟ ಎಲ್ ಮಡೋಘರ್ ರಾಜವಂಶಸ್ಥರ ಅಡಿಯಲ್ಲಿ ತನ್ನ ಸಮೃದ್ಧಿಯ ಉತ್ತುಂಗವನ್ನು ತಲುಪಿತು.

[87] ಕೇವಲ ಸಂತೋಷದ ಸಂಕೇತವಾಗಿಯೋ ಅಥವಾ ಅನಗತ್ಯವಾಗಿ ಅವರನ್ನು ಪ್ರಚೋದಿಸಲೋ ಎಂಬುದು ಸ್ಪಷ್ಟವಾಗಿಲ್ಲ.

[88] ಪಾಟೆ ದಕ್ಷಿಣ ಅಕ್ಷಾಂಶ 26° 5´ (26° 5´ S.)ನಲ್ಲಿರುವ ಒಂದು ದ್ವೀಪವಾಗಿದ್ದು, ಅದೇ ಹೆಸರಿನ ಪಟ್ಟಣವನ್ನು ಹೊಂದಿದೆ.

[89] ಲೇಖಕರು 9ನೇ ತಾರೀಖು ಎಂದು ಹೇಳುತ್ತಾರೆ, ಆದರೆ ಸೋಮವಾರ 7ನೇ ತಾರೀಖಾಗಿತ್ತು. 7 ನೇ ತಾರೀಖಿನಿಂದ 11ನೇ ತಾರೀಖಿನವರೆಗೆ ಐದು ದಿನಗಳು ವಾಸ್ತವ್ಯ ಹೂಡಲಾಗಿತ್ತು.

ಹೇಳಿದನು. ಕಿತ್ತಳೆ ಮತ್ತಿತರ ಹಣ್ಣುಗಳ ಜೊತೆ ಅವನು ಮಾರನೆ ದಿನ ಮರಳಿದನು. ಆದರೆ ನಮ್ಮ ರೋಗಿಗಳಿಗೆ ಇದರಿಂದ ಹೆಚ್ಚಿನ ಲಾಭವಾಗಲಿಲ್ಲ, ಏಕೆಂದರೆ ಹವಾಮಾನವು ಅವರ ಮೇಲೆ ಎಷ್ಟು ಪ್ರತಿಕೂಲ ಪರಿಣಾಮ ಬೀರಿತ್ತೆಂದರೆ ಅವರಲ್ಲಿ ಅನೇಕರು ಇಲ್ಲಿಯೇ ಅಸುನೀಗಿದರು. ಅಲ್ಲಿಯ ರಾಜನ ಆದೇಶದಂತೆ ಮುಸ್ಲಿಂ ವರ್ತಕರು ಸಹ ಕೋಳಿಗಳು ಮತ್ತು ಮೊಟ್ಟೆಗಳನ್ನು ಉಡುಗೊರೆಯಾಗಿ ತೆಗೆದುಕೊಂಡು ನಮ್ಮ ಹಡಗಿಗೆ ಬಂದರು.

ನಾವು ತುಂಬಾ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾಗ ನಮಗೆ ಇಷ್ಟು ಕಾಳಜಿ ತೋರಿಸಿದ್ದಕ್ಕೆ ಪ್ರತಿಯಾಗಿ ಕಫ್ತಾನನು ರಾಜನಿಗೆ ಉಡುಗೊರೆಯನ್ನು ಕಳುಹಿಸಿದನು ಮತ್ತು ಅರೇಬಿಕ್ ಮಾತನಾಡುವ ನಮ್ಮ ಸಹವರ್ತಿಯೊಬ್ಬನ ಮೂಲಕ ಸಂದೇಶವನ್ನು ಸಹ ಕಳುಹಿಸಿದನು. ಆ ಸಂದೇಶದಲ್ಲಿ ನಮ್ಮ [ಪೋರ್ಚುಗಲ್] ರಾಜನಿಗೆ ನೆನಪಿನ ಕಾಣಿಕೆಯಾಗಿ ನೀಡಲು ಒಂದು ಆನೆಯ ದಂತವನ್ನು ನೀಡಬೇಕೆಂದೂ, ಹಾಗೆಯೇ ನಮ್ಮ ಸ್ನೇಹದ ಸಂಕೇತವಾಗಿ ಇಲ್ಲಿ ಒಂದು ಸ್ತಂಭವನ್ನು ಸ್ಥಾಪಿಸಬೇಕೆಂದೂ ಕೇಳಿಕೊಂಡಿದ್ದನು.

ರಾಜನು ತಾನು ಪೋರ್ಚುಗಲ್ ನ ರಾಜನಿಗೆ ಅಗತ್ಯ ಸೇವೆ ಮಾಡಲು ಸಿದ್ಧನಿರುವುದಾಗಿಯೂ ಮತ್ತು ಆತನ ಮೇಲಿನ ಪ್ರೀತಿಯಿಂದ ನಾವು ಕೇಳಿದನ್ನು ಮಾಡಲು ಸಿದ್ಧನಿರುವುದಾಗಿಯೂ ಉತ್ತರಿಸಿದನು ಮತ್ತು ಆ ಕೂಡಲೆ ದಂತವನ್ನು ಕಪ್ತಾನನಿಗೆ ತಲುಪಿಸಲು ಮತ್ತು ಸ್ತಂಭವನ್ನು ಸ್ಥಾಪಿಸಲು ಆದೇಶಿಸಿದನು.[90]

ಅವನು ನಮ್ಮೊಂದಿಗೆ ಪೋರ್ಚುಗಲ್‌ಗೆ ಹೋಗಲು ಬಯಸಿದ ಒಬ್ಬ ಮುಸ್ಲಿಂ ಯುವಕನನ್ನು[91] ಸಹ ಕಳುಹಿಸಿದನು. ಆತನ ಬಗ್ಗೆ ಅವನು ಮುಖ್ಯ ಕಫ್ತಾನನಿಗೆ ಬಲವಾಗಿ ಶಿಫಾರಸು ಮಾಡಿದನು ಮತ್ತು ಪೋರ್ಚುಗಲ್‌ನ ರಾಜನ ಸ್ನೇಹವನ್ನು ತಾನು ಎಷ್ಟು ಬಯಸುತ್ತೇನೆಂದು ತಿಳಿಸುವ ಸಲುವಾಗಿ ಅವನನ್ನು ಕಳುಹಿಸಿದ್ದೇನೆ ಎಂದು ಹೇಳಿದನು.

ಇಲ್ಲಿಗೆ ತಲುಪುವ ಮೊದಲು ನಾವು ಸವೆಸಿದ ಹಾದಿಯಲ್ಲಿ ನಡೆದ ಸಾವಿನೊಂದಿಗೆ ನಮ್ಮ ಮುಖಾಮುಖಿಯಲ್ಲಿ ಅನುಭವಿಸಿದ ಕಷ್ಟಗಳಿಂದ ಬಿಡುಗಡೆ ಪಡೆದು, ಈ ಜಾಗದಲ್ಲಿ ಐದು ದಿನಗಳನ್ನು ನೆಮ್ಮದಿಯಿಂದ ಕಳೆದೆವು.

[ಮಲೀಂಡಿಯಿಂದ ಸಾವೊ ಬ್ರಾಜ್ ಗೆ.]

---

[90]"ವಾಸ್ಕೋ ಡ ಗಾಮಾನ ಸ್ತಂಭ", ಈಗ ಮಲೀಂಡಿಯಲ್ಲಿ ಪಟ್ಟಣಕ್ಕೆ ಹತ್ತಿರವಾಗಿ (ಸಮುದ್ರದಿಂದ ನೋಡಿದಾಗ ಎಡಭಾಗದಲ್ಲಿ), ಕೆಲವೇ ಅಡಿ ಎತ್ತರದ ಕಡಲುಬಂಡೆಯ ಮೇಲೆ ಇರುವ ಸ್ತಂಭವನ್ನು ಖಂಡಿತವಾಗಿಯೂ ಮಹಾನ್ ನೌಕಾಯಾನಿ ವಾಸ್ಕೋ ಡ ಗಾಮಾ ನಿರ್ಮಿಸಿದ ಸ್ಮಾರಕವಂತೂ ಅಲ್ಲವೇ ಅಲ್ಲ. ಆದರೆ ಇದನ್ನು ಬಹುಶಃ ಅದು ಮೊದಲು ಇದ್ದ ಜಾಗದಲ್ಲಿ ಮರುನಿರ್ಮಿಸಿರಬಹುದು. 1501 ರಲ್ಲಿ ಕಬ್ರಾಲ್ ಮಲೀಂಡಿಗೆ ಬಂದಾಗ ಆ ಸ್ತಂಭ ಇರಲಿಲ್ಲ; ಮೊಂಬಾಸಾದ ಜನರು ಅದನ್ನು "ಅವಮಾನದ ಕಲ್ಲು" ಎಂದು ಭಾವಿಸಿದ್ದರಿಂದಾಗಿ ಅದನ್ನು ತೆಗೆದುಹಾಕಿದ್ದರು. ಆದಾಗ್ಯೂ, ಅಲ್ಲಿನ ರಾಜನು ಅದನ್ನು ಜಾಗರೂಕತೆಯಿಂದ ಎತ್ತಿಟ್ಟಿದ್ದನು ಮತ್ತು ರಾಜ ಲಾಂಛನಕ್ಕೆ ಹೊಸದಾಗಿ ಬಣ್ಣ ಬಳಿಸಿದ್ದನು. ಗಾಮಾ ಜೊತೆಗಿದ್ದ ಜುವಾನ್ ಡಿ ಸಾ ಅದನ್ನು ಗುರುತಿಸಿದನು.

ನಾವು ಇಲ್ಲಿ ಕೊಟ್ಟಿರುವ ಚಿತ್ರದಲ್ಲಿರುವ ಸ್ತಂಭವನ್ನು ಹವಳದ ಶಿಲೆ ಮತ್ತು ಸುಣ್ಣದ ಮಿಶ್ರಣದಿಂದ ನಿರ್ಮಿಸಲಾಗಿದೆ. ಇದು 16 ಅಡಿ ಎತ್ತರವಿದ್ದು ಅದರ ಮೇಲೆ ಒಂದು ಶಿಲುಬೆಯನ್ನು ಸ್ಥಾಪಿಸಲಾಗಿದೆ. ಸ್ತಂಭದ ಸಮುದ್ರದ ಬದಿಯಲ್ಲಿ ಪೋರ್ಚುಗಲ್ ಲಾಂಛನವನ್ನು ಬಿಡಿಸಲಾಗಿದೆ, ಆದರೆ ಅದರ ಮೇಲೆ ಏನನ್ನೂ ಬರೆದಿಲ್ಲ. ಇದು ವಾಸ್ಕೋ ಡ ಗಾಮಾನ ಕೋರಿಕೆಯ ಮೇರೆಗೆ ಸ್ಥಾಪಿಸಲಾದ ಸ್ತಂಭವಲ್ಲ, ಆದರೆ ಅದರ ಮೇಲಿನ ಶಿಲುಬೆ ಬಹಳ ಪ್ರಾಚೀನವಾದುದು ಎಂದು ಸರ್ ಜಾನ್ ಕರ್ಕ್ ಖಚಿತವಾಗಿ ಹೇಳುತ್ತಾರೆ. ಎರಡನೆಯದು ಮರಳುಗಲ್ಲಿನಿಂದ, ಸ್ಪಷ್ಟವಾಗಿ ಸ್ಥಳೀಯವಾಗಿ ರಚಿಸಲಾಗಿರುವಂತಹುದು. ಇದುವರೆಗೆ ಇಲ್ಲಿ ದೊರೆತ ಇತರ ಶಿಲುಬೆಗಳು ಸುಣ್ಣದ ಕಲ್ಲು ಅಥವಾ ಅಮೃತಶಿಲೆಯಿಂದ ಮಾಡಲ್ಪಟ್ಟಿವೆ. ಪರಿಚಯವನ್ನು ನೋಡಿ.)

[91] ಈ ರಾಯಭಾರಿಯು 1501 ರಲ್ಲಿ ಕಬ್ರಾಲ್ ರೊಂದಿಗೆ ಹಿಂದಿರುಗಿದನು.

ನಾವು ಶುಕ್ರವಾರ [ಜನವರಿ 11] ಬೆಳಿಗ್ಗೆ ಹೊರಟೆವು ಮತ್ತು ತಿಂಗಳ 12 ನೇ ತಾರೀಖಿನಂದು ನಾವು ಮೊಂಬಾಸಾಕ್ಕೆ ಸಮೀಪವಾಗಿ ಹಾದುಹೋದೆವು. ಭಾನುವಾರ [ಜನವರಿ 13] ನಾವು ಬಾಯೋಸ್ ಡೆ ಸಾಂವ್ ರಫಾಯೆಲ್[92] (*Baixos de S. Raphael*)ನಲ್ಲಿ ಲಂಗರು ಹಾಕಿದೆವು. ಅಲ್ಲಿ ನಾವು ಇದೇ ಹೆಸರಿನ ನಮ್ಮ ಹಡಗಿಗೆ ಬೆಂಕಿ ಹಚ್ಚಿದೆವು, ಏಕೆಂದರೆ ನಮ್ಮಲ್ಲಿ ಉಳಿದಿರುವ ಕೆಲವೇ ಜನರಿಂದ ಮೂರು ಹಡಗುಗಳನ್ನು ಚಲಾಯಿಸುವುದು ಅಸಾಧ್ಯವಾಗಿತ್ತು. ಈ ಹಡಗಿನಲ್ಲಿದ್ದ ಸಾಮಾನುಗಳನ್ನು ಇತರ ಎರಡು ಹಡಗುಗಳಿಗೆ ವರ್ಗಾಯಿಸಲಾಯಿತು. ನಾವು ಇಲ್ಲಿ ಹದಿನೈದು ದಿನ ಇದ್ದೆವು,[93] ಮತ್ತು ನಮಗೆ ಅಭಿಮುಖವಾಗಿ ಇದ್ದ ತಮುಗೇಟ್[94] (Tamugate) ಎಂಬ ಪಟ್ಟಣದಿಂದ ಬಂದವರು ಕೋಳಿಗಳನ್ನು ಮಾರಾಟಕ್ಕಾಗಿ ಅಥವಾ ನಮ್ಮಲ್ಲಿದ್ದ ಶರ್ಟ್ ಗಳು ಮತ್ತು ಕಡಗಗಳ ವಿನಿಮಯಕ್ಕಾಗಿ ತಂದರು.

ಭಾನುವಾರ, 27 ರಂದು, ಪ್ರಶಸ್ತ ಗಾಳಿಯೊಂದಿಗೆ ನಾವು ಈ ಸ್ಥಳವನ್ನು ಬಿಟ್ಟು ಹೊರಟೆವು. ಮಾರನೆ ದಿನ ರಾತ್ರಿ ನಾವು ತಲುಪಿದ ಜಾಗದಲ್ಲೆ ವಿಶ್ರಾಂತಿ ತೆಗೆದುಕೊಂಡೆವು, ಮತ್ತು ಮಾರನೆ ದಿನ ಬೆಳಿಗ್ಗೆ [ಜನವರಿ 28] ನಾವು ಝಂಜೀಬಾರ್ ಎಂಬ ದೊಡ್ಡ ದ್ವೀಪವನ್ನು ತಲುಪಿದೆವು. ಮುಸ್ಲಿಂ ವರ್ತಕರ ಈ ದ್ವೀಪವು ಮುಖ್ಯ ಭೂಭಾಗದಿಂದ ಹತ್ತು ಲೀಗ್‌ಗಳ ದೂರದಲ್ಲಿದೆ.[95] ಫೆಬ್ರವರಿ 1ರ ದಿನದ ಕೊನೆಯಲ್ಲಿ, ನಾವು ಮೊಝಾಂಬಿಕ್ ಬಳಿಯ ಸಂತ ಜಾರ್ಜ್ ದ್ವೀಪದಲ್ಲಿ ಲಂಗರು ಹಾಕಿದೆವು. ಮರುದಿನ [ಫೆಬ್ರವರಿ 2] ಬೆಳಿಗ್ಗೆ, ನಾವು ಆ ದ್ವೀಪದಲ್ಲಿ ಒಂದು ಸ್ಥಂಭವನ್ನು ಸ್ಥಾಪಿಸಿದೆವು. ಅಲ್ಲಿಂದ ಹೊರಡುವ ಸಮಯದಲ್ಲಿ ನಾವು ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸಿದೆವು. ಶಿಲುಬೆಯನ್ನು ಸ್ಥಾಪಿಸಲು ಸೀಸವನ್ನು ಕರಗಿಸಬೇಕಾಗಿತ್ತು. ಆದರೆ ಜೋರು ಮಳೆಯ ಕಾರಣ ನಮಗೆ ಬೆಂಕಿಯನ್ನು ಹೊತ್ತಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ನಮಗೆ ಅಲ್ಲಿ ಶಿಲುಬೆಯನ್ನು ಸ್ಥಾಪಿಸಲು ಆಗಲಿಲ್ಲ. ನಂತರ ನಾವು ಹಡಗುಗಳಿಗೆ ಮರಳಿದೆವು.

ಮಾರ್ಚ್ 3ರಂದು ನಾವು ಆಂಗ್ರಾ ಡೆ ಸಾಂವ್ ಬ್ರಾಝ್ (Angra de São Braz) ತಲುಪಿದೆವು. ಅಲ್ಲಿ ನಾವು ಅನೇಕ ಮೀನುಗಳು, ಸೀಲ್‌ಗಳು ಮತ್ತು ಪೆಂಗ್ವಿನ್‌ಗಳನ್ನು ಹಿಡಿದು, ನಮ್ಮ ಪ್ರಯಾಣದ ಸಂದರ್ಭದಲ್ಲಿ ಬಳಸಲು ಉಪ್ಪು ಹಾಕಿ ಇಟ್ಟೆವು. 12ನೇ ತಾರೀಖಿನಂದು ನಾವು ಅಲ್ಲಿಂದ ಹೊರಟೆವು, ಆದರೆ ಬಂದರಿನಿಂದ ಹತ್ತು, ಹನ್ನೆರಡು ಲೀಗ್‌ಗಳಷ್ಟು ದೂರಹೋಗುವಷ್ಟರಲ್ಲಿ ಗಾಳಿಯು ಪಶ್ಚಿಮದಿಂದ ಬಲವಾಗಿ ಬೀಸಿತು, ಹಾಗಾಗಿ ನಾವು ಮತ್ತೆ ಈ ಕೊಲ್ಲಿಗೆ ಮರಳಬೇಕಾಯಿತು.

[ಸಾಂವ್ ಬ್ರಾಝ್ ನಿಂದ ರಿಯೊ ಗ್ರಾಂಡ್ ಕಡೆಗೆ]

ಮತ್ತೆ ಗಾಳಿ ಬೀಸಲು ಪ್ರಾರಂಭಿಸಿದಾಗ ನಾವು ನಮ್ಮ ಪ್ರಯಾಣವನ್ನು ಮತ್ತೆ ಶುರುಮಾಡಿದೆವು. ನಮಗೆ ಭಗವಂತ ಎಂತಹ ಒಳ್ಳೆಯ ಗಾಳಿಯನ್ನು ಕೊಟ್ಟನೆಂದರೆ, 20 ರಂದು ನಾವು ಕೇಪ್ ಆಫ್ ಗುಡ್ ಹೋಪ್ ಅನ್ನು ಯಶಸ್ವಿಯಾಗಿ ದಾಟಿಹೋಗಲು

---

[92]ಸಂತ ರಫಾಯೆಲ್ ಮೂರ್ತಿಯನ್ನು ವಾಸ್ಕೋ ಡ ಗಾಮಾ ತೆಗೆದುಕೊಂಡು ಹೋಗಿದ್ದನು ಮತ್ತು ಅವರ ಕುಟುಂಬವು ಅದನ್ನು ಕುಟುಂಬದ ಬಳುವಳಿ ಎಂದು ಪರಿಗಣಿಸಿತು. ಅವರ ಕುಟುಂಬದ ಹಲವಾರು ಸದಸ್ಯರು ಅದನ್ನು ತಮ್ಮ ಪ್ರಯಾಣದಲ್ಲಿ ಸಮಯದಲ್ಲಿ ಜೊತೆಗಿರಿಸಿಕೊಂಡಿದ್ದರು. ಇದನ್ನು ಅಂತಿಮವಾಗಿ ಡೋಮ್ ಫ್ರಾನ್ಸಿಸ್ಕೊ ಡ ಗಾಮಾ ಸ್ಥಾಪಿಸಿದ ವಿಡಿಗ್ವೇರಾ ಚರ್ಚ್‌ನಲ್ಲಿ ಸ್ಥಾಪಿಸಲಾಯಿತು. 1840ರಲ್ಲಿ ಈ ಚರ್ಚ್ ಮೇಲೆ ಆಕ್ರಮಣ ನಡೆಯುವ ಸಂದರ್ಭದಲ್ಲಿ ಅದನ್ನು ಸುರಕ್ಷಿತವಾಗಿ ಇನ್ನೊಂದು ಚರ್ಚ್‌ಗೆ ಸ್ಥಳಾಂತರಿಸಲಾಗಿತ್ತು. 1853ರಲ್ಲಿ ಟೆಕ್ಸೀರಾ ಡಿ ಅರಾಗ್ವೋ ಅದು ಅಲ್ಲಿ ಇರುವುದನ್ನು ಕಂಡುಹಿಡಿಯುತ್ತಾರೆ. ಇದು ಈಗ ಬೆಲೆಮ್‌ನಲ್ಲಿರುವ ಚರ್ಚ್‌ನಲ್ಲಿದೆ. ಈ ಮೂರ್ತಿಯನ್ನು ಓಕ್ ಮರದಿಂದ ಮಾಡಲಾಗಿದೆ ಮತ್ತು ಸುಮಾರು 24 ಇಂಚು ಎತ್ತರವಿದೆ (ಲಿಸ್ಬನ್ ಜಿಯಾಗ್ರಫಿಕಲ್ ಸೊಸೈಟಿಯ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾದ ಟೆಕ್ಸೀರಾ ಡಿ ಅರಾಗ್ವೋ ಲೇಖನ ನೋಡಿ, VI, 1886, ಪುಟ 621.)

[93] ಲೇಖಕರು ಐದು ದಿನ ಎಂದು ಹೇಳುತ್ತಾರೆ, ಆದರೆ ಜನವರಿ 13 ರಿಂದ ಜನವರಿ 27 ರವರೆಗೆ, ಎರಡೂ ದಿನಗಳು ಸೇರಿ ಹದಿನೈದು ದಿನಗಳು.

[94] ಬ್ಯಾರೋಸ್ *Tangata* ಎಂದು ಹೇಳುತ್ತಾರೆ. ಇದು Mtangata. (ಟಿಪ್ಪಣಿ ನೋಡಿ, ಪುಟ 33)

[95] ಜಂಜೀಬಾರ್ ಮುಖ್ಯ ಭೂಭಾಗದಿಂದ ಕೇವಲ ಇಪ್ಪತ್ತು ಮೈಲಿಗಳ (ಆರು ಲೀಗ್‌ಗಳು) ದೂರದಲ್ಲಿದೆ.

ಸಾಧ್ಯವಾಯಿತು. ಇಲ್ಲಿಯವರೆಗೆ ಬದುಕುಳಿದು ಬಂದವರು ಉತ್ತಮ ಆರೋಗ್ಯ ಮತ್ತು ಸಾಕಷ್ಟು ದೃಢತೆಯನ್ನು ಹೊಂದಿದ್ದರು, ಆದರೂ ಕೆಲವೊಮ್ಮೆ ಎದುರಾಗುತ್ತಿದ್ದ ಶೀತ ಗಾಳಿಯಿಂದ ಸತ್ತುಹೋಗುವ ಅನುಭವವಾಗುತ್ತಿತ್ತು. ಈ ಭಾವನೆಗೆ ಶೀತಕ್ಕಿಂತ ಹೆಚ್ಚಾಗಿ ನಾವು ದಾಟಿ ಬಂದ ದೇಶಗಳಲ್ಲಿ ನಾವು ಅನುಭವಿಸಿದ ಸೆಖೆಯೇ ಹೆಚ್ಚು ಕಾರಣ ಎಂದು ನಮಗನ್ನಿಸಿತು.

ಇನ್ನೇನು ಮನೆ ತಲುಪುತ್ತಿದ್ದೇವೆ ಎಂಬ ಅಪಾರ ಹುರುಪಿನಿಂದ ನಾವು ಪ್ರಯಾಣ ಮುಂದುವರಿಸಿದೆವು. ಇಪ್ಪತ್ತೇಳು ದಿನಗಳ ಕಾಲ[96] ನಮ್ಮ ಹಡಗಿನ ಹಿಂಭಾಗಕ್ಕೆ ಬಂದು ಹೊಡೆಯುತ್ತಿದ್ದ ಗಾಳಿಯು ನಮ್ಮ ಹಡಗನ್ನು ಸಾವೊ ಥಿಯಾಗೊ ಎಂಬ ದ್ವೀಪದ ಸಮೀಪಕ್ಕೆ ಒಯ್ಯಿತು. ನಮ್ಮ ನಕ್ಷೆಯ ಪ್ರಕಾರ ನಾವು ದ್ವೀಪಕ್ಕೆ ನೂರು ಲೀಗ್‌ಗಳ ಅಂತರದಲ್ಲಿ ಇದ್ದೆವು. ಆದರೆ ಇನ್ನು ಕೆಲವರು ಅದಕ್ಕಿಂತಲೂ ಹತ್ತಿರದಲ್ಲಿದ್ದೇವೆ ಎಂದು ಭಾವಿಸಿದರು. ಆದರೆ ಗಾಳಿ ಬೀಸುವುದು ನಿಂತಿತು,

ಹಾಗಾಗಿ ನಾವು ಅಲ್ಲೇ ಕಾಯಬೇಕಾಯಿತು. ಬೀಸುತ್ತಿದ್ದ ಸ್ವಲ್ಪ ಗಾಳಿ ಕೂಡ ಮುಂದಿನಿಂದ ಹೊಡೆಯುತ್ತಿತ್ತು. ಭೂಮಿಯ ಕಡೆಯಿಂದ ಬೀಸುತ್ತಿದ್ದ ಚಂಡಮಾರುತ[97]ಗಳಿಂದ ನಾವು ಎಲ್ಲಿದ್ದೇವೆ ಎಂದು ನಮಗೆ ಅಂದಾಜು ಮಾಡಲು ಸಾಧ್ಯವಾಯಿತು ಮತ್ತು ನಾವು ಸಾಧ್ಯವಾದಷ್ಟು ಗಾಳಿ ಬರುತ್ತಿದ್ದ ದಿಕ್ಕಿನೆಡೆಗೆ ಚಲಿಸಲು ಪ್ರಾರಂಭಿಸಿದೆವು.

ಏಪ್ರಿಲ್ 25 ರ ಗುರುವಾರ, ನಮಗೆ ನಮ್ಮ ಹಡಗು 35 ಫ್ಯಾದಮ್‌ಗಳಷ್ಟು ಆಳವನ್ನು ಮುಟ್ಟಿದೆ, ಅಂದರೆ ತೀರಕ್ಕೆ ಸಮೀಪವಾಗುತ್ತಿದೆ ಎಂದು ತಿಳಿಯಿತು. ಆ ದಿನವೆಲ್ಲಾ ನಾವು ಅದೇ ದಿಕ್ಕಿನಲ್ಲಿ ಮುಂದುವರಿದೆವು ಮತ್ತು ಕನಿಷ್ಠ 20 ಫ್ಯಾದಮ್‌ಗಳ ಆಳವನ್ನು ತಲುಪಿದೆವು. ಆದರೂ ಭೂಮಿ ನಮ್ಮ ಕಣ್ಣಿಗೆ ಬೀಳಲಿಲ್ಲ. ಆದರೆ ನಮ್ಮ ಕಥಾನ ನಾವು ರಿಯೊ ಗ್ರಾಂಡ್[98] ನ ತೀರಕ್ಕೆ ಸಮೀಪವಾಗಿ ಇದ್ದೇವೆ ಎಂದು ಹೇಳಿದನು.

[ಇಲ್ಲಿ ದಿನಚರಿ ಏಕಾಏಕಿ ಕೊನೆಗೊಳ್ಳುತ್ತದೆ. ಮುಂದಿನ ಘಟನೆಗಳನ್ನು ಚುಟುಕಾಗಿ ಹೇಳಬಹುದು. ವಾಸ್ಕೋ ಡ ಗಾಮಾ ಮತ್ತು ಕೊಯೆಲ್ಹೋ ಚಂಡಮಾರುತದಲ್ಲಿ ಬೇರ್ಪಟ್ಟರು ಎಂದು ರೆಸೆಂಡೆ ಹೇಳುತ್ತಾರೆ. ತನ್ನ ಸಮುದ್ರಯಾನವನ್ನು ಮುಂದುವರೆಸಿದ ಕೊಯೆಲ್ಹೋ ಜುಲೈ 10, 1499ರಂದು ಲಿಸ್ಬನ್‌ನ ದಕ್ಷಿಣಕ್ಕಿರುವ ಕಾಶ್ಕೇಶ್ (Cascaes)ಗೆ ತಲುಪುತ್ತಾನೆ. ತನ್ನ ಜೊತೆಗಾರನಿಗಾಗಿ ಒಂದು ದಿನ ಕಾದ ವಾಸ್ಕೋ ಡ ಗಾಮಾ ಸಾಂವ್ ಟಿಯಾಗೊ ದ್ವೀಪಕ್ಕೆ ತೆರಳುತ್ತಾನೆ. ಜುವಾನ್ ಡೆ ಸಾ (João de Sá)ಗೆ ಸಂತ ಗ್ಯಾಬ್ರಿಯೆಲ್ ಹಡಗಿನ ಉಸ್ತುವಾರಿ ವಹಿಸಿ, ಒಂದು ಸಣ್ಣ ಹಡಗು ತೆಗೆದುಕೊಂಡು ಅದರಲ್ಲಿ ತನ್ನ ಮರಣಶಯ್ಯೆಯಲ್ಲಿದ್ದ ಸಹೋದರ ಪೌಲೊನನ್ನು ಟೆರ್ಸಿರಾ ದ್ವೀಪಕ್ಕೆ ಕಳುಹಿಸುತ್ತಾನೆ. ಕೊಯೆಲ್ಹೋ ತಲುಪಿದ ಸ್ವಲ್ಪ ದಿನದಲ್ಲೇ ಜುವಾನ್ ಡೆ ಸಾ ಕೂಡ ತಲುಪುತ್ತಾನೆ. ಇದು ಖಂಡಿತವಾಗಿ ಆಗಸ್ಟ್ 28 ಕ್ಕೆ ಮುಂಚಿತವಾಗಿಯೇ ನಡೆದಿದೆ, ಏಕೆಂದರೆ ಆ ದಿನ ರಾಜನು ಪೋರ್ಚುಗಲ್‌ನ ಪ್ರಧಾನ ಧರ್ಮಪಾಲಕರಿಗೆ(Cardinal Protector)ಗೆ ಪತ್ರವನ್ನು ಬರೆದಿರುತ್ತಾನೆ (ಅನುಬಂಧ ನೋಡಿ). ಪೌಲೊ ಟೆರ್ಸಿಯಾದ ಆಂಗ್ರಾಕ್ಕೆ ಬಂದಿಳಿದ ಒಂದು ದಿನದ ನಂತರ ಮರಣಹೊಂದುತ್ತಾನೆ ಮತ್ತು ಅವನನ್ನು ಸಂತ ಫ್ರಾನ್ಸಿಸರ ಮಠದ ಚರ್ಚ್‌ನಲ್ಲಿ ಸಮಾಧಿ ಮಾಡಲಾಗುತ್ತದೆ.[99] ಟೆರ್ಸೆರಾದ ನಿವಾಸಿ ಆರ್ಥರ್ ರೊಡ್ರಿಗಸ್, ವಾಸ್ಕೋ ಡಾ

[96] ಮಾರ್ಚ್ 20 ರಿಂದ ಏಪ್ರಿಲ್ 16 ರವರೆಗೆ ಇಪ್ಪತ್ತೇಳು ದಿನಗಳು.

[97] ಲೇಖಕರು ಇಲ್ಲಿ ಸ್ಪಷ್ಟವಾಗಿ ಆಫ್ರಿಕಾದ ಪಶ್ಚಿಮ ಕರಾವಳಿಗೆ ವಿಶಿಷ್ಟವಾಗಿರುವಂತಹ ಮಳೆಗಾಲದ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಹೆಚ್ಚಾಗಿ ಬೀಸುವ ಚಂಡಮಾರುತಗಳನ್ನು ಅಥವಾ ಬಿರುಗಾಳಿಯನ್ನು ಉಲ್ಲೇಖಿಸುತ್ತಿದ್ದಾರೆ. ಇವು ಸಾಮಾನ್ಯವಾಗಿ ಭೂಮಿಯಿಂದ ಸಮುದ್ರದ ಕಡೆಗೆ ಬೀಸುತ್ತವೆ, ನಿರಂತರವಾಗಿ ಮಿಂಚು, ಗುಡುಗಿನೊಂದಿಗೆ ಕಮಾನು ಕಟ್ಟಿದ ರೂಪದಲ್ಲಿ ಮೋಡಗಳು ಮೇಲೇರಿ ಬರುತ್ತಿದ್ದಂತೆ ಈ ಚಂಡಮಾರುತದ ಸೂಚನೆ ದೊರಕುತ್ತದೆ. ಸಿಯೆರಾ ಲಿಯೋನ್‌ನಲ್ಲಿ ಮಳೆಗಾಲವು ಏಪ್ರಿಲ್ ಅಂತ್ಯದಲ್ಲಿ ಪ್ರಾರಂಭವಾಗುತ್ತದೆ (ಆಫ್ರಿಕಾ ಪೈಲಟ್, 1893, ಭಾಗ II, ಪುಟ 10 ನೋಡಿ).

[98] ಪೋರ್ಚುಗೀಸ್‌ನ ರಿಯೊ ಗ್ರಾಂಡೆ ಐದರಿಂದ ಹದಿಮೂರು ಮೈಲುಗಳಷ್ಟು ಅಗಲದ ಸಮುದ್ರದ ಚಾಚು. ಇದನ್ನು ನೌಕಾ ನಕ್ಷೆಯಲ್ಲಿ ಒರಾಂಗೊ ಚಾನಲ್ ಎಂದು ಕರೆಯಲಾಗುತ್ತದೆ. ಇದು ಮುಖ್ಯ ಭೂಭಾಗ ಮತ್ತು ಬಿಸ್ಸಾಗೋಸ್ ದ್ವೀಪಗಳ ನಡುವೆ ಇದೆ.

[99] ಈ ಚರ್ಚ್ ಅನ್ನು 1646 ರಲ್ಲಿ ಕೆಡವಲಾಗಿತ್ತು. ಹಾಗಾಗಿ ಇಲ್ಲಿದ್ದ ಸಮಾಧಿ ಸ್ಥಳ ಗುರುತಿಸಲು ಸಾಧ್ಯವಿಲ್ಲದಂತೆ ನಾಶವಾಗಿದೆ.

ಗಾಮಾ ಟೆರ್ಸಿರಾ ತಲುಪಿದ ಸುದ್ದಿಯನ್ನು ಲಿಸ್ಬನ್ ಗೆ ತಲುಪಿಸಲು ತಕ್ಷಣವೇ ಒಂದು ಸಣ್ಣ ಹಡಗಿನಲ್ಲಿ ಪ್ರಯಾಣ ಹೊರಡುತ್ತಾನೆ.

ವಾಸ್ಕೋ ಡ ಗಾಮಾ ಲಿಸ್ಬನ್‌ಗೆ ಹಿಂದಿರುಗಿದ ದಿನಾಂಕವು ಖಚಿತವಾಗಿ ತಿಳಿದಿಲ್ಲ. 1871 ರಲ್ಲಿ ವಾಸ್ಕೋ ಡ ಗಾಮನ ಅವಶೇಷಗಳನ್ನು ವಿಡಿಗ್ವೇರಾ ಚರ್ಚ್‌ನಿಂದ ಬೆಲೆಮ್‌ಗೆ ಸ್ಥಳಾಂತರಿಸಲು ನಿಯೋಜಿಸಿದ ಆಯೋಗವು ಆತನ ಹಿಂದಿರುಗುವಿಕೆಯ ದಿನಾಂಕವನ್ನು ನಿಖರವಾಗಿ ಖಚಿತಪಡಿಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಮಾಡಿತು, ಆದರೆ ಅದು ಸಫಲವಾಗಲಿಲ್ಲ; ಬ್ಯಾರೋಸ್, ಗೋಯೆಸ್ ಮತ್ತು ಪೆರೊ ಬರೆಟ್ಟೊ ಡಿ ರೆಸೆಂಡೆ ಅವರು ಅದನ್ನು ಆಗಸ್ಟ್ 29 ಎಂದು ಹೇಳಿದರೆ, ಕ್ಯಾಸ್ಟಾನ್ಹೆಡಾ (Castanheda) ಅದನ್ನು ಸೆಪ್ಟೆಂಬರ್ 8 ಎಂದು ಹೇಳುತ್ತಾರೆ ಮತ್ತು ಟೆಶೈರಾ ಡೆ ಅರಗ್ವೋ (Texeira de Aragão)ಗೆ ಪೋರ್ಚುಗಲ್ಲಿನ ದಾಖಲೆಗಳ ಸಂಗ್ರಹಾಲಯವಾದ ಟೊರ್ರೆ ಡೊ ಟೊಂಬೊ(Torre do Tombo)ದಲ್ಲಿ ಲಭಿಸಿದ ಹಸ್ತಪ್ರತಿಯ ಪ್ರಕಾರ ಅದು ಸೆಪ್ಟೆಂಬರ್ 18 ಆಗಿದೆ. ಹರ್ಕ್ಯುಲ್ಯಾನೊ, ವಾಸ್ಕೋ ಡಾ ಗಾಮಾನ ಪ್ರವಾಸ ಕಥನ "ರೊಟೈರೊ"(Roteiro)ದ ಎರಡನೇ ಆವೃತ್ತಿಗೆ ಬರೆದ ಟಿಪ್ಪಣಿಯಲ್ಲಿ, ಆಗಸ್ಟ್ ಅಂತ್ಯದಲ್ಲಿ ಅಥವಾ ಸೆಪ್ಟೆಂಬರ್ ಆರಂಭದಲ್ಲಿ ಎಂದಷ್ಟೆ ಹೇಳುವುದರಲ್ಲಿ ತೃಪ್ತರಾಗುತ್ತಾರೆ. ಟೆಶೈರಾ ಡೆ ಅರಗ್ವೋ (ಡಿ ಬ್ಯಾರೋಸ್ ಮಾಡುವ ಅಸ್ಪಷ್ಟ ಉಲ್ಲೇಖದ ಆಧಾರದ ಮೇಲೆ), ವಾಸ್ಕೋ ಡಾ ಗಾಮ ಆಗಸ್ಟ್ 29 ರಂದು ಟೆರ್ಸಿರಾವನ್ನು ತಲುಪಿದನು, ಸೆಪ್ಟೆಂಬರ್ 9ರಂದು ಲಿಸ್ಬನ್‌ಗೆ ಆಗಮಿಸಿದನು ಮತ್ತು ಸೆಪ್ಟೆಂಬರ್ 18ರಂದು ವಿಜಯೋತ್ಸವದಿಂದ ನಗರವನ್ನು ಪ್ರವೇಶವನ್ನು ಮಾಡಿದನು ಎಂದು ಊಹಿಸುತ್ತಾರೆ. ವಾಸ್ಕೋ ಡ ಗಾಮಾ ತನ್ನ ಪ್ರೀತಿಯ ಸಹೋದರನ ಮರಣದಿಂದ ದುಃಖಿತನಾಗಿ ಬೆಲೆಮ್‌ಗೆ ಆಗಮಿಸಿದ ನಂತರ ಒಂಬತ್ತು ದಿನ ಎಲ್ಲೂ ಹೋಗದೆ ಏಕಾಂತದಲ್ಲಿ ಕಳೆಯುತ್ತಾನೆ ಎಂದು ಬ್ಯಾರೋಸ್ ಮಾಡಿರುವ ಹೇಳಿಕೆಯನ್ನು ಭಾಗಶಃವಾಗಿ ಆಧಾರವಾಗಿಟ್ಟುಕೊಂಡು ಅರಾಗ್ವೋ ಈ ಊಹೆಯನ್ನು ಮಾಡುತ್ತಾರೆ.[100]

ನಾನು ಕೂಡ ವಾಸ್ಕೋ ಡ ಗಾಮಾ ಆಗಸ್ಟ್ 29ರಂದು ಲಿಸ್ಬನ್ ತಲುಪಿದನು ಮತ್ತು ಸೆಪ್ಟೆಂಬರ್ 8ರಂದು ವಿಜಯೋತ್ಸವದಿಂದ ನಗರವನ್ನು ಪ್ರವೇಶಿಸಿದನು ಎಂಬುದನ್ನು ಹೆಚ್ಚು ನಂಬುತ್ತೇನೆ.

[ಕ್ಯಾಲಿಕಟ್‌ನ ದಕ್ಷಿಣಕ್ಕಿರುವ ರಾಜ್ಯಗಳು.]

ಕೆಳಗಿನವುಗಳು ಕ್ಯಾಲಿಕಟ್‌ನ ದಕ್ಷಿಣ ಕರಾವಳಿ ಭಾಗದ ಕೆಲವು ರಾಜ್ಯಗಳ ಹೆಸರುಗಳು. ಇಲ್ಲಿ ಸಿಗುವ ಪ್ರತಿಯೊಂದು ಸಾಮಗ್ರಿ ಮತ್ತು ಅದರ ಬೆಲೆವನ್ನು ನಮ್ಮ ಭಾಷೆಯನ್ನು ಮಾತನಾಡುವ ಒಬ್ಬ ಅತ್ಯಂತ ವಿಶ್ವಾಸಾರ್ಹ ವ್ಯಕ್ತಿಯಿಂದ ಕಲಿತಿದ್ದೇನೆ. ಆತ ಮೂವತ್ತು ವರ್ಷಗಳ ಹಿಂದೆ ಅಲೆಕ್ಸಾಂಡ್ರಿಯಾದಿಂದ ಆ ಭಾಗಗಳಿಗೆ ಬಂದಿರುವನು.[101]

ಕ್ಯಾಲಿಕಟ್; ಇದು ನಾವು ಬಂದಿಳಿದ ಜಾಗ. ಕೆಳಗೆ ತಿಳಿಸಲಾದ ಸರಕುಗಳನ್ನು ಇಲ್ಲಿಗೆ ಕಳುಹಿಸಲಾಗುತ್ತದೆ ಮತ್ತು ಮೆಕ್ಕಾದಿಂದ ಬರುವ ಹಡಗುಗಳು ತಮ್ಮ ಸರಕುಗಳನ್ನು ಈ ನಗರಕ್ಕೆ ಕೊಂಡೊಯ್ಯುತ್ತವೆ. ಇಲ್ಲಿಯ ರಾಜನನ್ನು ಕಾಮೊಲಿಂ ಎಂದು

[100] ಜೋಸೆ ಡ ಸಿಲ್ವಾ ಮೆಂಡೆಸ್ ಲೀಲ್ (ಲಿಸ್ಬನ್ ಅಕಾಡೆಮಿಯ ಪತ್ರ ವ್ಯವಹಾರಗಳು, 1871), ಮತ್ತು ಟೆಕ್ಸೀರಾ ಡಿ ಅರಾಗ್ವೋ (ಲಿಸ್ಬನ್ ಜಿಯಾಗ್ರಫಿಕಲ್ ಸೊಸೈಟಿಯ ಸುದ್ದಿ ಪತ್ರಿಕೆ, VI, 1886, ಪುಟ 583) ನೋಡಿ.

[101] ಈ ನಂಬಲರ್ಹ ವ್ಯಕ್ತಿಯು ಅಂಜಿದಿವಾದಿಂದ ಕರೆದೊಯ್ಯಲ್ಪಟ್ಟ "ಮುಸಲ್ಮಾನ" (ಅನುಬಂಧ E ನೋಡಿ) ವ್ಯಕ್ತಿಯಾಗಿದ್ದು, ಕ್ರೈಸ್ತಧರ್ಮಕ್ಕೆ ಮತಾಂತರಗೊಂಡ ನಂತರ ಗ್ಯಾಸ್ಪರ್ ಡ ಗಾಮಾ ಎಂದು ಕರೆಯಲ್ಪಟ್ಟವನ ಹೊರತಾಗಿ ಬೇರೆ ಯಾರೂ ಆಗಿರಲು ಸಾಧ್ಯವಿಲ್ಲ.

ಕರೆಯುತ್ತಾರೆ. ಆತ ಸಹಾಯಕರನ್ನು ಒಳಗೊಂಡಂತೆ 100,000 ಸೈನಿಕರನ್ನು ಒಟ್ಟುಗೂಡಿಸಬಲ್ಲಂತಹ ಸಾಮರ್ಥ್ಯ ಹೊಂದಿದ್ದಾನೆ. ಆತನ ನೇರ ಅಧಿಕಾರದ ವ್ಯಾಪ್ತಿಯಲ್ಲಿರುವ ಸೈನಿಕರ ಸಂಖ್ಯೆ ತುಂಬಾ ಸಣ್ಣದು.

ಕೆಳಗೆ ನಾವು ಮೆಕ್ಕಾದ ಹಡಗುಗಳಲ್ಲಿ ತಂದ ಸರಕುಗಳನ್ನು ಮತ್ತು ಇಂಡಿಯಾದ ಈ ಭಾಗದಾದ್ಯಂತ ಅವುಗಳಿಗಿರುವ ಬೆಲೆಯನ್ನು ಕೊಟ್ಟಿದ್ದೇವೆ[102]:-

ತಾಮ್ರ: ಇದರ ಸುಮಾರು 30 ಪೌಂಡ್‌ಗಳಷ್ಟು ಮಿಶ್ರ ಲೋಹಕ್ಕೆ 50 ಫನೋಸ್ ಅಥವಾ 3 ಕ್ರುಜಾಡೋಗಳಷ್ಟು ಬೆಲೆ ಇದೆ.

ಬಾಕ್ವಾದ ಕಲ್ಲು[103]: ಇದಕ್ಕೆ ಇಷ್ಟೆ ತೂಕದ ಬೆಳ್ಳಿಯ ಬೆಲೆ ಇದೆ.

ಚಾಕುಗಳು: ಒಂದಕ್ಕೆ ಒಂದು ಫನೋ

ರೋಸ್‌ವಾಟರ್: ಒಂದು ಫ್ರಜಿಲಾಗೆ 50 ಫನೋಗಳು

ಪಟಿಕ (Alum): ಒಂದು ಫ್ರಜಿಲಾಗೆ 50 ಫನೋಗಳು

ಬಟ್ಟೆ (Camlot - 20-25 ಮೀಟರ್ ಉದ್ದದ ಬಟ್ಟೆ ತುಂಡುಗಳು): ಒಂದು ತುಂಡಿಗೆ 7 ಕ್ರುಜಾಡೋಗಳು

ಕೆಂಪು ಬಟ್ಟೆ, ಬಟ್ಟೆಯ ಸಣ್ಣ ಕಟ್ಟು (pequy)[1]: ಒಂದಕ್ಕೆ 2 ಕ್ರುಜಾಡೋಗಳು. [ಒಂದು ಪೆಕೆ ಅಂದರೆ ಐತಿಹಾಸಿಕವಾಗಿ 1 ರಿಂದ 2 ಮೀಟರ್ ಉದ್ದ ಮತ್ತು 0.5 ರಿಂದ 1 ಮೀಟರ್ ಅಗಲ)

ಪಾದರಸ: ಒಂದು ಫ್ರಜಿಲಾಗೆ 10 ಕ್ರುಜಾಡೋಗಳು

---

[102]ಕ್ಯಾಲಿಕಟ್‌ನ ಒಂದು ಫ್ರಜಿಲಾವು 10.4 ಕಿಲೋಗ್ರಾಂಗೆ ಸಮಾನವಾಗಿರುತ್ತದೆ; ಒಂದು ಫಣೊ 1555 ಇಸವಿಯಲ್ಲಿ 25-5/7 ರೀಸ್ (ಸುಮಾರು 7.45ಪೆನ್ಸ್) ಮೌಲ್ಯವನ್ನು ಹೊಂದಿತ್ತು ಮತ್ತು ಒಂದು ಕ್ರುಜಾಡೋವಿನ ಮೌಲ್ಯ 9 ಶಿಲ್ಲಿಂಗ್, 8 ಪೆನ್ಸ್ (9*s.* 8*d*) ಆಗಿತ್ತು. ಆದರೆ 3 ಕ್ರುಜಾಡೋಗಳನ್ನು 50 ಫಣೊಗಳಿಗೆ ಸಮಾನವಾಗಿ ಸ್ವೀಕರಿಸಿದರೆ, ಒಂದು ಫಣೊದ ಮೌಲ್ಯವು 6.96 ಪೆನ್ಸ್ ಆಗಿರುತ್ತದೆ.

[103]ನಾವು ಇದನ್ನು ಬಾಕ್ವಾ ಎಂದು ಓದುವ ಬದಲು ಬಿಸೋರ್ (ಗೋರೋಚನ) ಎಂದು ಓದಬೇಕು ಎಂದು ನಾನು ಬಲವಾಗಿ ನಂಬುತ್ತೇನೆ. ರಾಜಮನೆತನದ ಬರಹಗಾರನಾದ ಡೋಮ್ ಮ್ಯಾನುಯೆಲ್ ಕ್ಯಾಸ್ಟೈಲ್ ರಾಜನಿಗೆ ಬರೆದ ಪತ್ರದಲ್ಲಿ, ಕೊಚ್ಚಿಯ ರಾಜನು ವಾಸ್ಕೋ ಡ ಗಾಮಾಗೆ ನೀಡಿದ ಉಡುಗೊರೆಗಳಲ್ಲಿ (1502 ರಲ್ಲಿ) ಒಂದು ಹೇಸಲ್ ನಟ್ ಗಾತ್ರದ ಒಂದು ಕಲ್ಲು ಇತ್ತು; ಅದನ್ನು ಬರ್ಗೋಲ್ಡಾಫ್ ಎಂದು ಕರೆಯಲ್ಪಡುವ ಅತ್ಯಂತ ಅಪರೂಪದ ಪ್ರಾಣಿಯ ತಲೆಯಿಂದ ಹೊರತೆಗೆಯಲಾಗುತ್ತದೆ ಮತ್ತು ಇದು ಎಲ್ಲಾ ರೀತಿಯ ವಿಷಗಳಿಗೆ ಪ್ರತಿವಿಷವಾಗಿ ಕೆಲಸ ಮಾಡುತ್ತದೆ ಎಂದು ಬರೆಯುತ್ತಾನೆ.

ಬಾಸೆಲ್ ಮಿಷನ್‌ನ ರೆವರೆಂಡ್ ಜೆ.ಜೆ. ಜೌಸ್, ಬಿಸೋರ್ ಅನ್ನು ಮಲಯಾಳಂನಲ್ಲಿ ಗೋರೋಚನಂ ಎಂದು ಕರೆಯುತ್ತಾರೆ ಮತ್ತು ಅದಕ್ಕೆ "ಹಸುವಿನ ಮೆದುಳಿನಿಂದ" ತೆಗೆದದ್ದು ಎಂಬ ಅರ್ಥ ಬರುತ್ತದೆ ಎಂದು ಹೇಳಿದರು. ಗೋ ಅಂದರೆ ಹಸು ಎಂದರ್ಥ. ಇದಕ್ಕೆ ಬೆಳ್ಳಿತೂಕದ ಬೆಲೆ ಇದೆ ಮತ್ತು ಇದು ಔಷಧಿ ಮತ್ತು ಪ್ರತಿವಿಷವಾಗಿ ಬಹಳ ಮೌಲ್ಯಯುತವಾಗಿದೆ. ನನ್ನ ಗೌರವಾನ್ವಿತ ವರದಿಗಾರ ನನಗೆ ಬರ್ಗೋಲ್ಡಾಫ್ ಅಂದರೆ ಏನು ಎಂಬುದನ್ನು ಹೇಳಲು ಸಮರ್ಥನಾಗಲಿಲ್ಲ.

ಬಿಸೋರ್ ಗೆ ಅರೇಬಿಕ್ ಭಾಷೆಯಲ್ಲಿ ಇರುವ ಹೆಸರು (ಬಡೆಸರ್) ಪ್ರತಿವಿಷ ಎಂಬ ಅರ್ಥವನ್ನು ಕೊಡುತ್ತದೆ. ಈ "ಕಲ್ಲು" ಕೆಲವು ಪ್ರಾಣಿಗಳ ಕರುಳಿನಲ್ಲಿ, ವಿಶೇಷವಾಗಿ ಆಡುಗಳು ಮತ್ತು ಹುಲ್ಲೆಗಳಲ್ಲಿ ಕಂಡುಬರುತ್ತದೆ, ಹಾಗೆಯೇ ಮಂಗಗಳಲ್ಲಿಯೂ ಕೂಡ ಇದು ಕಂಡುಬರುತ್ತದೆ. ಇದು ಬಟಾಣಿ ಗಾತ್ರದಿಂದ ಹಿಡಿದು ಮುಷ್ಟಿಯ ಗಾತ್ರದ ತನಕ ಇರಬಹುದು. ಮಧ್ಯಕಾಲೀನ ಯುಗದಲ್ಲಿ, ಪೂರ್ವದೇಶದಿಂದ ಬರುವ ಈ ಬಿಸೋರ್ ಅನ್ನು ಪ್ರಬಲವಾದ ಪ್ರತಿವಿಷವಾಗಿ ಪರಿಗಣಿಸಿದ್ದರು, ಪೂರ್ವದೇಶಗಳಲ್ಲಿ ಇದಕ್ಕೆ ಈಗಲೂ ಹೆಚ್ಚಿನ ಮೌಲ್ಯವಿದೆ. ಗೋವಾ ಮೂಲದ ಬಿಸೋರ್ ಅನ್ನು ಕಸ್ತೂರಿ, ಅಂಬರ್ ಮೇಣ (ಸ್ಪರ್ಮ್ ತಿಮಿಂಗಿಲಗಳ ಕರುಳಿನಲ್ಲಿ ಉತ್ಪತ್ತಿಯಾಗುವ, ಉಷ್ಣವಲಯದ ಸಮುದ್ರದಲ್ಲಿ ತೇಲುತ್ತ ಬರುವ ಮೇಣದಂತ ಸುಗಂಧ ದ್ರವ್ಯ) ಮತ್ತು ಟ್ರಾಗಾಕಾಂತ್ (ಅಸ್ಟ್ರಾಲಗಸ್ ಗಮಿಫರ್ ಕುಲದ ಮರದಿಂದ ದೊರಕುವ ಕೆಂಪು ಅಥವಾ ಬಿಳಿಯ ಗೋಂದು) ಗೋಂದು ಸೇರಿಸಿ ಮಾಡಿದ ಒಂದು ಕೃತಕ ಉತ್ಪನ್ನವಾಗಿದೆ.

ಕೊರಂಗೊಲೀಜ಼್ [ಕೊರಂಗೊಲೋರ್][104] ಒಂದು ಕ್ರಿಶ್ಚಿಯನ್ ದೇಶವಾಗಿದ್ದು, ಇಲ್ಲಿನ ರಾಜನು ಕೂಡ ಕ್ರಿಶ್ಚಿಯನ್. ಕ್ಯಾಲಿಕಟ್‌ನಿಂದ ಸಮುದ್ರದ ಮೂಲಕ ಹಡಗಿನಲ್ಲಿ ಅನುಕೂಲಕರ ಗಾಳಿಯಲ್ಲಿ ಸಾಗಿದರೆ ಇಲ್ಲಿಗೆ ತಲುಪಲು 3 ದಿನಗಳು ಹಿಡಿಯುತ್ತದೆ. ರಾಜನು 40,000 ಸೈನಿಕರನ್ನು ಒಟ್ಟುಗೂಡಿಸಬಲ್ಲನು. ಇಲ್ಲಿ ಬಹಷ್ಟು ಕರಿಮೆಣಸು ಇದೆ, ಒಂದು ಫ್ರಜಿಲಾ ಕರಿಮೆಣಸಿನ ಬೆಲೆ 9 ಫನೋಗಳು. ಆದರೆ ಕ್ಯಾಲಿಕಟ್‌ನಲ್ಲಿ ಅದಕ್ಕೆ 14 ಫನೋಗಳಾಗುತ್ತವೆ.

ಕೋಲು (COLEU) [ಕೋಲಂ, ಕುಲಾವ್][105] ಕೂಡ ಕ್ರಿಶ್ಚಿಯನ್ ದೇಶವಾಗಿದೆ. ಕ್ಯಾಲಿಕಟ್‌ನಿಂದ ಸಮುದ್ರದ ಮೂಲಕ, ಅನುಕೂಲಕರ ಗಾಳಿಯಲ್ಲಿ ಸಾಗಿದರೆ ಇಲ್ಲಿಗೆ ತಲುಪಲು 10 ದಿನಗಳು ಬೇಕಾಗುತ್ತವೆ. ರಾಜನು 10,000 ಜನರನ್ನು ಒಟ್ಟುಗೂಡಿಸಬಲ್ಲನು. ಈ ದೇಶದಲ್ಲಿ ಕರಿಮೆಣಸಿನ ಪ್ರಮಾಣ ಕಡಿಮೆಯಿದ್ದು, ಹತ್ತಿ ಬಟ್ಟೆ ಹೆಚ್ಚಿನ ಪ್ರಮಾಣದಲ್ಲಿ ಲಭ್ಯ ಇದೆ.

ಕಾಯೆಲ್ (CAELL, Cael],[106] ಇಲ್ಲಿನ ರಾಜ ಮುಸಲ್ಮಾನನಾಗಿದ್ದು, ಜನರು ಕ್ರಿಶ್ಚಿಯನ್ನರು. ಸಮುದ್ರದ ಮೂಲಕ ಕ್ಯಾಲಿಕಟ್‌ನಿಂದ ಇಲ್ಲಿಗೆ ತಲುಪಲು 10 ದಿನಗಳು ಬೇಕಾಗುತ್ತವೆ. ರಾಜನು 4,000 ಸೈನಿಕರನ್ನು ಒಟ್ಟುಗೂಡಿಸಬಲ್ಲನು ಮತ್ತು ಆತನ ಬಳಿ 100 ಆನೆಗಳನ್ನು ಹೊಂದಿರುವ ಗಜ ಪಡೆ ಇದೆ. ಇಲ್ಲಿ ಮುತ್ತುಗಳು ಹೇರಳವಾಗಿ ಲಭ್ಯ ಇವೆ.

ಚೋಮಂದಾರಲ [ಚೋರಮಂಡಲ][107] ದಲ್ಲಿ ಕ್ರಿಶ್ಚಿಯನ್ನರು ವಾಸಿಸುತ್ತಾರೆ ಮತ್ತು ಇಲ್ಲಿನ ರಾಜನು ಕೂಡ ಕ್ರಿಶ್ಚಿಯನ್. ಅವನು 100,000 ಸೈನಿಕರನ್ನು ಒಟ್ಟುಗೂಡಿಸಬಲ್ಲನು. ಇಲ್ಲಿ ಅರಗು ಬಹಳಷ್ಟು ದೊರಕುತ್ತದೆ. ಒಂದು ಫ್ರಜಿಲಾ ಅರಗಿಗೆ ಅರ್ಧ ಕ್ರುಝಾಡೊದಷ್ಟು ಬೆಲೆ ಇದೆ. ಈ ದೇಶದಲ್ಲಿ ವ್ಯಾಪಕವಾಗಿ ಹತ್ತಿ ಬಟ್ಟೆಗಳನ್ನು ತಯಾರಿಸುತ್ತಾರೆ.

ಸೀಲಾಮ್ [ಸಿಲೋನ್] ಕ್ರಿಶ್ಚಿಯನ್ ರಾಜನ ಆಳ್ವಿಕೆಯಲ್ಲಿರುವ ಕ್ರಿಶ್ಚಿಯನ್ನರು ವಾಸಿಸುವ ಒಂದು ದೊಡ್ಡ ದ್ವೀಪವಾಗಿದೆ. ಇಲ್ಲಿಗೆ ಪ್ರಶಸ್ತ ಗಾಳಿಯಲ್ಲಿ ಕ್ಯಾಲಿಕಟ್‌ನಿಂದ ತಲುಪಲು 8 ದಿನಗಳು ಹಿಡಿಯುತ್ತವೆ, ರಾಜನು 4,000 ಜನರನ್ನು ಒಟ್ಟುಗೂಡಿಸಬಲ್ಲನು ಮತ್ತು ಯುದ್ಧಕ್ಕಾಗಿ ಮತ್ತು ಮಾರಾಟಕ್ಕಾಗಿ ಅನೇಕ ಆನೆಗಳನ್ನು ಹೊಂದಿದ್ದಾನೆ. ಇಂಡಿಯಾದ ಅತ್ಯುತ್ತಮ ದಾಲ್ಚಿನ್ನಿ ಇಲ್ಲಿ ದೊರಕುತ್ತದೆ. ಬೇರೆ ದೇಶಗಳಲ್ಲಿ[108] ಸಿಗುವ ನೀಲಮಣಿಗಳಿಗಿಂತ ಉತ್ಕೃಷ್ಟವಾದ ನೀಲಮಣಿಗಳು ಇಲ್ಲಿ ದೊರಕುತ್ತವೆ. ಉತ್ತಮ ಗುಣಮಟ್ಟದ ಮಾಣಿಕ್ಯಗಳು ಕೂಡ ದೊರಕುತ್ತವೆ ಆದರೆ ಪ್ರಮಾಣ ಕಡಿಮೆ.

ಸಮಾತರಾ (CAMATARRA) [ಸುಮಾತ್ರಾ], ಕ್ರಿಶ್ಚಿಯನ್ ದೇಶವಾಗಿದ್ದು, ಅನುಕೂಲಕರವಾದ ಗಾಳಿಯಲ್ಲಿ ಕ್ಯಾಲಿಕಟ್‌ನಿಂದ ಇಲ್ಲಿಗೆ ತಲುಪಲು 30 ದಿನಗಳು ಬೇಕಾಗುತ್ತವೆ. ರಾಜನು 4,000 ಸೈನಿಕರನ್ನು ಒಟ್ಟುಗೂಡಿಸಬಲ್ಲನು ಮತ್ತು ಅವನ ಬಳಿ 1,000 ಕುದುರೆ ಸವಾರರು ಮತ್ತು ಅವನ ಗಜಪಡೆಯಲ್ಲಿ 300 ಆನೆಗಳಿವೆ. ಈ ದೇಶದಲ್ಲಿ 8 ಕ್ರುಜಾಡೋಗಳಿಗೆ ಒಂದು

---

104 ಕ್ರಾಂಗಲೋರ್ ಅಂದರೆ ಪ್ರೊ. ಕೋಪ್ಕೆ ಪ್ರಕಾರ, ಕೊಚ್ಚಿಯ ಆಧುನಿಕ ನಗರವಾದ ಕೊಡಂಗಲ್ಲೂರನ್ನು ಉದ್ದೇಶಿಸಿ ಹೇಳಲಾಗಿದೆ. ಅಲ್ಲಿ ಒಂದು ಫ್ರಜಿಲಾವು 8.314 ಕಿಲೋಗೆ ಸಮನಾಗಿತ್ತು ಮತ್ತು ಕಾಳುಮೆಣಸನ್ನು ಖರೀದಿಸುವಾಗ ಒಂದು ಫಣೊದ ಮೌಲ್ಯ 22-8/19 ರೀಸ್ (6.5 ಪೆನ್ಸ್).

105 ಇದು ಮಾರ್ಕೊ ಪೋಲೊ ಹೇಳುವ ಕೊಯಿಲಮ್, ಫ್ರಯರ್ ಜೋರ್ಡಾನಸ್ (1330) ಹೇಳುವ ಆಧುನಿಕ ಕ್ವಿಲಾನ್, ಕೊಲಂಬಂ ಆಗಿದೆ. ಇದು ಸಿರಿಯನ್ ಕ್ರಿಶ್ಚಿಯನ್ನರ ಪ್ರಮುಖ ಸ್ಥಾನಗಳಲ್ಲಿ ಒಂದಾಗಿದೆ. ಪೋರ್ಚುಗೀಸರು 1503ರಲ್ಲಿ ಅಲ್ಲಿ ಕೋಟೆಯನ್ನು ನಿರ್ಮಿಸಿದರು.

106 ಮಾರ್ಕೊ ಪೋಲೊ ಹೇಳುವ ಕಾಯೆಲ್ (Cael)ಅನ್ನು ಕಾಲ್ಡ್‌ವೆಲ್ ತಾಮ್ರಪನ್ನಿ ನದಿಯ ಮುಖಜ ಭೂಮಿಗೆ ಸಮೀಪವಿರುವ ಕಯಾಲ್ (ಪಳೆಯ ಕಯಾಲ್) ಎಂಬ ಹಾಳುಬಿದ್ದ ಹಳ್ಳಿಯೆಂದು ಸಮರ್ಪಕವಾಗಿ ಗುರುತಿಸಿದ್ದಾರೆ; ಆದರೆ ನಮ್ಮ ಲೇಖಕರಾದ ಕೇಲ್ (Caell) ಬ್ಯಾರೋಸ್ ಹೇಳುವ ಕ್ಯಾಲೆಗ್ರಾಂಡ್ ಆಗಿದ್ದು, ಅದು ತಾಮ್ರಪನ್ನಿ ನದಿಯ ಸ್ವಲ್ಪ ದಕ್ಷಿಣಕ್ಕಿರುವ ಕಾಯಲ್ ಪಟ್ಟಣಂ ಆಗಿದೆ. (ಯೂಲ್‌ನ ಮಾರ್ಕೊ ಪೊಲೊ, ii, ಪುಟ 307 ನೋಡಿ.) ಸಿಲೋನ್ ಕರಾವಳಿಯಲ್ಲಿ ಇದಕ್ಕೆ ಸಮೀಪವಾಗಿ ಮುತ್ತು ಮೀನುಗಾರಿಕೆಯು ನಡೆಯುತ್ತದೆ.

107 ಪ್ರೊ. ಕೋಪ್ಕೆ ಪ್ರಕಾರ, ಇದು ಪಾಯಿಂಟ್ ಕ್ಯಾಲಿಮೆರ್‌ನಿಂದ ಗೋದಾವರಿಯವರೆಗೆ ವಿಸ್ತರಿಸಿದೆ.

108 ಬಾರ್ಬೋಸಾ (ಪು. 214), "ಅತ್ಯುತ್ತಮ ನೀಲಮಣಿಗಳು ಸಿಲೋನ್‌ನಲ್ಲಿ ಕಂಡುಬರುತ್ತವೆ," ಹಾಗೆಯೇ "ಅನೇಕ ಮಾಣಿಕ್ಯಗಳು", ಆದರೆ ಪೆಗುಗಿಂತ ಕಡಿಮೆ ಗುಣಮಟ್ಟ ಉಳ್ಳವುಗಳು" ಎಂದು ಹೇಳುತ್ತಾರೆ.

ಫ್ರಾಜಿಲಾದಷ್ಟು ಹೆಣೆದ ರೇಷ್ಮೆ ನೂಲು[109] ಸಿಗುತ್ತದೆ. ಇಲ್ಲಿ ಬಹಳಷ್ಟು ಅರಗು ಕೂಡ ಲಭ್ಯ ಇದೆ. 20 ಫ್ರಾಜಿಲಾಗಳ ಒಂದು ಬಹಾರ್ ಗೆ ಹತ್ತು ಕ್ರುಜಾಡೋಗಳಷ್ಟು ಬೆಲೆ ಇದೆ.

ಶರ್ನೂಝ್ (XARNAUZ) [ಸಿಯಾಮ್][110]: ಇಲ್ಲಿ ಕ್ರಿಶ್ಚಿಯನ್ನರು ವಾಸವಿದ್ದು, ರಾಜ ಕೂಡ ಕ್ರಿಶ್ಚಿಯನ್ ಆಗಿರುವನು. ಕ್ಯಾಲಿಕಟ್‌ನಿಂದ ಪ್ರಶಸ್ತ ಗಾಳಿ ಇದ್ದಲ್ಲಿ ಇಲ್ಲಿಗೆ ತಲುಪಲು 50 ದಿನಗಳು ಹಿಡಿಯುತ್ತವೆ. ರಾಜನು 20,000 ಸೈನಿಕರು ಮತ್ತು 4,000 ಕುದುರೆಗಳನ್ನು ಒಟ್ಟುಗೂಡಿಸಬಲ್ಲನು ಮತ್ತು ಆತನ ಬಳಿ 400 ಆನೆಗಳ ಗಜ ಪಡೆ ಇದೆ. ಈ ದೇಶದಲ್ಲಿ ಅಂಟು ಸಾಂಬ್ರಾಣಿ (benzoin)[111] ಸಾಕಷ್ಟು ಲಭ್ಯ ಇದ್ದು, ಒಂದು ಫ್ರಜಿಲಾಗೆ ಮೂರು ಕ್ರುಜಾಡೋಗಳಷ್ಟು ಬೆಲೆ ಇದೆ. ಹಾಗೆಯೇ ಸಾಕಷ್ಟು ಅಗರು ಮರ(aloe)[112] ಕೂಡ ಲಭ್ಯ ಇದ್ದು, ಅದರ ಒಂದು ಫ್ರಜಿಲಾಗೆ 25 ಕ್ರುಝಾಡೋಗಳಷ್ಟು ಬೆಲೆ ಬಾಳುತ್ತದೆ.

ತೆನಾಸೆರಿಮ್ (TENACARS)[113]: [ದಕ್ಷಿಣ ಬರ್ಮಾದಲ್ಲಿರುವ ಬಂದರು ಪ್ರದೇಶ]: ಇಲ್ಲಿಯ ಜನರು ಮತ್ತು ಇಲ್ಲಿಯ ರಾಜ ಕ್ರಿಶ್ಚಿಯನ್ನರಾಗಿದ್ದಾರೆ. ಅನುಕೂಲಕರ ಗಾಳಿಯಿದ್ದಲ್ಲಿ ಕ್ಯಾಲಿಕಟ್‌ನಿಂದ ಇಲ್ಲಿಗೆ ತಲುಪಲು 40 ದಿನಗಳು ಬೇಕಾಗುತ್ತವೆ. ರಾಜನು 10,000 ಸೈನಿಕರನ್ನು ಒಟ್ಟುಗೂಡಿಸಬಲ್ಲನು ಮತ್ತು ಆತನ ಬಳಿ 500 ಆನೆಗಳ ಗಜಪಡೆ ಇದೆ. ಈ ದೇಶದಲ್ಲಿ ಬಹಳಷ್ಟು ರಕ್ತಚಂದನ(Brazil-wood)[114] ಮರಗಳಿದ್ದು, ಇದು ಕರ್ಮಿಸ್ ಹುಳದಿಂದ ಸಿಗುವ ಗಾಢ ಕೆಂಪು ಬಣ್ಣದಷ್ಟೆ ಉತ್ತಮ ಬಣ್ಣವನ್ನು ಕೊಡುತ್ತದೆ. ಇದರ ಒಂದು ಬಹಾರ್ ಗೆ 3 ಕ್ರುಜಾಡೋಗಳಷ್ಟು ಬೆಲೆ ಇದ್ದು, ಕ್ವಾಯ್ರೊ [ಕೈರೋ] ದಲ್ಲಿ ಇದಕ್ಕೆ 60 ಕ್ರುಜಾಡೋಗಳನ್ನು ತೆರಬೇಕಾಗುತ್ತದೆ. ಹಾಗೆಯೇ ಇಲ್ಲಿ ಸ್ವಲ್ಪ ಅಗರುಮರ ಕೂಡ ಲಭ್ಯ ಇದೆ.

ಬೆಂಗಾಲಾ [ಬಂಗಾಳ][115]: ಈ ರಾಜ್ಯದಲ್ಲಿ ಮುಸ್ಲಿಮರು ಬಹಳವಿದ್ದು, ಕ್ರಿಶ್ಚಿಯನ್ನರ ಸಂಖ್ಯೆ ಕಡಿಮೆ ಇದೆ. ಇಲ್ಲಿಯ ರಾಜನು ಕ್ರಿಶ್ಚಿಯನ್. ಅವನು 20,000 ಪದಾತಿಗಳನ್ನು ಮತ್ತು 10,000 ಅಶ್ವರೋಹಿಗಳನ್ನು ಒಟ್ಟುಗೂಡಿಸಬಲ್ಲನು. ಈ ದೇಶದಲ್ಲಿ ಹತ್ತಿ ಮತ್ತು ರೇಷ್ಮೆಯಿಂದ ಮಾಡಿದ ಬಹಳಷ್ಟು ಬಟ್ಟೆ ಮತ್ತು ಸಾಕಷ್ಟು ಬೆಳ್ಳಿ ಲಭ್ಯ ಇದೆ. ಕ್ಯಾಲಿಕಟ್‌ನಿಂದ ಪ್ರಶಸ್ತ ಹವಾಮಾನದಲ್ಲಿ ಸಾಗಿದರೆ ಇಲ್ಲಿ ತಲುಪಲು 40 ದಿನಗಳು ಬೇಕಾಗುತ್ತವೆ.

---

109 ಲೇಖಕರು ಉಲ್ಲೇಖಿಸಿರುವ, ಹಾಗೆಯೇ ಬಾರ್ಬೋಸಾ ಮತ್ತು ಬ್ಯಾರೋಸ್ ಉದ್ಧರಿಸುವ ರೇಷ್ಮೆಯು ಹತ್ತಿ ಮರ(ಬಾಂಬಾಕ್ಸ್ ಮಲಬರಿಕಮ್) ದಿಂದ ದೊರೆಯುವ ಉತ್ಪನ್ನವಾಗಿದ್ದು, ಇದು ಗುಣಮಟ್ಟದಲ್ಲಿ ನಿಜವಾದ ರೇಷ್ಮೆಗಿಂತ ಕಡಿಮೆ ಗುಣಮಟ್ಟದ್ದಾಗಿದೆ.—ಕೋಪ್ಕೆ.

110 ಪ್ರೊ. ಕೋಪ್ಕೆ ಮತ್ತು ಯೂಲ್ (ಮಾರ್ಕೊ ಪೋಲೊ, ii, ಪುಟ 222) ಪ್ರಕಾರ ಇದು ಸಿಯಾಂ ಆಗಿದ್ದು, ಇದರ ಹಳೆಯ ರಾಜಧಾನಿ (ಆಯುಥಿಯಾ)ಯನ್ನು ಸೊರ್ನೌ ಅಥವಾ ಕ್ಸರ್ನೌ ಎಂದು ವರ್ಥೆಮಾ, ಜಿಯೊವಾನಿ ಡಿ ಎಂಪೊಲಿ ಮತ್ತು ಮೆಂಡೆಜ್ ಪಿಂಟೊ ಕರೆಯುತ್ತಾರೆ

111 ಸಿಯಾಮ್, ಕೊಚ್ಚಿನ್-ಚೀನಾ, ಜಾವಾ, ಸುಮಾತ್ರಾದಲ್ಲಿ ಕಂಡುಬರುವ ಸ್ಟೈರಾಕ್ಸ್ ಬೆಂಜೊಯಿನ್ (ಅಂಟು ಸಾಂಬ್ರಾಣಿ) ಮರದ ಉತ್ಪನ್ನವಾಗಿದೆ. ಇವುಗಳ ಪೈಕಿ ಸಿಯಾಂನಲ್ಲಿ ಸಿಗುವ ಉತ್ಪನ್ನ ಅತ್ಯುತ್ತಮವೆಂದು ಪರಿಗಣಿಸಲಾಗಿದೆ..

112 ಸುವಾಸನೆಯುಕ್ತ ಅಗರು ಮರದ (aloe-wood) ಇನ್ನೊಂದು ಹೆಸರು ಅಕ್ವಿಲೇರಿಯಾ ಅಗಲ್ಲೋಚಾ (*Aquilaria Agallocha (Roxb. 0)).* ಇದು ಭಾರತದ ಒಳನಾಡಿನಲ್ಲಿ, ಅದರಲ್ಲು ವಿಶೇಷವಾಗಿ ಚಂಬಾದಲ್ಲಿ ಕಂಡುಬರುತ್ತದೆ. ಅದರ ಸಂಸ್ಕೃತ ಹೆಸರು, ಅಗುರು, ಅದು ಅಗಿಲಾ ಮತ್ತು ಅಕ್ವಿಲಾ ಆಗಿ ಅಪಭ್ರಂಶವಾಗಿದೆ; ಮತ್ತು ಆದ್ದರಿಂದ ಅದರ ಲ್ಯಾಟಿನ್ ಮತ್ತು ಪೋರ್ಚುಗೀಸ್ ಹೆಸರು "ಈಗಲ್‌ವುಡ್". (ಯೂಲ್‌ನ ಮಾರ್ಕೊ ಪೋಲೊ, ii, ಪುಟ 215.)

113 ಪ್ರೊ. ಕೋಪ್ಕೆ ಟೆನಾಕಾರ್ ಅನ್ನು ಟೆನಾಸ್ಸೆರಿಂ ಎಂದು ಗುರುತಿಸುತ್ತಾರೆ, ಇದು ಒಂದು ಕಾಲಕ್ಕೆ ತುಂಬ ದೊಡ್ಡ ವಾಣಿಜ್ಯ ಕೇಂದ್ರವಾಗಿದ್ದು, ಇದರ ಮೂಲಕವಾಗಿ ಸಿಯಾಮ್‌ನ ಉತ್ಪನ್ನಗಳು ಹೊರ ಜಗತ್ತನ್ನು ತಲುಪುತ್ತಿದ್ದವು.

114 ರಕ್ತಚಂದನ(Brazil-wood) ಯುರೋಪಿನಲ್ಲಿ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಲಿಗ್ನಮ್ ಪ್ರಿಸಿಲ್ಲಮ್ ಎಂಬ ಹೆಸರಿನಿಂದ ಮೊದಲ ಬಾರಿಗೆ ಪರಿಚಯಿಸಲ್ಪಟ್ಟಿತು. ಬಣ್ಣವನ್ನು ಕೊಡುವ ಈ ಮರದ ವಿಶಿಷ್ಟ ತಳಿಯನ್ನು ಸಪಾನ್ ಮರ (*Caesalpinia sappan*) ಎಂದು ಕರೆಯುತ್ತಾರೆ ಮತ್ತು ಇದು ವಿಶೇಷವಾಗಿ ಸಿಯಾಮ್ ನಲ್ಲಿ ಕಂಡುಬರುತ್ತದೆ.

115 ಇದು ನಿಸ್ಸಂದೇಹವಾಗಿ ಬಂಗಾಳವಾಗಿದೆ, ಇದರ ರಾಜಧಾನಿ ಚಟಿಗಮ್ (ಚಿತ್ತಗಾಂಗ್).

ಮೆಲೆಕ್ವಾ [ಮಲಕ್ಕಾ]: ಕ್ರಿಶ್ಚಿಯನ್ ರಾಜನ ಆಳ್ವಿಕೆಯಲ್ಲಿರುವ ಕ್ರಿಶ್ಚಿಯನ್ನರ ದೇಶ. ಅನುಕೂಲಕಕರ ಗಾಳಿಯಿದ್ದಲ್ಲಿ ಕ್ಯಾಲಿಕಟ್‌ನಿಂದ ಇಲ್ಲಿಗೆ ತಲುಪಲು 40 ದಿನಗಳು ಬೇಕಾಗುತ್ತವೆ. ರಾಜನು 1,200 ಕುದುರೆ ಸೇರಿದಂತೆ 10,000 ಸೈನಿಕರನ್ನು ಒಟ್ಟುಗೂಡಿಸಬಲ್ಲನು. ಎಲ್ಲಾ ಲವಂಗ[116] ಇಲ್ಲಿಂದ ಪೂರೈಕೆಯಾಗುತ್ತದೆ. ಇದಕ್ಕೆ ಸ್ಥಳದಲ್ಲೇ ಒಂದು ಬಹಾರ್ ಗೆ[117] 9 ಕ್ರುಜಾಡೋಗಳಷ್ಟು ಬೆಲೆ ಇದೆ, ಹಾಗೆಯೇ ಜಾಯಿಕಾಯಿ ಕೂಡ. ಅದಕ್ಕೂ ಲವಂಗದಷ್ಟೆ ಬೆಲೆ ಇದೆ. ಇಲ್ಲಿ ಬಹಳಷ್ಟು ಪಿಂಗಾಣಿ, ರೇಷ್ಮೆ ಮತ್ತು ಸಾಕಷ್ಟು ತವರ ಕೂಡ ಸಿಗುತ್ತದೆ. ಇಲ್ಲಿ ತವರದಲ್ಲಿ ನಾಣ್ಯಗಳನ್ನು ಠಂಕಿಸುತ್ತಾರೆ. ಈ ನಾಣ್ಯಗಳು ಭಾರವಾಗಿರುತ್ತವೆ, ಅವುಗಳಿಗೆ ಹೆಚ್ಚಿನ ಮೌಲ್ಯ ಇಲ್ಲ. 3 ಫ್ರಾಜಿಲಾದ ಮೌಲ್ಯ ಕೇವಲ ಒಂದು ಕ್ರುಝಾಡೋ ಆಗಿದೆ. ಈ ದೇಶದಲ್ಲಿ ಅನೇಕ ದೊಡ್ಡ ಗಾತ್ರದ ಗಿಳಿಗಳಿವೆ ಮತ್ತು ಅವುಗಳ ಪುಕ್ಕಗಳು ಬೆಂಕಿಯಂತೆ ಕೆಂಪು ಬಣ್ಣದ್ದಾಗಿವೆ.

ಪೆಗುಓ [ಪೆಗು]: ಇಲ್ಲಿಯ ನಿವಾಸಿಗಳು ಕ್ರಿಶ್ಚಿಯನ್ನರಾಗಿದ್ದು, ರಾಜ ಕೂಡ ಕ್ರಿಶ್ಚಿಯನ್. ಇಲ್ಲಿಯ ಜನರು ನಮ್ಮಷ್ಟೆ ಬಿಳಿ ಇದ್ದಾರೆ. ರಾಜನು 20,000 ಸೈನಿಕರನ್ನು, 10,000 ಕುದುರೆ ಸವಾರರನ್ನು ಇನ್ನುಳಿದವರು ಪದಾತಿಗಳನ್ನು ಹೊಂದಿದ್ದಾನೆ . ಈತನು 400 ಆನೆಗಳನ್ನೊಳಗೊಂಡ ಗಜಪಡೆಯನ್ನು ಒಟ್ಟುಗೂಡಿಸಬಲ್ಲನು. ಪ್ರಪಂಚದಲ್ಲಿರುವ ಎಲ್ಲಾ ಕಸ್ತೂರಿ(musk)ಯು ಇಲ್ಲಿಂದಲೇ ದೊರಕುವುದು.[118] ಮುಖ್ಯಭೂಮಿಯ ಒಂದೆಡೆಯಿಂದ ಅನುಕೂಲಕರ ಗಾಳಿಯಲ್ಲಿ ಪ್ರಯಾಣ ಮಾಡಿದರೆ ಅದರ ಇನ್ನೊಂದು ತುದಿಗೆ ತಲುಪಲು ಸುಮಾರು ನಾಲ್ಕು ದಿನಗಳು ತಗಲುವಷ್ಟು ದೊಡ್ಡನೆಯ ದ್ವೀಪವನ್ನು ಈ ರಾಜನು ಆಳುತ್ತಾನೆ. ಈ ದ್ವೀಪದಲ್ಲಿ ಜಿಂಕೆಗಳಂತಹ ಪ್ರಾಣಿಗಳಿವೆ, ಅವುಗಳ ಹೊಕ್ಕುಳಲ್ಲಿ ಈ ಕಸ್ತೂರಿಯನ್ನು ಹೊಂದಿರುವ ಚೀಲಗಳಿವೆ. ಪ್ರತಿ ವರ್ಷದ ಒಂದು ನಿರ್ದಿಷ್ಟ ಅವಧಿಯಲ್ಲಿ, ಅವುಗಳು ತಮ್ಮ ದೇಹವನ್ನು ಮರಕ್ಕೆ ಉಜ್ಜತೊಡಗುತ್ತವೆ. ಆಗ ಈ ಚೀಲಗಳು ಉದುರಿಹೋಗುತ್ತವೆ. ಆಗ ಈ ದೇಶದ ಜನರು ಅವುಗಳನ್ನು ಕಲೆಹಾಕುತ್ತಾರೆ. ಇದು ಈ ದೇಶದಲ್ಲಿ ಎಷ್ಟು ಸಮೃದ್ಧವಾಗಿ ಸಿಗುತ್ತದೆ ಎಂದರೆ ಅವರು ಒಂದು ಕ್ರುಜಾಡೋಗೆ ನಿಮಗೆ ಒಂದು ದೊಡ್ಡ ಪೆಟ್ಟಿಗೆ ತುಂಬುವಷ್ಟು ಅಂದರೆ, ನಾಲ್ಕು ದೊಡ್ಡ ಚೀಲಗಳನ್ನು ಅಥವಾ ಹತ್ತರಿಂದ ಹನ್ನೆರಡು ಸಣ್ಣ ಚೀಲಗಳನ್ನು ನೀಡುತ್ತಾರೆ. ಮುಖ್ಯ ಭೂಭಾಗದಲ್ಲಿ ಅನೇಕ ಮಾಣಿಕ್ಯಗಳು[119] ಮತ್ತು ಹೆಚ್ಚಿನ ಚಿನ್ನ ಕಂಡುಬರುತ್ತದೆ. ಇಲ್ಲಿ ಹತ್ತು ಕ್ರುಜಾಡೋಗಳಿಗೆ ನೀವು ಎಷ್ಟು ಚಿನ್ನ ಖರೀದಿ ಮಾಡುತ್ತೀರೋ ಅದಕ್ಕೆ ಕ್ಯಾಲಿಕಟ್‌ನಲ್ಲಿ ಇಪ್ಪತ್ತೈದು ಕ್ರುಜಾಂ೦ಡೋಗಳನ್ನು ಕೊಡಬೇಕಾಗುತ್ತದೆ. ಇಲ್ಲಿ ಬಿಳಿ ಮತ್ತು ಕಪ್ಪು ಬಣ್ಣದ ಎರಡು ರೀತಿಯ ಅರಗು ಸಿಗುತ್ತದೆ. ಬಿಳಿ ಅರಗಿಗೆ ಒಂದು ಫ್ರೆಜಿಲಾಗೆ ಮೂರು ಕ್ರುಜಾಡೋಗಳಷ್ಟು ಬೆಲೆ ಇದ್ದರೆ, ಕಪ್ಪು ಅರಗಿಗೆ ಕೇವಲ ಒಂದೂವರೆ ಕ್ರುಜಾಡೋ. ಇಲ್ಲಿ ನಿಮಗೆ ಹತ್ತು ಕ್ರುಜಾಡೋಗಳಿಗೆ ಸಿಗುವ ಬೆಳ್ಳಿಗೆ ನೀವು ಕ್ಯಾಲಿಕಟ್‌ನಲ್ಲಿ ಹದಿನೈದು ಕ್ರುಜಾಡೋಗಳನ್ನು ಕೊಡಬೇಕಾಗುತ್ತದೆ.

---

[116] ಲವಂಗ ಮೂಲತಃ ಮಲಕ್ಕಾದಲ್ಲಿ ಮಾತ್ರ ಕಂಡುಬರುತ್ತಿತ್ತು; ನಿಜವಾದ ಜಾಯಿಕಾಯಿ (*Myristica moschata*) ಅದೇ ದ್ವೀಪಗಳಿಂದ ಮತ್ತು ಅಲ್ಲಿಂದ ಇನ್ನೂ ಪೂರ್ವ ಪ್ರದೇಶಗಳಿಂದ ಬರುತ್ತದೆ. ಟಿನ್ ಒಂದು ಸ್ಥಳೀಯ ಉತ್ಪನ್ನವಾಗಿದ್ದು, ಈಗಲೂ ಕೂಡ ಹಾಗೆಯೇ ಇದೆ. ರೇಷ್ಮೆ ಮತ್ತು ಪಿಂಗಾಣಿ ಚೀನಾದಿಂದ ಬಂದವು.

[117] ಒಂದು ಫ್ರಜಿಲಾ 10.51 ಕಿಲೋಗೆ ಸಮನಾಗಿತ್ತು, ಒಂದು ಬಹಾರ್ 210.22 ಕಿಲೋ ಆಗಿತ್ತು. ಕ್ರುಜಾಡೊ ಬೆಳ್ಳಿಯ ನಾಣ್ಯವಾಗಿದ್ದು, ಅದರ ಮೌಲ್ಯ 360 ರೀಸ್ (8 ಶಿಲ್ಲಿಂಗ್ 8 ಪೆನ್ಸ್) ಆಗಿತ್ತು.

[118] ಬಾರ್ಬೋಸಾ (ಪು. 186) ಕಸ್ತೂರಿಯ ಕುರಿತಂತೆ ಇನ್ನೂ ಉತ್ತಮವಾದ ವಿವರಣೆಯನ್ನು ನೀಡುತ್ತಾರೆ. ಇದು ಒಳನಾಡಿನಿಂದ ಪೆಗುವನ್ನು ತಲುಪುತ್ತದೆ. ಇದು ಅಮುರ್ ನದಿ, ಚೀನಾ ಮತ್ತು ಭಾರತದ ನಡುವೆ ಇರುವ ಪರ್ವತಪ್ರದೇಶಗಳಲ್ಲಿ ಕಂಡುಬರುವ ಜಿಂಕೆಯನ್ನು ಹೋಲುವಂತಹ ಕಸ್ತೂರಿ ಮೃಗದ (*Moschus moschiferus*) ದೇಹದಿಂದ ಸ್ರವಿಸುವ ಒಂದು ದ್ರವ್ಯವಾಗಿದೆ. ಗಂಡು ಕಸ್ತೂರಿ ಮೃಗವು ಹೊಕ್ಕುಳು ಮತ್ತು ಜನನಾಂಗಗಳ ನಡುವೆ ಒಂದು ಚೀಲವನ್ನು ಹೊಂದಿದ್ದು ಅದರಲ್ಲಿ ಸುಮಾರು 50 ಗ್ರಾಂಗಳಷ್ಟು ಈ ಸ್ರಾವ ಸಂಗ್ರಹವಾಗುತ್ತದೆ.

[119] ಪೆಗುವಿನ ಉತ್ತರ ಭಾಗದಲ್ಲಿರುವ ಬರ್ಮಾ, ಇನ್ನೂ ಮಾಣಿಕ್ಯಗಳಿಗೆ ಪ್ರಸಿದ್ಧವಾಗಿದೆ.

ಅನುಕೂಲಕರ ಗಾಳಿಯಲ್ಲಿ ಕ್ಯಾಲಿಕಟ್‌ನಿಂದ ಈ ದೇಶಕ್ಕೆ ಹೋಗಲು ಮೂವತ್ತು ದಿನಗಳು ಬೇಕಾಗುತ್ತವೆ.

ಬೆಂಗ್ವಾಲಾ [ಬಂಗಾಳ][120] ಮುಸ್ಲಿಂ ರಾಜನಿದ್ದು, ಇಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರಿಬ್ಬರೂ ವಾಸಿಸುತ್ತಿದ್ದಾರೆ. ಕ್ಯಾಲಿಕಟ್‌ನಿಂದ ಅನುಕೂಲಕರ ಗಾಳಿಯಲ್ಲಿ ಪ್ರಯಾಣ ಮಾಡಿದರೆ, ಇಲ್ಲಿಗೆ ತಲುಪಲು ಮೂವತ್ತೈದು ದಿನಗಳು ಬೇಕಾಗುತ್ತವೆ. ಇಲ್ಲಿಯ ರಾಜನ ಅಧೀನದಲ್ಲಿ 25,000 ಸೈನಿಕರಿದ್ದು, ಅವರ ಪೈಕಿ 10,000 ಅಶ್ವಾರೋಹಿಗಳು ಮತ್ತು ಉಳಿದವರು ಪದಾತಿಗಳು. ಹಾಗೆಯೇ ಗಜಪಡೆಯಲ್ಲಿ 400 ಆನೆಗಳು ಇರಬಹುದು. ಈ ದೇಶದಲ್ಲಿ ಈ ಕೆಳಗಿನ ಸರಕುಗಳು ಕಂಡುಬರುತ್ತವೆ:- ಸಾಕಷ್ಟು ಜೋಳ ಮತ್ತು ಹೆಚ್ಚಿನ ಮೌಲ್ಯದ ಬಟ್ಟೆ. ಇಲ್ಲಿ ಹತ್ತು ಕ್ರುಜಾಡೋಗಳಿಗೆ ನೀವು ಖರೀದಿಸಬಹುದಾದ ಬಟ್ಟೆಗೆ ಕ್ಯಾಲಿಕಟ್‌ನಲ್ಲಿ ನಲವತ್ತು ಕ್ರುಜಾಡೋಗಳನ್ನು ಕೊಡಬೇಕಾಗುತ್ತದೆ. ಇಲ್ಲಿ ಸಾಕಷ್ಟು ಬೆಳ್ಳಿಯೂ ಲಭ್ಯ ಇದೆ.

ಕೊನಿಮಾತಾ (CONIMATA)[121] *ಇಲ್ಲಿಯ ರಾಜ* ಕ್ರಿಶ್ಚಿಯನ್ ಆಗಿದ್ದು, ಇಲ್ಲಿಯ ನಿವಾಸಿಗಳು ಕೂಡ ಕ್ರಿಶ್ಚಿಯನ್ ಆಗಿದ್ದಾರೆ. ಇಲ್ಲಿಗೆ ತಲುಪಲು ಅನುಕೂಲಕರ ಗಾಳಿಯಲ್ಲಿ ಕ್ಯಾಲಿಕಟ್‌ನಿಂದ ಐವತ್ತು ದಿನಗಳು ತಗಲುತ್ತವೆ. ರಾಜನು ಐದು ಅಥವಾ ಆರು ಸಾವಿರ ಜನರನ್ನು ಒಟ್ಟುಗೂಡಿಸಬಲ್ಲನು ಮತ್ತು ಒಂದು ಸಾವಿರ ಸಾಮರ್ಥ್ಯದ ಗಜಪಡೆ ಹೊಂದಿದ್ದಾನೆ. ಈ ದೇಶದಲ್ಲಿ ಅನೇಕ ನೀಲಮಣಿಗಳು ಮತ್ತು ಸಾಕಷ್ಟು ರಕ್ತಚಂದನದ ಮರಗಳಿವೆ.

ಪದೇರ್ (PATER):[122] ಕ್ರಿಶ್ಚಿಯನ್ ನಿವಾಸಿಗಳನ್ನು ಮತ್ತು ಕ್ರಿಶ್ಚಿಯನ್ ರಾಜನನ್ನು ಹೊಂದಿದೆ ಮತ್ತು ಒಬ್ಬನೇ ಒಬ್ಬ ಮುಸಲ್ಮಾನ ಇಲ್ಲ. ರಾಜನು ನಾಲ್ಕು ಸಾವಿರ ಸೈನಿಕರನ್ನು ಒಟ್ಟುಗೂಡಿಸಬಲ್ಲನು ಮತ್ತು ಅವನ ಬಳಿ ನೂರು ಆನೆಗಳ ಗಜಪಡೆ ಇದೆ. ಈ ದೇಶದಲ್ಲಿ ಹೆಚ್ಚು ರುಬಾಬ್ ಕಂಡುಬರುತ್ತದೆ. ಇದರ ಒಂದು ಫ್ರಜಿಲಾಗೆ ಸ್ಥಳದಲ್ಲಿಯೇ ಒಂಬತ್ತು ಕ್ರುಜಾಡೋಗಳಷ್ಟು ಬೆಲೆ ಇದೆ. ಇಲ್ಲಿ ಅನೇಕ ಸ್ಪಿನೆಲ್ ಮಾಣಿಕ್ಯಗಳು ಮತ್ತು ಸಾಕಷ್ಟು ಅರಗು ದೊರಕುತ್ತದೆ. ಇದರ ಒಂದು ಬಹಾರ್ ಗೆ ನಾಲ್ಕು ಕ್ರುಜಾಡೋಗಳನ್ನು ಕೊಡಬೇಕಾಗುತ್ತದೆ. ಇಲ್ಲಿಗೆ ತಲುಪಲು ಪ್ರಶಸ್ತ ಗಾಳಿಯಲ್ಲಿ ಕ್ಯಾಲಿಕಟ್‌ನಿಂದ ಐವತ್ತು ದಿನಗಳು ಹಿಡಿಯುತ್ತವೆ.

ಆನೆಗಳ ಬಗ್ಗೆ.

ಈ ದೇಶದಲ್ಲಿ ಆನೆಗಳು ಹೇಗೆ ಹೋರಾಡುತ್ತವೆ.

ಅವರು ನಾಲ್ಕು ಜನರು ಕುಳಿತುಕೊಳ್ಳಬಹುದಾದ ಒಂದು ಗುಡಾರ ಕಟ್ಟಿ ಅದನ್ನು ಆನೆಯ ಬೆನ್ನಿಗೇರಿಸಿ, ಅದರಲ್ಲಿ ನಾಲ್ಕು ಜನರು ಹತ್ತಿ ಕುಳಿತುಕೊಳ್ಳುತ್ತಾರೆ. ಆನೆಯ ಪ್ರತಿ ದಂತಕ್ಕೆ ಐದು ಒರೆ ರಹಿತ ಖಡ್ಗಗಳನ್ನು ಜೋಡಿಸಲಾಗಿರುತ್ತದೆ, ಎರಡು ದಂತಗಳಿಗೆ ಸೇರಿ ಹತ್ತು ಖಡ್ಗಗಳು. ಇದು ಇವುಗಳನ್ನು ಎಷ್ಟು ಆಕ್ರಮಣಕಾರಿಯಾಗಿಸುತ್ತದೆ ಎಂದರೆ, ಯುದ್ಧದ ಸಮಯದಲ್ಲಿ

---

120 ಇದು ಬೆಂಗಾಲದ ಬಗ್ಗೆ ಈಗಾಗಲೇ ಹೇಳಲಾಗಿರುವ ವಿವರಣೆಯ ಪುನರಾವರ್ತನೆಯಾಗಿರುವಂತಿದೆ.

121 ಪ್ರೊ. ಕೋಪ್ಕೆ ಇದನ್ನು ತಿಮೋರ್ ಎಂದು ಹೇಳುತ್ತಾರೆ; ಅಲ್ಲಿ ಕ್ಯಾಮನಾಕಾ ಎಂಬ ಕೋಟೆ ಇದೆ. ಆದರೆ ಇದನ್ನು ಒಪ್ಪುವುದು ಕಷ್ಟ, ಏಕೆಂದರೆ ತಿಮೋರ್ ನಲ್ಲಿ ಯಾವುದೇ ಆನೆಗಳಿಲ್ಲ. "ಕೋನಿಮಾತಾ" ಎಂದರೆ ಸುಮಾತ್ರ ಎಂಬುದು ನನ್ನ ಅಭಿಮತ. ಇದು ಪೆದಿರ್ ಗೆ ತಾಗಿಕೊಂಡಿರುವ ಉತ್ತರ ಸುಮಾತ್ರದ ಒಂದು ಸಣ್ಣ ರಾಜ್ಯ. ಪಾದೇರ್ ಮತ್ತು ಕೊನಿಮಾತಾ ತಲುಪಲು ಬೇಕಾಗುವ ಸಮಯ ಒಂದೇ, ಅಂದರೆ, ಐವತ್ತು ದಿನಗಳು ಎಂದು ಹೇಳಲಾಗಿದೆ. ಇದು ಹೌದಾದಲ್ಲಿ ಸುಮಾತ್ರಾ ಮತ್ತು ಬಂಗಾಳದ ಕುರಿತು ಮಾಹಿತಿ ಪುನರಾರ್ವತನೆಯಾಗಿದೆ.

122 ಇದು ಉತ್ತರ ಸುಮಾತ್ರಾದಲ್ಲಿನ ಸಣ್ಣ ರಾಜ್ಯವಾದ ಪೆಡಿರ್ ಎಂದು ತೋರುತ್ತದೆ. ವರ್ತೆಮಾ ಇಲ್ಲಿಗೆ ಭೇಟಿ ಕೊಟ್ಟಾಗ ಇದನ್ನು ಕ್ರೈಸ್ತೇತರ ರಾಜನೊಬ್ಬನು ಆಳುತ್ತಿದ್ದರೂ, ಇಲ್ಲಿಯ ಬಹುತೇಕ ನಿವಾಸಿಗಳು ಮಹಮ್ಮದೀಯರಾಗಿದ್ದರು. ರುಬಾಬ್ (*Rheum officinale*) ಕೇವಲ ಪಶ್ಚಿಮ ಮತ್ತು ವಾಯುವ್ಯ ಚೀನಾ ಮತ್ತು ಟಿಬೆಟ್ ನಲ್ಲಿ ಮಾತ್ರ ಕಂಡುಬರುತ್ತದೆ.ಲಾಕ್ಕ ಮರ(ಅರಗು)ವು ಸುಮಾತ್ರಾದ ಸ್ಥಳೀಯ ವೃಕ್ಷವಾಗಿದೆ.

ಸಾಧ್ಯವಿದ್ದಷ್ಟು ಮಟ್ಟಿಗೆ ಯಾರೂ ಅವುಗಳ ಆಕ್ರಮಣವನ್ನು ಎದುರು ನೋಡುವುದಿಲ್ಲ. ಅದರ ಮೇಲೆ ಸವಾರಿ ಮಾಡುವವರು ಏನು ಮಾಡಬೇಕು ಎಂದು ಹೇಳುತ್ತಾರೋ ಅದನ್ನು ಅದು ಒಂದು ಬುದ್ಧಿವಂತ ಜೀವಿಯಂತೆ ಮಾಡುತ್ತದೆ. "ಇವನನ್ನು ಕೊಲ್ಲು, ಅಥವಾ ಈ ಕೆಲಸ ಅಥವಾ ಆ ಕೆಲಸ ಮಾಡು", ಅಂದರೆ ಅದನ್ನು ಮಾಡುತ್ತದೆ.

ದಟ್ಟ ಕಾಡುಗಳಲ್ಲಿ ಅವರು ಆನೆಗಳನ್ನು ಹೇಗೆ ಸೆರೆಹಿಡಿಯುತ್ತಾರೆ.

ಅವರು ಕಾಡು ಆನೆಯನ್ನು ಹಿಡಿಯಲು ಬಯಸಿದಾಗ, ಪಳಗಿದ ಹೆಣ್ಣು ಆನೆಯನ್ನು ತೆಗೆದುಕೊಂಡು ಕಾಡಾನೆಗಳು ಓಡಾಡುವ ಹಾದಿಯಲ್ಲಿ ದೊಡ್ಡ ಗುಂಡಿ(ಖೆಡ್ಡಾ)ಯನ್ನು ತೋಡುತ್ತಾರೆ ಮತ್ತು ಅದನ್ನು ರೆಂಬೆಕೊಂಬೆಗಳಿಂದ ಮುಚ್ಚುತ್ತಾರೆ. ನಂತರ ಅವರು ಹೆಣ್ಣು ಆನೆಗೆ, "ಹೋಗು! ನಿನಗೆ ಆನೆ ಭೇಟಿಯಾದರೆ, ಅದು ಈ ಗುಂಡಿಗೆ ಬೀಳುವ ರೀತಿಯಲ್ಲಿ ಅದನ್ನು ಆಕರ್ಷಿಸು. ಆದರೆ ನೀನೇ ಅದರಲ್ಲಿ ಬೀಳದಂತೆ ಎಚ್ಚರ ವಹಿಸು," ಎಂದು ಹೇಳಿ ಕಳುಹಿಸುತ್ತಾರೆ. ನಂತರ ಅದು ಹೋಗುತ್ತದೆ ಮತ್ತು ತನಗೆ ಹೇಳಿದಂತೆ ಮಾಡುತ್ತದೆ. ಗಂಡಾನೆ ಭೇಟಿಯಾದರೆ ಅದು ಗುಂಡಿಗೆ ಬೀಳುವ ರೀತಿಯಲ್ಲಿ ಅದನ್ನು ಸೆಳೆಯುತ್ತದೆ. ಗುಂಡಿಯು ತುಂಬಾ ಆಳವಾಗಿರುತ್ತದೆ. ಸಹಾಯವಿಲ್ಲದೆ ಗಂಡಾನೆಗೆ ಅದರಿಂದ ಹೊರಬರಲು ಸಾಧ್ಯವಾಗುವುದಿಲ್ಲ.

ಗುಂಡಿಯಿಂದ ಹೇಗೆ ಹೊರತೆಗೆದು ಪಳಗಿಸುತ್ತಾರೆ

ಆನೆಯು ಈ ಗುಂಡಿಗೆ ಬಿದ್ದ ನಂತರ, ಐದು ಅಥವಾ ಆರು ದಿನಗಳ ಕಾಲ ಅದಕ್ಕೆ ಏನೂ ತಿನ್ನಲು ಕೊಡುವುದಿಲ್ಲ. ಆಮೇಲೆ ಒಬ್ಬ ಆಳು ಪ್ರತಿ ದಿನ ಅದಕ್ಕೆ ಸ್ವಲ್ಪ ಸ್ವಲ್ಪವೇ ಆಹಾರ ಕೊಡುತ್ತಾ ಬರುತ್ತಾನೆ. ದಿನದಿಂದ ದಿನಕ್ಕೆ, ಅದು ತಾನೇ ತಿನ್ನಲು ತೊಡಗುವ ತನಕ ಅದಕ್ಕೆ ಕೊಡುವ ಆಹಾರ ಹೆಚ್ಚಿಸುತ್ತಾ ಬರುತ್ತಾರೆ. ಇದು ಸುಮಾರು ಒಂದು ತಿಂಗಳ ಕಾಲ ಮುಂದುವರಿಯುತ್ತದೆ, ಈ ಅವಧಿಯಲ್ಲಿ ಅದಕ್ಕೆ ಆಹಾರವನ್ನು ತರುವವರು ಕ್ರಮೇಣ ಅದನ್ನು ಪಳಗಿಸುತ್ತಾ ಹೋಗುತ್ತಾರೆ. ಕೊನೆಗೆ ಅವರು ಗುಂಡಿಗೆ ಇಳಿಯುವ ಸಾಹಸ ಮಾಡುತ್ತಾರೆ. ಆ ಆಳು ಆನೆ ದಂತಗಳ ಮೇಲೆ ತನ್ನ ಕೈಗಳನ್ನು ಇಡಲು ಆನೆ ಬಿಡುವವರೆಗೆ ಹಲವಾರು ದಿನಗಳ ಕಾಲ ಹೀಗೇ ಮುಂದುವರಿಯುತ್ತದೆ. ನಂತರ ಅವನು ಗುಂಡಿಗೆ ಇಳಿದು ಆನೆಯ ಕಾಲುಗಳಿಗೆ ಭಾರವಾದ ಸರಪಳಿಗಳನ್ನು ಹಾಕುತ್ತಾನೆ. ಈ ಸ್ಥಿತಿಯಲ್ಲಿ ಅವರು ಅದಕ್ಕೆ ಎಷ್ಟು ಚೆನ್ನಾಗಿ ತರಬೇತಿ ನೀಡುತ್ತಾರೆಂದರೆ ಅದು ಮಾತನಾಡುವುದೊಂದನ್ನು ಹೊರತುಪಡಿಸಿ, ಅವರು ಕಲಿಸಿದೆಲ್ಲವಲ್ಲೂ ಕಲಿಯುತ್ತದೆ.

ಈ ಆನೆಗಳನ್ನು ಕುದುರೆಗಳಂತೆ ಲಾಯದಲ್ಲಿ ಇರಿಸಲಾಗುತ್ತದೆ ಮತ್ತು ಉತ್ತಮವಾದ ಆನೆಯ ಬೆಲೆ 2,000 ಕ್ರುಜಾಡೋಗಳಷ್ಟಿದೆ.[123]

ಅಲೆಕ್ಸಾಂಡ್ರಿಯಾದಲ್ಲಿನ ಮಾರುಕಟ್ಟೆ ಬೆಲೆಗಳು[124]

---

[123] £966 ಎಂದು ಹೇಳಬಹುದು.

[124]ಈ ಮೌಲ್ಯಗಳನ್ನು ಲೆಕ್ಕಾಚಾರ ಮಾಡುವಾಗ ನಾವು ಒಂದು ಕ್ವಿಂಟಾಲ್ ಅಂದರೆ 100 ಪೌಂಡ್‌ಗಳು, ಬಹಾರ್ = 460 ಪೌಂಡ್‌ಗಳು, ರೇಟಲ್ = 1 ಪೌಂಡ್. ಕ್ರುಜಾಡೋ = 9 ಶಿಲ್ಲಿಂಗ್ 8ಪೆನ್ಸ್ ಎಂದು ಅಂದಾಜಿಸಿದ್ದೇವೆ.

ಈ ಬೆಲೆಗಳನ್ನು ಕ್ಯಾಲಿಕಟ್ ಗೆ ಸಂಬಂಧಿಸಿ ಡುವಾರ್ಟೆ ಬಾರ್ಬೋಸಾ ನೀಡಿದ ಬೆಲೆಗಳೊಂದಿಗೆ ಹೋಲಿಸುವುದು ಆಸಕ್ತಿದಾಯಕವಾಗಿದೆ. ಒಂದು ಫಣೊ 6.5ಪೆನ್ಸ್ ಮೌಲ್ಯದ್ದಾಗಿದೆ ಎಂದು ನಾವು ಅಂದಾಜಿಸಿದರೆ, ಅದು ಪ್ರತಿ ಪೌಂಡ್‌ಗೆ ಈ ಕೆಳಗಿನಂತೆ ನಮಗೆ ಲಭ್ಯವಾಗುತ್ತದೆ:-ದಾಲ್ಚಿನ್ನಿ, 4.3

						ಪ್ರತಿ ಪೌಂಡ್ ನ ಮೌಲ್ಯ		
						£	*s.*	*D*
ಒಂದು	ಕ್ವಿಂಟಾಲ್	ದಾಲ್ಚಿನ್ನಿ	ಬೆಲೆ	25	ಕ್ರುಜ಼ಾಡೋಗಳು		2	5
“	“	ಲವಂಗ	“	20	“		1	11
“	*“*	*ಕರಿಮೆಣಸು*	“	15	“		1	5
”	“	ಶುಂಠಿ	“	21	“		2	0
(ಕ್ಯಾಲಿಕಟ್ ನಲ್ಲಿ ಒಂದು ಕ್ವಿಂಟಾಲ್ ಗೆ ಸಮವಾಗಿರುವ ಒಂದು ಬಹಾರ್ ಬೆಲೆ 20 ಕ್ರುಜ಼ಾಡೋಗಳು)							0	5
ಒಂದು	ಕ್ವಿಂಟಾಲ್	ಜಾಯಿಕಾಯಿ	ಬೆಲೆ	16	“	0	1	7
		ಅರಗು	“	25	“	0	2	5
		ರಕ್ತ ಚಂದನ	“	10	“	0	1	0
ಒಂದು	ರಾಟೆಲ್	ರೇವಲ್ಚಿನ್ನಿ	“	12	“	5	16	0
ಒಂದು	ಮಿಟಿಕಲ್	ಕಸ್ತೂರಿ	“	1	“	50	5	4
ಒಂದು	ರಾಟೆಲ್	ಅಗರು ಮರ	“	2	“	0	19	4
ಒಂದು	ರಾಟೆಲ್	ಸಾಂಬ್ರಾಣಿ	“	1	“	0	9	8
ಒಂದು	ರಾಟೆಲ್	ಅಗರುಬತ್ತಿ	“	2	“	0	0	2 1/2
(ಮೆಕ್ಕಾದಲ್ಲಿ ಒಂದು ಬಹಾರಿನ ಮೌಲ್ಯ 2 ಕ್ರುಜ಼ಾಡೋಗಳು)			“			0	0	½

ಪೆನ್ಸ್.; ಲವಂಗ, 7.2 ಪೆನ್ಸ್ ರಿಂದ 8.3 ಪೆನ್ಸ್; ಮೆಣಸು, 2.9 ರಿಂದ 3.3 ಪೆನ್ಸ್; ಶುಂಠಿ, 0.5 ರಿಂದ 0.9 ಪೆನ್ಸ್; ಜಾಯಿಕಾಯಿ, 3.0 ರಿಂದ 3.36 ಪೆನ್ಸ್; ಅರಗು, 3.6 ರಿಂದ 5.2 ಪೆನ್ಸ್; ರುಬಾಬ್, 9 ಶಿಲ್ಲಿಂಗ್ 9 ಪೆನ್ಸ್ ರಿಂದ 11 ಶಿಲ್ಲಿಂಗ್; ಕಸ್ತೂರಿ, £15 11 ಶಿಲ್ಲಿಂಗ್; ಅಗರು ಮರ, 24 ಶಿಲ್ಲಿಂಗ್ 7 ಪೆನ್ಸ್; ಧೂಪದ್ರವ್ಯ, 0.9 ಪೆನ್ಸ್ ರಿಂದ 1.5 ಪೆನ್ಸ್. ಈ ಪ್ರತಿಯೊಂದು ಸರಕುಗಳನ್ನು ಒಂದು ಪೌಂಡ್ ನಷ್ಟು ಖರೀದಿಸುವವರು ಕ್ಯಾಲಿಕಟ್ ನಲ್ಲಿ £17 13 ಶಿಲ್ಲಿಂಗ್ 6 ಪೆನ್ಸ್ ಪಾವತಿಸಿದರೆ, ಅಲೆಕ್ಸಾಂಡ್ರಿಯಾದಲ್ಲಿ ಅದಕ್ಕೆ £57 12 ಶಿಲ್ಲಿಂಗ್ 8 ಪೆನ್ಸ್ ನಷ್ಟು ಬೆಲೆಗೆ ಮಾರುತ್ತಾರೆ. ಅಂದರೆ 210% ದಷ್ಟು ಬೆಲೆಯಲ್ಲಿ ಹೆಚ್ಚಳವಾಗಿರುತ್ತದೆ. (Lord Stanley of Alderley's version of *Duarte Barbosa*, Hakluyt Society, 1866, p. 219 ನೋಡಿ)
ಲಂಡನ್‌ನಲ್ಲಿ ಪ್ರಸ್ತುತ ಈ ಸರಕುಗಳ ಚಿಲ್ಲರೆ ಮಾರಾಟ ದರ ಈ ಕೆಳಗಿನಂತಿದೆ (ಪ್ರತಿ ಪೌಂಡ್‌ಗೆ): ದಾಲ್ಚಿನ್ನಿ, 1 ಶಿಲ್ಲಿಂಗ್ 8 ಪೆನ್ಸ್; ಲವಂಗ, 1 ಶಿಲ್ಲಿಂಗ್ 6 ಪೆನ್ಸ್; ಮೆಣಸು, 7½ ಪೆನ್ಸ್ ನಿಂದ 10½ ಪೆನ್ಸ್; ಶುಂಠಿ, 10 ಪೆನ್ಸ್ ನಿಂದ 1 ಶಿಲ್ಲಿಂಗ್ 4 ಪೆನ್ಸ್; ಜಾಯಿಕಾಯಿ, 2 ಶಿಲ್ಲಿಂಗ್ 6ಪೆನ್ಸ್ ನಿಂದ 3ಶಿಲ್ಲಿಂಗ್; ಅರಗು, 8 ಪೆನ್ಸ್; ರುಬಾಬ್, 8 ಶಿಲ್ಲಿಂಗ್ ನಿಂದ 12ಶಿಲ್ಲಿಂಗ್; ಕಸ್ತೂರಿ, £ 117.

***